
# ಮನಸ್ಸಿನ ಅನಿಸಿಕೆಗಳು



ರಚನೆ : ಶ್ರೀ ಎಲ್. ಹರಿ ಖೋಡೆ

www.sriharikhoday.com

**Manasina Anisikegalu - by Sri L. Hari Khoday, Published by : ----- --------------------------------------, Bangalore**

**All rights reserved**

**Rate**

**Printed at :**
**Sneha Printers**
No. 114, 4th Cross, B.C.C. Layout, Vijayanagar 2nd Stage,
Bangalore-560 040

ಶ್ರೀ

# ಮುನ್ನುಡಿ

ಈ ಪುಸ್ತಕದ ನಾಮಾಮೃತವೇ ವಿಚಿತ್ರವೆನಿಸುವುದು. ಜೀವನದಲ್ಲಿ ಎಲ್ಲರಿಗೂ ಅನಿಸಿಕೆಗಳ ಕೋಡಿಹರಿಯುವುದು, ಅವರ ಅನಿಸಿಕೆಗಳನ್ನು ಕೇಳಿದಾಗ ಅದು ನಿಮ್ಮ ಮನಸ್ಸನ್ನು ತಟ್ಟುವುದಿಲ್ಲ.

ಇಂದಿನ ರಾಜಕಾರಣಿಗಳ ಅಥವಾ ಅಧಿಕಾರವನ್ನು ದುರುಪಯೋಗಪಡಿಸುವ ಜನಗಳ ಮನಸ್ಸಿನ ಅನಿಸಿಕೆಗಳನ್ನು ಕೇಳಿದರೆ ಅಸಹ್ಯವಾಗುವುದು. ಅವರು ಕೇವಲ ಸ್ವಾರ್ಥದ ಮುದ್ದೆಯಾಗಿರುತ್ತಾರೆ. ಜನ ಸಾಮಾನ್ಯರ ಉದ್ಧಾರಕ್ಕೆಂದೆ ನಾವು ಜನಿಸಿಸಿರುವೆವು ಎಂದು ತಿಳಿಸಿ, ಕೊನೆಗೆ ಜನಸಾಮಾನ್ಯರನ್ನು ಕಸಕ್ಕಿಂತಲೂ ಕಡೆಯಾಗಿ ನೋಡಿಕೊಳ್ಳುತ್ತಾರೆ. ದೇಶದ ಅಭ್ಯುದಯವಂತೂ ಯಾರಿಗೂ ಬೇಡ.

ಅದೇ ಹೊಟ್ಟೆತುಂಬಿರುವ, ಕೋಟಿಗಟ್ಟಲೆ ಬಾಚಿಕೊಂಡಿರುವ ವ್ಯಾಪಾರಿಗಳು ಕೂಡಾ ಅವರ ಮತ್ತು ಅವರ ಸ್ವಂತದವರ ಮುನ್ನಡೆಗೆ ಗಮನ ಕೊಡುವ ಹಾಗೆ ದಿನನಿತ್ಯದಲ್ಲಿ ಯಾರಿಗೂ ಬೇಡವಾದ ಸರ್ವಸಾಮಾನ್ಯ ಮನುಷ್ಯನನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ.

ಮೇಲೆ ಹೇಳಿದ ವಾತಾವರಣ ಇಡೀ ಭಾರತದಲ್ಲಿ ತುಂಬಿ ತುಳುಕಾಡುತ್ತಿದೆ. ಇಂತಹ ಕೆಟ್ಟ ಪರಿಸ್ಥಿತಿಯಲ್ಲಿ ನಾನು ಒಂದು ಸುಂದರವಾದ 'ಮನಸ್ಸಿನ ಅನಿಸಿಕೆಗಳು' ಎಂಬ ಹೆಸರಿನೊಂದಿಗೆ ಪ್ರಕಟವಾಗುತ್ತಿರುವ ಈ 'ಅನಿಸಿಕೆಗಳನ್ನು' ಓದಿ ನನಗೆ ಮೈ ಪುಳಕಿತವಾಯಿತು.

ಇನ್ನೂರಕ್ಕೂ ಮೇಲ್ಪಟ್ಟು ಬರೆದಿರುವ ಅನಿಸಿಕೆಗಳೆಂಬ ಕವನಗಳ ರೂಪದಲ್ಲಿರುವ ಈ ಪದ್ಯ ರೂಪದ ಬರವಣಿಗೆಯ ಸೃಷ್ಟಿಕರ್ತರು ಬೇರೆ ಯಾರು ಅಲ್ಲ "ಶ್ರೀ ಹರಿ ಖೋಡೆ"ಯೆಂಬ ಕರ್ನಾಟಕದ ಕ್ಷತ್ರಿಯ ಜನಾಂಗದ ಹೆಮ್ಮೆಯ ಪುತ್ರ, ದೊಡ್ಡ ಕೈಗಾರಿಕೋದ್ಯಮಿ. ಶತಮಾನಗಳಿಂದಲೂ ಬೆಂಗಳೂರಿನ ನಿವಾಸಿಯಾದ ಈ ಅಧಿಪತಿ ವ್ಯಾಪಾರದಲ್ಲಿ ನಿಸ್ಸೀಮರು. ವ್ಯಾಪಾರಕ್ಕೆ ಒಂದು ಗೌರವವನ್ನು ತಂದುಕೊಟ್ಟು ಇಂದು ಎಲ್ಲಾ ಕ್ಷೇತ್ರದಲ್ಲೂ ಮುಂದಿದ್ದಾರೆ.





www.sriharikhoday.com

ಇಲ್ಲಿ ನಾವೆಲ್ಲರೂ ಆಶ್ಚರ್ಯಪಡುವುದೇನೆಂದರೆ ಇಷ್ಟೊಂದು ಅಗಾಧವಾದ ವ್ಯಾಪಾರದ ಮಧ್ಯದಲ್ಲಿ ಬರವಣಿಗೆ ಮುಂದುವರಿಸಿಕೊಂಡು ಹೋಗುತ್ತಿರುವುದು ನೋಡಿದರೆ, ಅವರ ಸಾಹಿತ್ಯದ ಅಭಿರುಚಿಗೆ ಇದೊಂದು ನಿದರ್ಶನ.


ಅದೇನೆ ಇರಲಿ ಅವರ ಅನಿಸಿಕೆಗಳನ್ನು ನಿಧಾನವಾಗಿ ಒಂದೊಂದಾಗಿ ಅರ್ಥಮಾಡಿಕೊಂಡರೆ, ಹೃದಯವನ್ನು ತಟ್ಟಿ ನಮ್ಮ ಜೀವನದ ಅರ್ಥವನ್ನು ತಿಳಿಸಿ ಹೇಳುವುದು.

ಅವರ ಅನಿಸಿಕೆಗಳಲ್ಲಿ ಸಾಮಾನ್ಯ ಮನುಷ್ಯನ ಬಗ್ಗೆ ಕಳವಳ, ನಿಸರ್ಗದ ಬಗ್ಗೆ ಗೌರವ, ನ್ಯಾಯ, ನೀತಿಗಳನ್ನು ಎಲ್ಲಾ ಕ್ಷೇತ್ರದಲ್ಲೂ ಪರಿಪಾಲಿಸಬೇಕಾದ ನಿಯಮ, ದೇಶದ ಬಗ್ಗೆ ಅದೆಂತಹ ಪ್ರೀತಿ. ಇಂದಿನ ದಿನಗಳಲ್ಲಿ ಮೇಲೆ ಹೇಳಿದ ಲಕ್ಷಣಗಳು ಕಾಣಲು ಸಿಗುತ್ತಿಲ್ಲ. ನಮ್ಮ ಶ್ರೀ ಹರಿ ಖೋಡೆಯವರ ಹೃದಯದಲ್ಲಿ ವಿಶಾಲವಾದ ಭಾವನೆಗಳು ಹರಿದು ಗಂಗಾನದಿಯಂತೆ ನಮ್ಮ ಮನಸ್ಸನ್ನು ತೊಳೆದು ನಮಗೆ ಒಳ್ಳೆಯ ಭಾವನೆಗಳನ್ನು ಸೃಷ್ಟಿಸುವಂತಾಗಲಿ.

ಈ ಮುನ್ನುಡಿ ಬರೆಯಲು ಅವಕಾಶ ಮಾಡಿ ಕೊಟ್ಟ 'ಶ್ರೀ' ಯವರಿಗೂ ಮತ್ತು ಅವರ ಹಿಂದೆ ಸತತವಾಗಿ ಅವರ ಶ್ರೇಯಸ್ಸನ್ನು ಕೋರುವ ಎಲ್ಲರಿಗೂ ನಾನು ಚಿರಋಣಿ.

ನಿಮ್ಮ ಪ್ರೀತಿಯ,

**ಮೇಷ್ಟ್ರು**



## ಕವಿತೆಯೊಂದಿಗೆ ಅನುಸಂಧಾನ

ಕವಿತೆಯ ರಚನೆಯದೇ ಒಂದು ವಿಸ್ಮಯ ಕಥೆ. ಅದರ ಆಯಸ್ಕಾಂತೀಯ ಗುಣದಿಂದಾಗಿ ಲಿಂಗ, ವಯಸ್ಸು, ವೃತ್ತಿ ಎಲ್ಲವನ್ನು ಮೀರಿ ಎಲ್ಲರೂ ಅದರ ಆಕರ್ಷಣೆಗೆ ಒಳಗಾಗಿ ಬಿಡುವ ಬೆರಗು ಒಂದು ವಾಸ್ತವ ಸತ್ಯ. ಪ್ರತಿಭೆಯಿಂದ ಜನಿಸಿದ್ದು ಕಾವ್ಯ. ಅದು ಯಾರ ಸೊತ್ತೂ ಅಲ್ಲ, ಎಲ್ಲರದು. ಯಾವುದು ಉಚಿತ ಯಾವುದು ಅನುಚಿತ ಎಂಬುದರ ವಿವೇಚನೆಯೇ ವ್ಯುತ್ಪತ್ತಿ ಎಂದು ಖ್ಯಾತ ಮೀಮಾಂಸಕಾರ ರಾಜಶೇಖರ ಹೇಳುವನು. ಪ್ರತಿಭೆಗೆ ಉಪಯೋಗವಾಗುವ ಸಮಸ್ತ ವಸ್ತುಗಳ ಹಿಂದು ಮುಂದನ್ನು ವಿಮರ್ಶಿಸುವ ವಿಚಕ್ಷಣತೆಯೇ ವ್ಯುತ್ಪತ್ತಿ ಎಂದು ಮತ್ತೊಬ್ಬ ಪ್ರಸಿದ್ಧ ಮೀಮಾಂಸಕಾರ ಕಾಶ್ಮೀರದ ಅಭಿನವಗುಪ್ತ ಹೇಳುವನು. ಇವೆರಡೂ ಇಲ್ಲದೆ ಸೃಜನಕ್ರಿಯೆ ಸಾಧ್ಯವೇ ಇಲ್ಲ. ಪ್ರತಿಭೆ ದೈವದತ್ತವಾದುದು, ವ್ಯುತ್ಪತ್ತಿ ಓದುಅನುಭವಗಳಿಂದ ರೂಢಿಸಿಕೊಂಡದ್ದು. ಇವೆರಡರ ಅವಿನಾಭಾವ ಸಂಬಂಧವೇ ಕಾವ್ಯದ ಸೃಷ್ಟಿಗೆ ನೀರು ಗೊಬ್ಬರ ಫಲವತ್ತತೆಯ ಮಣ್ಣಿಗೆ ನೀರು ಗೊಬ್ಬರಗಳ ಸಾಹಚರ್ಯ ಅದ್ಭುತ ಫಲಸಂಚಯಕ್ಕೆ ಕಾರಣ. ಪ್ರಸಿದ್ಧ ವಾಣಿಜ್ಯೋದ್ಯಮಿಗಳಾದ ಶ್ರೀ ಹರಿ ಖೋಡೆಯವರು ತಮ್ಮ ಎಪ್ಪತ್ತರ ಅಂಚಿನಲ್ಲಿ ಮನಸಿನ ಅನಿಸಿಕೆಗಳು ಎನ್ನುವ ಚೊಚ್ಚಲ ಕವಿತಾ ಸಂಕಲವನ್ನು ಸದ್ದಿಲ್ಲದೆ ಹೊರತಂದಿರುವುದು ಸೋಜಿಗ. ತಮ್ಮ ಉದ್ಯಮದಲ್ಲಿ ಅವರು ಮುಳುಗಿಹೋಗಿದ್ದರೂ ತಮ್ಮ ವ್ಯವಹಾರಗಳ ನಡುವೆ ಮತ್ತು ಆಚೆ ಅವರು ಭಾವಜೀವಿ, ಪ್ರತ್ಯುತ್ಪನ್ನಮತಿ. ಅವರು ತಮ್ಮ ಉದ್ಯಮಲೋಕದ ಜಂಜಡಗಳ ನಡುವೆಯೂ ಸ್ಥಿತಪ್ರ?ಜ್ಞರಂತೆ ಇದ್ದೂ ಇಲ್ಲದಂತಿರುವ ಮನೋಭಾವ ರೂಢಿಸಿಕೊಂಡಿರುವಂತಿದೆ. ಇಲ್ಲದಿದ್ದರೆ ಈ ಸಂಕಲನದ 209 ಕವಿತೆಗಳು ಒಂದು ಕಾಲಘಟ್ಟದ ನಿರ್ಬಂಧಕ್ಕೆ ಒಳಗಾಗಿ ಸೃಷ್ಟಿಯಾಗುತ್ತಿರಲಿಲ್ಲ. ಅವರೇ ಕವಿತೆ ರಚನೆಯಾದ ದಿನಾಂಕದ ಸೂಚನೆ ಕೊಟ್ಟಿರುವರು. ಆ ಪ್ರಕಾರ 22-04-2011 ರಿಂದ 19-03-2012 ರ ಅವಧಿಯಲ್ಲಿ ಸೃಷ್ಟಿಯಾದವು. ಕಾವ್ಯ ಹುಟ್ಟುವ ಸಮಯವನ್ನು ಯಾರಿಗೂ ಹೇಳಲಾಗದು; ಅದೊಂದು ಮನೋಲಹರಿ, ಪ್ರಸನ್ನ ಮನಸ್ಸಿನ ಪಿಸುಮಾತುಗಳು. ಶ್ರೀ ಹರಿ ಖೋಡೆಯವರು ಯಾವಾಗ ಕಾಲವನ್ನು ಹೊಂದಿಸಿಕೊಂಡು ಬರೆದರೊ, ಕವಿತೆಯೇ ಇವರನ್ನು ಹಾಗೂ ಇವರ ಕಾಲವನ್ನು ಸೆಳೆದುಕೊಂಡು ಬಿಟ್ಟಿತೋ ತಿಳಿಯದು. ಒಂದು ಒಳತುಡಿತ ಅಜ್ಞಾತವಾಗಿ ಕೆಲಸ ಮಾಡಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಕವಿತೆಯ ಮಾಂತ್ರಿಕ ಸ್ಪರ್ಶದ ಅರಿವು ಶ್ರೀ ಹರಿ ಖೋಡೆಯವರಿಗಿದೆ. ಒಂದು ಮನೋವ್ಯವಸ್ಥೆಗೆ ಕಾವ್ಯ ಸಿದ್ಧವಾಗುವುದು (ಪು.4) ,



ಸಾವಿರ ಮನೋಸ್ಥಿತಿಗಳು ಒಂದು ಕಾವ್ಯವನ್ನು ಸಿದ್ಧಪಡಿಸುತ್ತದೆ (ಪು.21), ಸಾವಿರ ಕವನಗಳ ಅರ್ಥವನ್ನು ಜಗಕೆ ಇಂದು ಹೇಳಿ ಮೆರೆಯೋಣ (ಪು.20) ಕವನಗಳ ಬರೆಯುವುದು ತನ್ನ ಯಶಸ್ಸಿಗೆ ಆಗದೆ, ಲೋಕದ ಬೋಧನೆಯಾಗದೆ ತನ್ನ ಎದೆಯ ಹೊರೆ, ಇಳಿಸಿದ ಪ್ರಜ್ಞೆಯು ಹಾಳೆಯ ಋತುಗಳು (ಪು.82), ಸಾಹಿತ್ಯ ಕಾಲದ ಕೊಡುಗೆ, ಬೇಕಾದ ಕಾಲದಲಿ ಬೇರೆ ಬೇರೆ ಅರ್ಥಗಳನ್ನು ಬರೆಸುತ್ತದೆ, ಕವಿಯ ಮನಸ್ಸಿನಲ್ಲಿ ಬಣ್ಣಗಳನ್ನು ತುಂಬಿ ತನ್ನ, ಮೂಕ ಕುಂಚದಿಂದ ಕಾಲವು ಚಿತ್ರಿಸುತ್ತಾ ಇದೆ! (ಪು.94) - ಈ ಹೇಳಿಕೆಗಳನ್ನು ಚಿತ್ತವಿಟ್ಟು ಗಮನಿಸಿದಾಗ ಈ ಉದ್ಯಮಪತಿಗೆ ಸಾಹಿತ್ಯದ ಅಂಟುನಂಟಿನ ಸಂಬಂಧ ಗಾಢವಾಗಿರುವುದು ವೇದ್ಯವಾಗುತ್ತದೆ.

ಶ್ರೀ ಹರಿ ಖೋಡೆಯವರ ಕವಿತೆಗಳನ್ನು ಎರಡು ನೆಲೆಗಳಲ್ಲಿ ಗ್ರಹಿಸಬಹುದು : ಒಂದು ಅನುಭಾವಿಕ ನೆಲೆ, ಎರಡು ಚಿಂತನಪರವಾದ ವೈಚಾರಿಕ ನೆಲೆ. ಭೌತಿಕ ಪ್ರಪಂಚದ ಸಂಘರ್ಷಗಳ ನಡುವೆ ಇದ್ದೂ ಉಮರ್ ಖಯ್ಯಾಮನ ವಿಶಿಷ್ಟ ಅನುಭಾವಿಕ ನೆಲೆಗೆ ಹೊರಳಿಬಿಡುವ ಶ್ರೀ ಹರಿ ಖೋಡೆಯವರು ತಮ್ಮ ಕವಿತಾ ಸಂಕಲನದ ಉತ್ತರಾರ್ಧದಲ್ಲಿ ವಾಸ್ತವ ಬದುಕಿಗೆ ಕಣ್ಣು-ಕಿವಿ - ಮನಸ್ಸು ಕಾಣುವ ವಾಸ್ತವ ಸತ್ಯಕ್ಕೆ ಸಹಜವಾಗಿಯೇ ತೆರೆದುಕೊಂಡುಬಿಡುವರು. ಮೊದಲನೆಯದಕ್ಕೆ ಬೇರೆಡೆ ಕಾರಣಗಳನ್ನು ಹುಡುಕಬೇಕಾಗಿಲ್ಲ, ಅವರ ಕವಿತೆಗಳಲ್ಲಿಯೇ ಉತ್ತರ ಸಿಗುತ್ತದೆ. ಭಾರತೀಯ ಆಧ್ಯಾತ್ಮ ಚಿಂತನೆಗೆ ವ್ಯತಿರಿಕ್ತವಾದ ಒಂದು ಭಕ್ತಿಯ ಸಿದ್ಧ ಪರಿಕಲ್ಪನೆಯನ್ನು ಪರ್ಷಿಯಾದ ಉಮರ್ ಖಯ್ಯಾಂನ ಚಿಂತನೆಗಳಲ್ಲಿ ಗುರುತಿಸಬಹುದಾಗಿದೆ. ಮದಿರೆ, ಮಾನಿನಿ, ವಾಸ್ತವ ಬದುಕು ಮತ್ತು ದೈವೀಕವಾದ ನಲ್ಮೆ ಇವುಗಳ ಸುಮಧುರ ಪಾಕ (ಬ್ಲೆಂಡ್) ಉಮರನ ವಿಚಾರಧಾರೆಗಳಲ್ಲಿದೆ. ಶ್ರೀ ಹರಿ ಖೋಡೆಯವರು ಉಮರ್ ಖಯ್ಯಾಂನ ಜೀವನ ಸಿದ್ಧಾಂತಕ್ಕೆ ಮಾರುಹೋಗಿಬಿಟ್ಟಿದ್ದಾರೆಂದರೆ ಅವರ ಕವಿತೆಗಳ ಮೊದಲಭಾಗದ ಮೂಲದ್ರವ್ಯ ಉಮರನ ಅನುಭಾವಿಕ ವಿಚಾರಧಾರೆಗಳು. ಅವರು ಉಮರನನ್ನು ಸಿದ್ಧಪುರುಷನನ್ನಾಗಿ ಕಂಡಿದ್ದಾರೆ:

ಸರಳ ಅಂತರಂಗದ ವಿಚಾರ ಮಾಡುತ
ಮೋಹ ಪ್ರೀತಿ ವಿಚಾರಗಳನ್ನು ಮೆಲುಕುಹಾಕುತ್ತ
ತಾನೊಬ್ಬನೇ ಸಮುದ್ರದಿ ದೋಣಿಯನ್ನು ನಡೆಸುತ್ತ
ತನ್ನ ಆತ್ಮವಿಶ್ವಾಸಗಳು ಕುಂದದೆ
ಆಹಾ! ಆ ಮಹಾನ್ ಶಕ್ತಿಯ ಜೊತೆಗೆ ಬೆರೆತು



www.sriharikhoday.com

ರಸಿಕತೆಯ ಹಿನ್ನೆಲೆಯಲ್ಲಿ ಅಡಗಿರುವ ರಹಸ್ಯಗಳನ್ನು
ಪ್ರ?ಜ್ಞೆಯ ಕಣ್ಣಿನಿಂದ ವೀಕ್ಷಿಸುತ ತನ್ನ ಭಾವನೆಗಳನ್ನು
ತನ್ನ ಕಾಂತೆಯೊಡನೆ ಹಂಚಿಕೊಳ್ಳುತ್ತ ಕಷ್ಟವಿಲ್ಲದ ದೇವರ
ಬೆರಕೆಯ ವಿಧಾನಗಳನ್ನು ನಕ್ಷತ್ರದಂತೆ ಮಿನುಗಿಸಿದ
ಅಂಜಿಕೆ ಇಲ್ಲದ ಸಿದ್ಧಪುರುಷ ಉಮರ್ ಖಯ್ಯಾಂ (ಪು. 82)

ಬೆಳಕಿನ ಕಿರಣವಾಗಿರುವ ನನ್ನ ಆತ್ಮ
ಶರೀರಧಾರಣೆ ಮಾಡಿ ಉಮರನ
ಹೆಸರು ಪಡೆದು ನಾನಾ ದೃಷ್ಟಿಕೋನದಿಂದ
ಜಗತ್ತನ್ನು ನೋಡುತ್ತಿದ್ದೇನೆ
ದೇಹಧಾರಣೆಯಾಗಿರುವ ಈ ದೇಹದಿಂದ
ದೇಹದ ಬಯಕೆಗಳನ್ನು ತೃಪ್ತಿಪಡಿಸುತ್ತಿದ್ದೇನೆ! (ಪು.88)

ಉಮರ ಶ್ರೀ ಹರಿ ಖೋಡೆಯವರ ಆತ್ಮದಲ್ಲಿ ಬೇರ್ಪಡಿಸಲಾಗದಂತೆ ಬೆರೆತು ಹೋಗಿರುವನು. ಅದರ ನೆರಳು ಪುಟ 98,99, 102 ರಲ್ಲಿ ದಟ್ಟವಾಗಿದೆ. ಅವರ ಕವಿತೆಗಳ ಮೊದಲ ಭಾಗ ಸಾತ್ವಿಕ ಅರ್ಥದಲ್ಲಿ ಹೇಳುವುದಾದರೆ, ಅ ಮಲಿನ (ಪು.91) ಸಾಹಿತ್ಯವೂ ಹೌದು, ಅಮಲಿನ (ಮಲಿನವಲ್ಲದ, ಶುದ್ಧ) ಸಾಹಿತ್ಯವೂ ಹೌದು. ದೇವರ ಜೊತೆ ಬೆರೆಯುವುದಕ್ಕೆ ಉಮರನಿಗೆ ಸಾಧನಗಳು ನಿಶೆ, ಮದಿರೆ, ಮಾನಿನಿ; ಇವು ಸಂಕೇತಿಕ ವಸ್ತು ದ್ರವ್ಯಗಳು. ಶ್ರೀ ಹರಿ ಖೋಡೆಯವರು ಉಮರನ ಜೀವನ ಸಿದ್ಧಾಂತದಲ್ಲಿ ಪ್ರಧಾನವಾಗಿ ಪರಮಾತ್ಮನೊಡನೆ ಬೆರೆಯುವ ವಿಚಾರವನ್ನು ಹಲವಾರು ರೀತಿಯಲ್ಲಿ ಹೇಳಿರುವರು :

ಮದ್ಯ ಖೀರು ತಾಂಬೂಲ ಗುಲಾಬಿಗಳನ್ನು
ದೇವರು ನಿರ್ಮಿಸಿರುವನೆಂದು ಅನುಭವಿಸುವುದರಲ್ಲಿ
ತಪ್ಪೇನಿಲ್ಲ (ಪು.73)

ದೇಹದ ಜೊತೆಗೆ ನೀಡಿದನು ಕಾಂತೆಯನು
ದೇವರ ಜೊತೆ ಬೆರೆಯಲು ನಿಶೆಯ ಬಟ್ಟಲನು (ಪು.75)

ಕಾಂತೆಯೊಡನೆ ಭೋಗಾನುಭೋಗಗಳಲ್ಲಿ
ಸೃಷ್ಟಿಯ ಸಂಕಲ್ಪಗಳನ್ನು ಉಮರನು



www.sriharikhoday.com

ಅನುಭವಿಸುತ್ತಿರುವುದು ಸೃಷ್ಟಿಯ ಸಂಕಲ್ಪವೇ ಸರಿ (ಪು.28)
ದ್ರಾಕ್ಷಾರಸ ನಮ್ಮ ಯೌವ್ವನದ ರೆಕ್ಕೆಗಳಿಗೆ ಬಲಪಡಿಸುತ್ತದೆ (ಪು.73)
ಸೃಷ್ಟಿಯ ಬೆಳೆಯಾದ ನಾವುಗಳು ಸುಖಪಟ್ಟರೆ
ಸೃಷ್ಟಿಗೆ ಸುಖದ ಅಮಲು ದ್ರಾಕ್ಷಾರಸದ ಅಮಲಂತೆ
ಸೃಷ್ಟಿಯ ಅಮಲು (ಪು.24)

ನಾನು ದ್ರಾಕ್ಷಾರಸವನು ಕುಡಿದು
ದೇವರಲ್ಲಿ ಬೆರೆತುಕೊಳ್ಳುವೆ (ಪು.77)

ಪ್ರಿಯೆಯ ಸರಾಗ ಸಾನ್ನಿಧ್ಯ ಲಭ್ಯವಾದಾಗ
ಚಿಂತೆಗಳು ಏಕೆ ಎನ್ನುವನು ಉಮರನು (ಪು.41)

ಉಮರನು ತನ್ನ ಕಾಂತೆಯ ಜೊತೆ
ಸುಖಗಳನ್ನು ಅರಳಿಸಿ ಜಗತ್ತಿಗೆ ಕವಿ ಫಲವಾಗಿ ನೀಡಿದ್ದಾನೆ (ಪು.65)

ದ್ರಾಕ್ಷಾರಸವನ್ನು ಕುಡಿದು ಸತ್ಯದ ಅಮಲಿನ ಜೊತೆ ಇರುವುದು, ಕುಡಿಯದೆಯೇ ಸತ್ಯದ ಅಮಲಿನ ಜೊತೆ ಇರುವುದು ಇವೆರಡೂ ಸಾಧ್ಯತೆಗಳು ಉಮರನಂತಹ ಸ್ಥಿತಪ್ರಜ್ಞನಿಗೆ ಸಾಧ್ಯ, ಹಾಗೆಯೇ ಶ್ರೀ ಹರಿ ಖೋಡೆಯಂಥವರಿಗೆ ಸಾಧ್ಯ. ನಿತ್ಯದ ನಮ್ಮ ಬದುಕಿನ ಹಗರಣಗಳನ್ನು ಮರೆಯಲು ನಿಶೆಯ ಬಟ್ಟಲು, ದೇಹದ ಕರೆಯನ್ನು ಪೂರೈಸಲು ಕಾಂತೆ- ಇವು ಉಮರನು ಕಂಡುಕೊಂಡ ಸತ್ಯ (ಪು.88 ಹಾಗೂ ಪು.21). ಹೆಣ್ಣು ಹಾಗೂ ದ್ರಾಕ್ಷಾರಸ ಉಮರನ ಪಾಲಿಗೆ ಸತ್ಯದ ಒಗಟು ಜೀವನ ರಹಸ್ಯ (ಪು.21). ಬದುಕಿನ ಚಿರಂತನ ಸತ್ಯವನ್ನು ಕವಿ ತನ್ನ ಕವನಗಳ ಮೂಲಕ ಹೇಳುವನಂತೆ :

ಇಂದಿದ್ದು ನಾಳೆ ಹೋಗುವವರು ನಾವು
ಹಳೆಯದನ್ನು ಮರೆತು ಹೊಸದನ್ನು ಅನುಭವಿಸದೆ
ಭೂತ ಭವಿಷ್ಯ ವರ್ತಮಾನಗಳು ತೇಲಾಡುತ್ತಿವೆ
ಈ ಜಗತ್ತು ಕಾರಣವಿಲ್ಲದೆ ತಳಮಳಕ್ಕೆ ಸಿಲುಕಿ ನಿಶೆಯ
ಅಮಲಿನಲ್ಲಿ ಶುದ್ಧವಾದ ಭಾವನೆಗಳಿದ್ದಲ್ಲಿ ನಾಲ್ಕೈದು
ಅಕ್ಷರಗಳಿಂದ ಕವನ ಬರೆಸುವ ಈ ನಿಶೆಯ ಬಟ್ಟಲು
ಮನಸ್ಸಿನ ಕುಂಚ ಭಾವನೆಗಳಿಂದಾದ ಚಿತ್ರ

ಎಂದೂ ಮರಣ ಬರದ ಕವನಗಳನ್ನು ಸೃಷ್ಟಿಸಿದೆ (ಪು.24)

ನಿಶೆಯು ದೇವರ ಜೊತೆಗೂಡಿಸುವ ಒಂದು ಉಲ್ಲಾಸ, ದಿವ್ಯ ಬಾಂಧವ್ಯದ ಸುಖ, ದೇವರ ಜೊತೆಗಿರುವ ಅನುಭವ, ದೇವರನ್ನು ನಾವು ಕುಡಿಯುವ ಬಟ್ಟಲು ಎನ್ನುವ (ಪು.53) ಅಪರೂಪದ ಚಿಂತನೆ ಒಂದು ವಿಧದಾದ್ದರೆ,

ಹೇ ಪ್ರಿಯೆ ನಿಶೆಯ ಬಟ್ಟಲನ್ನು ತಾ
ನಿನಗೆ ಭೋಗದ ವೈರಾಗ್ಯ ಬೇಡ
ನನಗೂ ಭೋಗದ ವೈರಾಗ್ಯ ಬೇಡ
ನಮ್ಮಿಬ್ಬರ ಸುಖದಲ್ಲಿ ದೇವರನ್ನು ಅನುಭವಿಸೋಣ! (ಪು.59)

ಎನ್ನುವ ಮಧುರಭಾವದ ಇನ್ನೊಂದು ನೆಲೆಯತ್ತ ಹೊರಳುತ್ತದೆ. ಪ್ರಿಯ-ಪ್ರೇಯಸಿಯರು ದೇವರಲ್ಲಿ ಕರಗಿ ಹೋಗಬೇಕೆನ್ನುವ ಆಸೆಯಲ್ಲಿ ಅನುಭಾವದ ಇನ್ನೊಂದು ಮಜಲನ್ನು ನಾವು ಗುರುತಿಸಬಹುದು :

ನಾನು ವೀಣೆಯ ತಂತಿಯಿಂದ ಬಂದ ನಾದದಂತೆ
ತಂತಿಯಿಂದ ಹೊರಬಂದು ತಂತಿಯೊಳಗೇ ಸೇರಿಕೊಳ್ಳುವಂತೆ
ಕತ್ತಲು ಬೆಳಕಿನಲ್ಲಿ ಕರಗಿ ಹೋಗುವಂತೆ
ನಾನು ನನ್ನ ಕಾಂತೆಯ ಬೆರಕೆಯಲ್ಲಿ ಕರಗಿಹೋಗಿ

ಈ ನಿಶೆಯಲ್ಲಿ ನನ್ನ ಶರೀರವನ್ನು ಮರೆತು
ಯಾರಿಗೂ ತಿಳಿಯದೆ ಇಲ್ಲವಾಗುವ ಆಸೆ
ಈ ನಮ್ಮ ನಿಮ್ಮ ದೇವರಲ್ಲಿ ಕರಗಿಹೋಗುವ ಆಸೆ

ಶ್ರೀ ಹರಿ ಖೋಡೆಯವರು ದೇವರ ಬಗೆಗಿನ ಜಿ?ಜ್ಞಾಸೆಯನ್ನು ತಮ್ಮ ಹಲವು ಕವಿತೆಗಳಲ್ಲಿ ಮಾಡಿರುವರು (ಪು.31,33). ಒಂದು ಕವಿತೆಯಲ್ಲಂತೂ ಕೋಟಿ ಜನಗಳು ಕೋಟಿ ದೇವರಿಲ್ಲ ಎಂದು ಹೇಳುತ್ತ ಗುಲಾಬಿಗೆ, ನಿಶೆಗೆ, ಕಲ್ಲಿಗೆ, ನೀರಿಗೆ, ಆಕಾಶಕ್ಕೆ ಬುದ್ಧಿಗೆ ಎಲುಬು ಬುರುಡೆಗೆ ದೇವರು ಎಂದು ಕರೆದು ಆರಾಧಿಸುವ ಜನರ ಮೌಢ್ಯವನ್ನು ಪ್ರಶ್ನಿಸುವರು (ಪು.63). ತಾವು ದೇವರನ್ನು ಎಂದೂ ನೋಡಿಲ್ಲ ಎಲ್ಲದರಲ್ಲೂ ಎಲ್ಲರಲ್ಲೂ ಇರುವ ದೇವರನ್ನು ನಾನು ಅನುಭವಿಸಿದೆ ಎಂದು ಒಂದು ಕವಿತೆಯಲ್ಲಿ ಹೇಳುವರು:



www.sriharikhoday.com

ನಾ ದೇವರನ್ನು ಎಂದೂ ನೋಡದೆ ದೇವರನ್ನು ಅನುಭವಿಸಿದೆ
ನನ್ನ ಪ್ರಿಯೆಯ ಜೊತೆಗೆ ನಿಶೆಯ ಬಟ್ಟಲ ಜೊತೆಗೆ
ಎಲ್ಲದರಲ್ಲೂ ಎಲ್ಲರಲ್ಲೂ ದೇವರನ್ನು ಅನುಭವಿಸಿದೆ (ಪು.31)

ಉಮರನ ಜೀವನ ಸಿದ್ಧಾಂತದಲ್ಲಿ ನಿನ್ನೆ ಹಾಗೂ ನಾಳೆಗಳು ಕೊಡುವ ಸುಖಕ್ಕಿಂತ ಇಂದು ಕೊಡುವ ಸುಖವೇ ಮುಖ್ಯ. ಶ್ರೀ ಹರಿ ಖೋಡೆಯವರ ಆ ಸಿದ್ಧಾಂತದ ಬಗೆಗಿನ ಜಿಜ್ಞಾಸೆ ಮನೋಜ್ಞವಾಗಿದೆ :

ನಿನ್ನೆ ಸತ್ತುಹೋಗಿದೆ
ನಾಳೆ ಹುಟ್ಟುತ್ತಿದೆ
ನಿನ್ನೆಯ ಕಷ್ಟಗಳ ನೆನೆಯುವುದೇತಕೆ ?
ನಾಳೆಯ ಸುಖವನ್ನು ಬಯಸೋಣ
ನಿನ್ನ ಕೈಯಿಂದ ತುಂಬು ನಿಶೆಯ ಬಟ್ಟಲನ್ನು
ನಿಶೆ ಇಳಿದಾದ ಮೇಲೆ
ಜಗದ ಕಷ್ಟಗಳು ನನ್ನನ್ನು ಕಾಡುತ್ತವೆ
ಸೂರ್ಯ ಚಂದ್ರರೇ ನಿನ್ನೆಗಳನ್ನು ಮರೆತಿರುವಾಗ
ನಾನೇಕೆ ನಿನ್ನೆಗಳನ್ನು ನೆನಸಲಿ
ಏಕೆ ಇಂದಿನ ಸುಖ ಹಾಳುಮಾಡಲಿ (ಪು.35)

ಸ್ವರ್ಗದ ಸುಖ ಇಹದಲ್ಲಿ ಇಲ್ಲವೆ ? ಎನ್ನುವ ಚಿಂತನೆಯಲ್ಲಿ ಇಹದ ಬದುಕಿಗೆ ಹೆಚ್ಚು(ಪು.35) ಮಹತ್ವ ಕೊಟ್ಟು ಕಾಣದ ಸ್ವರ್ಗಸುಖದ ನಿರಾಕರಣೆ ಒಂದು ಕವಿತೆಯಲ್ಲಿ ಬಂದಿದ್ದು, ಅದರಲ್ಲಿನ ಸಮರ್ಥನೆ ಆ ಕವಿಯಲ್ಲಿ ಬೆರಗುಹುಟ್ಟಿಸುವಂತಿದೆ (ಪು.32). ವಿಧಿಯೇ (ದೈವವೇ) ನನ್ನ ಸುಖಕ್ಕಾಗಿ ದ್ರಾಕ್ಷಿಯನ್ನು ಬೆಳೆದು ತಂದು, ಮಧುಪಾನ ಮಾಡಿ ಎಂದು ಅದರ ಬೆಳೆಗಾರನೇ ನನ್ನ ಕಾಂತೆಗೆ ಕೊಟ್ಟಿರುವನು. ಅಷ್ಟೇ ಅಲ್ಲ, ಕಾಂತೆಯ ಜೊತೆಗೆ ಮಧುಪಾನ ಮಡೋಣವೆಂದಿರುವಾಗ ಆ ವಿಧಿಯೇ ನನ್ನ ಜೊತೆ ಮಧುಪಾನ ಮಾಡಿ ಸುಖಿಸುವಂತಿದೆ ಎಂದು ಹೇಳುವಲ್ಲಿನ ನವಿರಾದ ಹಾಸ್ಯ ಮನಸ್ಸನ್ನು ಅರಳಿಸುತ್ತದೆ. ಇನ್ನೊಂದು ಕವಿತೆಯಲ್ಲಿ ದೇವ - ಭಕ್ತನ ನಡುವಿನ ಅನ್ಯೋನ್ಯತೆಯ ಭಾವವನ್ನು ಇನ್ನಿಲ್ಲದಷ್ಟು ಸೊಗಸಾಗಿ ಹೇಳಲಾಗಿದೆ. ಕವಿಪ್ರತಿಭೆ ಗರಿಗಟ್ಟುವುದು ಇಂಥ ನವಿರಾದ ಹಾಸ್ಯ ಸಂದರ್ಭಗಳಲ್ಲೇ;

ಓ ದೇವ, ನೀ ನಿನ್ನೆ ದಿವಸ ಹೆಚ್ಚಿನ
ಮಧುಪಾನವನ್ನು ಸೇವಿಸಿ ನನಗೆ ನೀ
ನಿನ್ನ ಸಂತಸದ ಕದವನ್ನು ಮುಚ್ಚಿದ್ದೆ
ಕುಡಿದದ್ದು ನಾನು ಮತ್ತೇರಿದ್ದು ನಿನಗೆ
ದೇವಾ - ಎಚ್ಚೆತ್ತುಕೋ
ನನ್ನ ಸಂತಸದ ಕದವ ತೆಗೆ! (ಪು.81)

'ಬರೆದಷ್ಟು ಮನದ ಕವನಗಳು' ಎಂಬ ಶ್ರೀ ಹರಿ ಖೋಡೆಯವರ ಒಂದು ಕವಿತೆಯ ಸಾಲು (ಪು.47) ಅವರ ಈ ಸಂಕಲನದ ಉತ್ತರಾರ್ಧಕ್ಕೆ ಚೆನ್ನಾಗಿ ಅನ್ವಯಿಸುತ್ತದೆ. ಇಲ್ಲಿ ಪ್ರಸ್ತುತದ ಜೊತೆ ವೈಚಾರಿಕೆ ಮುಖಾಮುಖಿ ನಡೆದಿದೆ. ಸಮಾಜ - ವ್ಯಕ್ತಿ - ಧರ್ಮ ರಾಜಕೀಯ ಹೀಗೆ ವಸ್ತುವೈವಿಧ್ಯತೆ ಇಲ್ಲಿನ ಕವಿತೆಯಲ್ಲಿ ಕಾಣಬರುತ್ತದೆ. ಒಂದು ಕವಿತೆಯಲ್ಲಿ ತಮ್ಮನ್ನೇ ವಿಚಾರದ ನೆಲೆಗೆ ತಂದು ಒಡ್ಡಿಕೊಳ್ಳುವರು :

ನನ್ನನ್ನು ಮದ್ಯದ ಪೂಜಾರಿ ಎನ್ನುವರು ಅಹುದು!
ಸ್ತ್ರೀಲೋಲನು ಎನ್ನುವರು ನನಗೆ ಅಹುದು!
ಬಹಿರಂಗ ಚರ್ಚೆಗಳು ಪರೀಕ್ಷಿಸಿದರೆ
ನನ್ನ ಅಂತರಂಗದಲ್ಲಿ ನನ್ನಂತೆ ನೀನು, ನಿನ್ನಂತೆ ನಾನು!

ಈ ರೀತಿಯ ಸ್ವವಿಮರ್ಶೆಯು ಆರೋಗ್ಯವಂತ ಮನಸ್ಸಿನ ಲಕ್ಷಣ. ನಾವೆಲ್ಲರೂ ಸಾಮಾಜಿಕ ಜೀವಿಗಳು, ಒಂದಲ್ಲಾ ಒಂದು ದಿವಸ ನಮ್ಮ ಪ್ರಮಾಣಿಕತೆಯ ಪರೀಕ್ಷೆ ಆಗಬಹುದು. ಶ್ರೀ ಹರಿ ಖೋಡೆಯವರು ಇಂಥ ಒರೆಹಚ್ಚಿ ನೋಡುವ ಜನರ ನಿಲುವನ್ನು ನೇರವಾಗಿಯೇ ಎದುರಿಸುವರು:

ನನಗೆ ಹುಚ್ಚನೆಂದು ಕರೆಯಿರಿ
ದೇವರ ಜೊತೆಗಿರುವ ನನಗೆ
ಹುಚ್ಚ ಹುಚ್ಚನೆಂದು ಕಲ್ಲಿನಿಂದ ಹೊಡೆಯಿರಿ
ಆದರೆ ನನ್ನ ಕಣ್ಣಿಗೆ ಮಾತ್ರ ಹೊಡೆಯದಿರಿ!

ನೀವು ಬಿಟ್ಟಿರುವ ಈ ಕಣ್ಣಿನಿಂದ
ನನ್ನಂಥ ಮತ್ತೊಬ್ಬ ಹುಚ್ಚನ ನೋಡುವ ಆಸೆ



www.sriharikhoday.com

ನಾನು ನಿಮ್ಮ ನೆಂಟನಲ್ಲ ನಿಮ್ಮ ಸಿರಿತನ ಬೇಡಲಿಲ್ಲ
ದೇವರ ಜೊತೆಯಿರುವ ನನ್ನ ಮೇಲೆ ಏಕಿಂಥ ದ್ವೇಷ? (ಪು.50)

'ನೊಂದ ಜೀವನದಲ್ಲಿ ಸೋತುಹೋಗಿ, ಜಗತ್ತಿನಲ್ಲಿ ಕಳೆದು ಹೋಗಿರುವ ದಿಕ್ಕುಗಳಿಲ್ಲದ ಹೆಣ್ಣು ನಾನು!' ಎಂದು ಒಂದು ಕವಿತೆಯಲ್ಲಿ (ಪು.132) ತಮ್ಮನ್ನು ಕರೆದುಕೊಂಡಿರುವರು. ನಮ್ಮ ಸಹಜೀವಿಗಳಲ್ಲಿ ನಂಬಿಕೆ ಕಳೆದುಹೋಗುತ್ತಿರುವುದರ ಬಗೆಗೆ 'ನಮ್ಮ ಉಸಿರಿನ ಮೇಲೆ ನಮಗೆ ನಂಬಿಕೆಯೇ ಇಲ್ಲ' ವಲ್ಲ ಎಂದು ವಿಷಾಧಿಸುವರು (ಪು.182) ತಮ್ಮ ದಿನಚರಿಯ ಒಂದು ಪುಟ್ಟ ಚಿತ್ರವನ್ನು ಕವಿತೆಯೊಂದರಲ್ಲಿ ಆತ್ಮೀಯವಾಗಿ ಕೊಟ್ಟಿರುವರು (ಪು.134) ಅಗಲಿದ ಗೆಳೆತಿಯೊಬ್ಬಳ ನೆನಪು ಒಂದು ಕವಿತೆಯ (ಪು.175) ವಸ್ತುವಾಗಿದೆ. ತಮ್ಮ ತಂದೆ-ತಾಯಿಯರನ್ನು ಕುರಿತು (ಪು.127), ತಮ್ಮ ಪತ್ನಿ ರಾಜಲಕ್ಷ್ಮಿಯವರನ್ನು ಕುರಿತು (ಪು.107), ತಮ್ಮ ದಾಂಪತ್ಯ ಜೀವನವನ್ನು ಕುರಿತು (ಪು.129) ಸೊಗಸಾದ ನುಡಿಚಿತ್ರಗಳನ್ನು ಬಿಡಿಸಿರುವರು. ರೈತ ಹಾಗೂ ಅವನ ಬವಣೆಗಳು ಒಂದು ಕವಿತೆಯ ವಸ್ತುವಾದರೆ, ರಾಜಕೀಯ ನಾಟಕ ಒಂದು ಕವಿತೆಯ ವಸ್ತುವಾಗುತ್ತದೆ (ಪು.148). ನಮ್ಮ ರಾಜಕೀಯ ವ್ಯವಸ್ತೆ ನಮ್ಮನ್ನು ಗುಲಾಮರನ್ನಾಗಿಸುತ್ತಿದೆ(ಪು.140), ಉಲ್ಲಾಸದಿಂದ ಇರುವುದಕ್ಕೆ ಯಾವ ಧರ್ಮವೂ ಬೇಕಿಲ್ಲ, ದೇವರಲ್ಲಿ ಬೆರೆಯುವುದಕ್ಕೆ, ಯಾವ ಮತವೂ ಬೇಕಿಲ್ಲ ಎನ್ನುವರು (ಪು.80). ಸುಖ ತರುವ ಚಿಂತನೆಗಳೇ ಶ್ರೇಷ್ಠ ಚಿಂತನೆಗಳು (ಪು.5), ಜಗತ್ತಿನ ಸುಖದ ಮರ್ಮ ದೇವರು ಬಚ್ಚಿಟ್ಟಿರುವನು (ಪು.22), ದೇವರಲ್ಲಿ ಬೆರೆಯುವುದಕ್ಕೆ ಮನುಷ್ಯನಿಗೆ ಸಮಯದ ಅಭಾವ (ಪು.86), ನಿಶೆಯ ಬಟ್ಟಲು ಜೊತೆ ಹೊಸದನ್ನು ಅನುಭವಿಸೋಣ (ಪು.7), ನಮ್ಮ ಕ್ರಿಯೆಗಳಿಗೆ ಸಮಯ ಸಾಲದಿದ್ದರೆ ಬೇಕಿರುವ ಕಾಲವನ್ನು ಹಣಕೊಡದೆ ಕೊಂಡುಕೊಳ್ಳೋಣ (ಪು.13), ಯಶಸ್ಸು ಬೇಡದೆ ಇರುವವರು ಮರುಭೂಮಿಯೇ ಸರಿ, ಇದ್ದ ಹಾಗೆ ಇದ್ದು ಹೋಗಿಬಿಡೋಣ ಎನ್ನುವವರು ತಿಪ್ಪೆಗುಂಡಿಯೇ ಸರಿ (ಪು.184), ಮಾತನಾಡುವ ದೇವರನ್ನು ಪ್ರೀತಿಸೋಣ (ಪು.187), ನನಗೆ ಪ್ರೀತಿಸುವವರು ಬೇಕು ಎಂದರೆ ನಾವು ಕನ್ನಡಿಯಂತೆ ಇರಬೇಕು (ಪು.193), ಒಂದು ಗಂಡಿನ ಮನಸ್ಸಿನಲ್ಲಿ ಹೆಣ್ಣಿರುವಂತೆ ಒಂದು ಹೆಣ್ಣಿನ ಮನಸ್ಸಿನಲ್ಲಿ ಗಂಡಿರುವಂತೆ - ಇಂಥ ಅರ್ಥಪೂರ್ಣ ಮಾತುಗಳು ಕವಿತೆಗಳಲ್ಲಿ ಬೆಸೆದುಕೊಂಡಿರುವುದರಿಂದ ಕವಿತೆಗಳು ಮಿನುಗುನಕ್ಷತ್ರಗಳಾಗಿಬಿಡುತ್ತವೆ. ಕವಿತೆಯಲ್ಲಿ ಅರ್ಥಗಟ್ಟುವ ಮಾತುಗಳು ಚಿನ್ನದ ಸರಕ್ಕೆ ವಜ್ರದ ಹರಳುಗಳನ್ನು ಬೆಸೆದಂತೆ.

ಶ್ರೀ ಹರಿ ಖೋಡೆಯವರು ತಮ್ಮ ಕವಿತೆಗಳನ್ನು ಮನಿಸಿನ ಅನಿಸಿಕೆಗಳು ಎಂದು ಕರೆದಿರುವರು. ಇಲ್ಲಿನ ಅಂತರಂಗ ಮಿಡಿದ ಭಾವನೆಗಳು ವ್ಯಕ್ತಿಯೊಬ್ಬನ ಮನಸಿನ ಅನಿಸಿಕೆಗಳಷ್ಟೇ ಆಗುವುದಿಲ್ಲ. ಏಕೆಂದರೆ, ಸಂಕಲನದ ಮೊದಲರ್ಧಭಾಗವು ಪರ್ಷಿಯಾ ದೇಶದ ವಿಲಕ್ಷಣ ಭಕ್ತಿ ಪರಂಪರೆಯ ಅನುಸಂಧಾನವಾಗಿದೆ. ಈ ಭಕ್ತಿ ಪರಂಪರೆ ಡಿ.ವಿ.ಜಿ. ಅವರ ಉಮರನ ಒಸಗೆಯಲ್ಲಿ ಮೊದಲಿಗೆ ಕನ್ನಡಕ್ಕೆ ಅಂಕುರಾರ್ಪಣ ಮಾಡಿತು. ಉಮರ್ ಖಯ್ಯಾಂನಲ್ಲಿ ಪ್ರತಿಪಾದಿತವಾದ ಶುದ್ಧ ಭಕ್ತಿಯು ಶ್ರೀ ಹರಿ ಖೋಡೆಯವರಿಗೆ ಪ್ರಿಯವಾದಂತೆ ತೋರುತ್ತದೆ. ಈ ಜಗತ್ತಿಗೆ ಉಮರನ ಮನಸ್ಸಿನ ಕಾಲಿನ ಹೆಜ್ಜೆ ಗುರುತುಗಳು (ಪು.26) ಆದರ್ಶವಾಗಿವೆ ಎಂದು ಭಾವಿಸಿದ ಅವರು ಆ ಭಕ್ತಿ ಸ್ವರೂಪದ ಆಯಾಮಗಳನ್ನು ಕನ್ನಡಕ್ಕೆ ತರುವ ಪ್ರಯತ್ನ ಮಾಡಿರಬಹುದು. ಇದನ್ನು ತರಲೇಬೇಕೆನ್ನುವ ಮುಖ್ಯ ಆಶಯ ಅವರಿಗಿದ್ದಂತೆ ತೋರದು. ಅದು ಅವರನ್ನು ಆಕರ್ಷಿಸಿದೆಯಷ್ಟೆ, ಅದು ಕವಿತೆಗಳ ಹೂರಣವೇನಲ್ಲ. ಅವರ ಈ ಸಂಕಲನದ ಉತ್ತರಭಾಗ ಅವರ ಮನಸ್ಸಿನ ಚಲನವಲನಗಳನ್ನು ಪ್ರಸ್ತುತಕ್ಕೆ ಅನ್ವಯಿಸಿಕೊಂಡು ಅವರ ಭಾವಕೋಶ ವಿಶೇಷವಾಗಿ ಸ್ಪಂದಿಸಿದಂತೆ ತೋರುತ್ತದೆ. ನಿಡುಗಾಲದ ಸಂಪನ್ನ ಅನುಭವಗಳು, ಚಿಂತನೆಗಳು ಇಲ್ಲಿ ಅರ್ಥಪೂರ್ಣವಾಗಿ ಶಾಬ್ದಿಕರೂಪ ಪಡೆದುಕೊಂಡಿವೆ.

ಶೀರ್ಷಿಕೆ ಹೇಳುವಂತೆ ಇವು ಶ್ರೀ ಹರಿ ಖೋಡೆಯವರ ಮನಸ್ಸಿನ ಅನಿಸಿಕೆಗಳು. ಅವರ ಕವಿತೆಯ ಒಂದು ಸಾಲು ಹೇಳುವಂತೆ ಇವು 'ಇಂದಿರುವಂತೆ ನಾಳೆಯಿಲ್ಲದ ಸತ್ಯಗಳು' (ಪು.25). ಅವರ ಕವಿತೆಗಳು ಈ ಮೇಲೆ ತಿಳಿಸಿದ ನೆಲೆಗಳಲ್ಲಿ ವ್ಯವಹರಿಸುವ ಮೂಲಕ ತಮ್ಮ ಚೊಚ್ಚಿಲ ಪ್ರಯತ್ನದಲ್ಲೇ ಯಶಸ್ಸನ್ನು ಸಾಧಿಸಿದೆ. ಸಾಹಿತ್ಯ ಪರಿಸರಕ್ಕೆ ನೇರವಾಗಿ ಸಂಬಂಧಿಸದ ಅವರು ತಮ್ಮ ಕವಿತೆಗಳಲ್ಲಿ ಸೃಜನಪ್ರತಿಭೆಯ ಸೆಳೆಮಿಂಚುಗಳನ್ನು ಕಾಣಿಸಿರುವರು, ತಾವು ಚಿಂತನಶೀಲ ಕವಿ ಎಂಬುದನ್ನು ಕಾವ್ಯಾಸಕ್ತರ ಮೊದಲ ಓದಿಗೇ ಋಜುವಾತುಪಡಿಸಿರುವರು. ಕಾಲದೊಂದಿಗೆ ಪಕ್ವವಾಗಿರುವ ಅವರು ತಮ್ಮ ಎಪ್ಪತ್ತರ ಅಂಚಿನಲ್ಲಿ ಕವಿತೆಯ ಗುಂಗುಹಿಡಿಸಿಕೊಂಡು ಸಹೃದಯ ಓದುಗರಿಗೂ ಗುಂಗು ಹಿಡಿಸುತ್ತಿರುವುದು ಕಾವ್ಯಲೋಕದ ಸೋಜಿಗಗಳಲ್ಲೊಂದು.

**ಎಸ್. ವಿದ್ಯಾಶಂಕರ**

www.sriharikhoday.com

22-04-2011

ದೇವರ ವಿಚಾರಗಳಲ್ಲಿ
ಪಾಪ ಪುಣ್ಯಗಳ ವಿಶ್ಲೇಷಣೆಗಳಲ್ಲಿ
ಜೀವಿಗಳು ಸಂದೇಹ ಪಡುತ್ತಾರೆ

ದೇಹದ ಸುಖಗಳಿಗೆ ಕೊನೆಬರದ ಆಸೆಗಳು
ಬಾರಿ ಬಾರಿ ಗುಲಾಬಿಯ ಸುವಾಸನೆಯನ್ನು ಬಯಸುವ ಆಸೆ
ಮೂಸಿದಾಗಲೆಲ್ಲ ಹೊಸ ಅನುಭವಗಳು

ಎಲ್ಲವನ್ನು ಮರೆತು ಕ್ಲೇಷವಿಲ್ಲದ
ಹೊಸ ಕ್ರಿಯೆಗಳಿಗೆ
ಭೋಗದ ಆಸೆಗಳ ಉಲ್ಲಾಸಗಳು
ಮುಪ್ಪಿಲ್ಲದ ಅನುಭವ ಇಚ್ಛೆಗಳು

ನಿಷೆಯ ಬಟ್ಟಲು ಹೊಸ ಅನುಭವವನ್ನು ನೀಡಿ
ಹೊಸ ಬುಗುರಿಯ ಚಾಟಿಯ ಬಿಸಾಟ
ಹೊಸ ರೋಮಾಂಚನಗಳ ಅನುಭವಗಳು
ಮತ್ತೆ ಮತ್ತೆ ಗುಲಾಬಿಯನ್ನು ಮೂಸುವ ಆಸೆಗಳು

- ಶ್ರೀ ಹರಿ





28-04-2011


ನಿನ್ನ ಆಪ್ತ ದಾರಿಯಲ್ಲಿ ನೀನು ನನಗೆ ಕೊಂಡೊಯ್ದು
ಒಂದು ತನದ ಕಿವಿ ಮಾತುಗಳು
ನಾನಾಗಿದ್ದ ನಾನು ಈಗ ನೀನಾಗಿದ್ದೀಯ

ಲಭ್ಯವಾಗಿರುವ ಎಂದೂ ಕಾಣದ ಆಸೆಗಳು
ನಿನ್ನ ತೊಡೆಯ ಮೇಲೆ ಮಲಗಿರುವ ನಾನು
ಬಣ್ಣ ಬಣ್ಣ ಹೊಸ ಬಣ್ಣಗಳ ಸ್ವಪ್ನ ಕಾಣತೊಡಗಿದೆನು

ನಮ್ಮಿಬ್ಬರ ತುಟಿಗಳು ಮುಟ್ಟಿರುವ ಈ ನಿಷೆಯ ಬಟ್ಟಲು
ನಮ್ಮ ಕೈಕಾಲುಗಳು ದೇಹದ ಮೇಲೆ ಹರಸಿ
ದುಂಬಿ ಹೂವಿನ ಆಳದಲ್ಲಿರುವ ಜೇನನ್ನು
ಚುಂಬಿಸಿ ಹೀರುವಂತೆ ಚಿಂತನೆಗಳು ಏಕೆ ಎಂದು

ಚಂದಿರನ ಶೀತಲ ಕಾಂತಿಯ ಹಂದರದಲಿ
ನಮ್ಮಿಬ್ಬರ ಕ್ರಿಯೆಗಳನ್ನು ಕಾಲ ನಾಚುತ್ತಾ
ಓಡೋಡಿ ಮುಂದೆ ಓಡಿದೆ

- ಶ್ರೀ ಹರಿ





www.sriharikhoday.com

29-04-2011

ಅವಳಲ್ಲಿಟ್ಟ ನಂಬಿಕೆಯಿಂದ
ಸಿದ್ಧಿಯಾಗಿ ಬಂದಿರುವ ಪ್ರೀತಿಯನ್ನು ಏಕೆ ಬಿಡು ಎನ್ನುತ್ತೀರ

ದೇವರಲ್ಲಿ ಸ್ನೇಹಿತನಂತಿರುವ ನಾನು ಅವಳೆಡೆ ಸ್ನೇಹ ಬೆಳೆಸುತ್ತಿರುವೆ
ಗುಲಾಬಿಯನ್ನು ಮೂಸುವ ಇಚ್ಛೆಗಳು ಸಂಪ್ರದಾಯಗಳನ್ನು ಬಿಡಿಸಿ
ದ್ರಾಕ್ಷಾರಸದ ಮಾಧುರ್ಯ ವಿಶ್ವವನ್ನು ನಿರ್ಮಿಸಿರುವ
ಒಂದು ಮಹಾ ಶಕ್ತಿ ಜೊತೆಗಿರುವಂತೆ

ಅವಳ ಜೊತೆ ಹೆಂಗಸಾಗಿ ಹಂಗಿಸುತ್ತ ಗಂಡಸಾಗಿ ಹಾಸ್ಯ ಮಾಡುತ್ತ
ನಮ್ಮಿಬ್ಬರಿಗೆ ತೃಪ್ತಿ ತರುವ ದೇಹದ ಸುಖಗಳನ್ನು ಬಯಸುತ್ತಾ
ಪೌರುಷ ಯೋಗ್ಯತೆಗಳಿಗೆ ಅವಳು ಸಹಪಾಠಿಯಾಗಿ
ದೇಹದ ಸುಖದ ಉತ್ಕೃಷ್ಟತೆಗೆ ನಾವುಗಳು ತಲುಪಿ

ಬಾಯಿಂದ ಮಾತಾಡದ ಕ್ರಿಯೆಗಳನ್ನು ಮಾಡುತ
ಬೇರ್ಪಡಿಸಲಾಗದ ನಮ್ಮ ಜೋಡಿ, ದೇವರ ಜೊತೆಯಲ್ಲಿದ್ದಂತೆ

- ಶ್ರೀ ಹರಿ



03-05-2011

ಸವಾಲಿಗೆ ದೊರೆಯಬಹುದು ಜವಾಬು
ಕಷ್ಟಗಳಿಗೆ ದೊರೆಯಬಹುದು ಬೇಡಿದ ಸುಖ
ಒಂಟಿತನಕ್ಕೆ ದೊರೆಯಬಹುದು ಜೊತೆ ಜೀವಿಸುವ ಜೀವನ

ಈಗಿರುವ ಮನಸ್ಸು ಬೇರೆ ಹೊತ್ತಿನಲ್ಲಿರುವುದಿಲ್ಲ
ರಮಣೀಯವಾದ ಪ್ರದೇಶದಲ್ಲಿ ಒಲವಿನ ರಮಣೀಯ ಆಸೆ
ಅಂಗ ಚಲನೆಗೆ ಅನುಕೂಲಿಸುವ ಉದ್ದೇಶಗಳ ಬೇಡಿಕೆ

ಒಂದು ಮನೋ ವ್ಯವಸ್ಥೆಗೆ ಕಾವ್ಯ ಸಿದ್ಧವಾಗುವಂತೆ
ಮನೋ ಉಲ್ಲಾಸಕ್ಕೆ ಮತ್ತೊಬ್ಬರ ಜೊತೆ ಸೇರಿದಂತೆ
ಕಾಣಲು ಒಬ್ಬನಾಗಿ ಕಂಡರೂ ಆತನು ಇಬ್ಬರಲ್ಲಿರುವ ಒಬ್ಬನು

ನಗು ನಗುತ್ತ ತಲೆಬಾಗಿಸಿ ಬಂದದ್ದನ್ನು ಸ್ವೀಕರಿಸಿ
ನಮ್ಮಿಬ್ಬರ ಪ್ರೀತಿ ಜೋಡಿಸುತ್ತಿರುವ ಈ ನಿಷೆಯ ಬಟ್ಟಲು
ನಾಚಿಕೆಯನ್ನು ಮರೆಸಿ ಬಯಕೆಗಳನ್ನು ಹುಟ್ಟಿಸುತ್ತಿದೆ

- ಶ್ರೀ ಹರಿ



www.sriharikhoday.com

04-05-2011

ಗೋಳನ್ನು ಮರೆಸುವ ಗುಲಾಬಿ ಸುವಾಸನೆ
ಭೋಗಾನುಭವಗಳಿಗೆ ಔತಣ
ನಿತ್ಯವೂ ನಡೆಯುತ್ತಿರುವ ಜಗತ್ತಿನ ವಿನಾಶಗಳನ್ನು ನೋಡಿದರೆ
ಸುಖ ತರುವ ಚಿಂತನೆಗಳೇ ಶ್ರೇಷ್ಠ ಚಿಂತನೆಗಳು

ಮುಖದ ಭಾವದಿಂದ ರೂಪ ಹೊರ ಹೋಗಿ
ಭೋಗದ ಉಲ್ಲಾಸದ ಹುಡುಕಾಟ
ಜೀವನದ ಗೋಳನ್ನು ಮರೆಸುವ
ಸಮಾನ ಅಭಿಪ್ರಾಯವುಳ್ಳ ಜೋಡಿಯ ಬಯಕೆ

ಕೊರಗನ್ನು ಮರೆಸುವ ತುಟಿ ಚುಂಬನ
ಅಪ್ಪಿ ದೇವರನ್ನು ಪ್ರೀತಿಸುವಂತೆ
ಕನಸಲ್ಲಿ ಕನಸಾಗಿ ಭ್ರಾಂತಿಗಳು ನನಸಾಗಿ
ಭೋಗದಲ್ಲಿ ಚಿಂತನೆಗಳಿಲ್ಲದೆ ನಾವು
ಜೊತೆಯಲ್ಲಿ ಉಲ್ಲಾಸವಾಗಿರೋಣ

- ಶ್ರೀ ಹರಿ






11-05-2011

ಹೇ ನೆನಪುಗಳೇ ಕಳೆದುಹೋದ ಅವಳನ್ನು
ಮತ್ತೆ ನೆನಪಿಗೆ ತರಬೇಡಿ
ಹೇ ಋತುಗಳೇ ನಮ್ಮಿಬ್ಬರ ಪ್ರೀತಿಗೆ
ಸುರಿಸಿದ ಪುಷ್ಪವೃಕ್ಷ ನಿಮಗೆ ಮರೆತು ಹೋಯಿತೆ?

ನನ್ನ ಪ್ರೀತಿಯ ದೇಗುಲದಲ್ಲಿ ನಮ್ಮಿಬ್ಬರ
ಪ್ರೇಮದೀಪದ ಜ್ವಾಲೆ ಉರಿಯುತ್ತಲೇ ಇದೆ
ಅವಳ ರೂಪ ಕಣ್ಣಲ್ಲೇ ನಿಂತು
ದುಃಖದ ಕಣ್ಣೀರು ಸುರಿಸುತ್ತಿದೆ

ನೆನಪುಗಳೇ ಅವಳಿಗೊಂದು ಸಾರಿ ಹೇಳಿ
ನನ್ನ ಸ್ವಪ್ನಗಳಲ್ಲಿ ಅವತರಿಸಿ ನೆರಳಾಗಿರುವ ಅವಳ ರೂಪ
ನನ್ನಿಂದ ದೂರ ಹೋಗಿರುವ ಅವಳನ್ನು
ಮರುಜನ್ಮದಲ್ಲಿ ಜೊತೆ ಮಾಡಿ

- ಶ್ರೀ ಹರಿ





www.sriharikhoday.com

16-05-2011

ಕನಸೊಂದನ್ನು ಮುಂಜಾನೆಯಲ್ಲಿ ನಾ ಕಂಡೆನೆಂದರೆ ನಂಬುವಿರಾ
ದೂರದಿಂದೊಂದು ಸದ್ದಾಯಿತು
ಹೇಳಿದ್ದೇನು ಮಕ್ಕಳಿರಾ ಏಳಿ ನಿಷೆಯ ಬಟ್ಟಲನ್ನು ತುಂಬಿಕೊಳ್ಳಿ
ದೂರವಿರುವ ಮುಗುದೆ, ನಿನ್ನ ಒಲವಿನ ಜೊತೆ ಹತ್ತಿರ ಬಾ

ನಿಷೆಯ ಒತ್ತಡ ಆಸೆಗಳ ಒತ್ತಡ
ಬುಗುರಿಯಂತೆ ಎಸೆದು ನೋಡಿ
ಬಾನಲ್ಲಿ ಚೆಲ್ಲಾಡಿ ತಿರುಗುತ್ತಿರುವ ತಾರೆಗಳು
ನಾವಿಬ್ಬರು ಜೊತೆಯಾಗಿ ತಬ್ಬಿ ತಿರುಗೋಣ

ಸಾಕಾಗಿರವ ನಮ್ಮಿಬ್ಬರ ನಿದ್ರೆ
ಹುಡುಕಿ ಬಂದಿರುವ ನಮ್ಮ ಸಂಬಂಧ ತಬ್ಬಿ ಮುತ್ತಿಡುತ್ತ
ನಿನ್ನ ಒಲವು ನನ್ನ ಜೊತೆ ಆಕಾಶದಲ್ಲಿ ಬೆರೆತು
ನಿಷೆಯ ಬಟ್ಟಲು ಜೊತೆ ಹೊಸದನ್ನು ಅನುಭವಿಸೋಣ

- ಶ್ರೀ ಹರಿ

www.sriharikhoday.com






18-05-2011

ಜೀವನದಲ್ಲಿ ಕೆಲವು ಸತ್ಯಗಳು
ಸತ್ಯದ ಕಟ್ಟಡದಲ್ಲಿ ಹಲವು ಮಾತಾಡುವ ಕಿಟಕಿಗಳು
ಒಂದೊಂದು ಕಿಟಕಿಯಲ್ಲಿ ಹೊಸ ನೋಟದ ಭಾವ ಸ್ಪರ್ಶಗಳು
ಮಾತಾಡದೆ ಹೇಳುತ್ತಿವೆ ಮಾಣಿಕ್ಯದಂತಹ ಮಾತುಗಳು

ಜೀವನದಲ್ಲಿ ಕೊಡುವುದು ತೆಗೆದುಕೊಳ್ಳುವುದು ಒಂದು
ಹೋಗುವುದು ಬರುವುದು ಮತ್ತೊಂದು
ನೆನೆಯುವುದು ಮರೆಯುವುದು ಮತ್ತೊಂದರ ಜೊತೆಗೆ ಇನ್ನೊಂದು

ಹೇಳುವುದು ಕೇಳುವುದೆಂಬ ಸತ್ಯದ ನುಡಿಗಳು
ಸತ್ಯದ ಅರಿವನ್ನು ಮರೆತ ನಾವುಗಳು ಏನೂ ಸಾಧಿಸದೆ
ಗಾಳಿಯಂತೆ ಬಂದು ಹೋಗುವ ಈ ಜೀವನ ಜೀವನವಲ್ಲ

- ಶ್ರೀ ಹರಿ



19-05-2011

ನಿನ್ನ ಸೌಂದರ್ಯಕ್ಕೆ ಚಂದಿರನ ದೃಷ್ಟಿ ಆಗದಿರಲಿ
ನಿನ್ನ ಕೇಶರಾಶಿಯನ್ನು ಅಡ್ಡವಾಗಿಸು
ನಿನ್ನ ರೂಪ ಲಾವಣ್ಯಗಳಿಗೆ ಬೆರಗಾಗಿರುವ ನಾ
ನನ್ನ ದೃಷ್ಟಿ ನಿನಗೆ ಬೀಳದೆ ನಿನ್ನ ಸೆರಗನ್ನು ಅಡ್ಡವಾಗಿಸು

ನಿನ್ನ ಗುಂಡುಮುಖದ ರೂಪಕ್ಕೆ ಋತುಗಳು ಬೆರಗಾಗಿ
ಜಗವೆಲ್ಲಾ ಪುಷ್ಪರಾಶಿಯನ್ನು ಸುರಿಸಿವೆ
ನಿನ್ನನು ನನ್ನ ದೃಷ್ಟಿ ನೋಡದೆ
ನನ್ನ ಮನಸ್ಸಿನಿಂದಲೇ ನೋಡುತ್ತಿದ್ದೇನೆ

ನಿನ್ನ ರೂಪವನ್ನು ನಾಜೂಕಾಗಿ ನೋಡಿಕೋ
ನಿನ್ನ ರೂಪ ನೋಡಲು ಕಾದಿರುವ ಸೂರ್ಯನೆದುರು
ನೀ ಹೊರಗೆ ಬರದೆ ನಾಜೂಕಿನಿಂದ ರೂಪ ಕಾಪಾಡಿಕೊ
ನನ್ನ ಮನ ಯಾತನೆಪಡುತ್ತಿದೆ ನಿನ್ನ ರೂಪಕ್ಕೆ ಕನ್ನಡಿಯ
ದೃಷ್ಟಿ ಬೀಳದಿರಲು ನಾನೇ ನಿನ್ನ ಕೇಶರಾಶಿಯನ್ನು ಸರಿ ಪಡಿಸುವೆನು

- ಶ್ರೀ ಹರಿ






20-05-2011

ಸುಖ ಪಡುವುದಕ್ಕೆ ನಾಚಿಕೆ ಏಕೆ ?
ನಮ್ಮಲ್ಲಿ ತಾವೇ ಹುಟ್ಟುತ್ತಿರುವ ಆಸೆಗಳಿಗೆ
ಮುಚ್ಚಿಡುವ ಪ್ರಯತ್ನವೇತಕೆ ?

ದೇಹ ತುಚ್ಛ ಭೋಗ ನೀಚ ಇದು ವೇದಾಂತವೇ ?
ಕವಿ ಭಾವನೆಗಳ ನಾನಾ ವರ್ಣ ಕಾಂತಿಗಳನ್ನು
ಹೆದರಿಕೆಯೆಂಬ ಭಾವನೆಯಿಂದ ಅಳಿಸುವ ಪ್ರಯತ್ನವೇಕೆ ?
ಮಹಾನ್ ಶಕ್ತಿ ಎಂದೂ ಹೇಳದಿರುವ ಮಾತುಗಳನ್ನು
ಕಲ್ಪಿಸಿ ಮನ ಹರಿದಂತೆ ಹೇಳುತ್ತಿರುವಿರೇಕೆ ?

ಪ್ರತಿ ಸಲ ಗುಲಾಬಿಯನ್ನು ನಾ ಆಘ್ರಾಣಿಸಿದರೆ ನಿಮಗೇನಾಯಿತು?
ಗೋಳನ್ನು ಮರೆಸುವ ಭೋಗ ನಾ ಅನುಭವಿಸಿದರೆ ನಿಮಗೇನು ಕಷ್ಟ?
ಸತ್ಯವನ್ನು ಮನದ ಕಣ್ಬಿಚ್ಚಿ ನೋಡದೆ ಕುರುಡನ ನಾಲಿಗೆ
ಸತ್ಯವನ್ನು ನೋಡಿ ಸತ್ಯವನ್ನು ಹೇಳಿದಂತಿದೆ

- ಶ್ರೀ ಹರಿ





www.srharikhoday.com

21-05-2011

ನಾವುಗಳು ಧೂಳಲ್ಲಿ ಧೂಳಾಗಿ ಹೋಗಿ
ಮತ್ತೆ ಹುಲ್ಲಾಗಿ ಮೇಲೆ ಬೆಳೆದು
ದೊರೆತಷ್ಟು ಈ ಸಮಯದಲ್ಲಿ ಸುಖ ಅನುಭವಿಸೋಣ
ಅನುಭವಿಸಿದ ನಮ್ಮ ಸುಖ
ಬೇರೆಯವರಿಗೆ ತಿಳಿಸಿ
ಅವರನ್ನು ಸುಖಪಡಿಸೋಣ
ಈ ದೇಹ ಮಣ್ಣಾಗುವ ಮುನ್ನ ಸರಿ ತಪ್ಪು ಎಂಬ ಮಾತನ್ನು
ಜಗವೇ ಸರಿ ತಪ್ಪು ಅರಿಯದಿರುವ ಕಾರಣ
ಮನಸ್ಸಿನ ಕಷ್ಟಗಳಿಗೆ ಶೋಭಿಸಿದೆ
ಕಾಲ ನಮ್ಮಲ್ಲಿ ಹರಿಯುವವರೆಗೂ
ನಮಗೆ ಸರಿ ಎಂದು ತಿಳಿದ ಹಾಗೆ
ನಮ್ಮಿಬ್ಬರ ದೇಹಗಳು ಮರೆತು ಒಂದಾಗೋಣ

ಈ ನಡುಬಿಸಿಲು ನೆತ್ತಿಯ ಮೇಲಿರುವ ಸೂರ್ಯ
ನಮ್ಮ ಕ್ರಿಯೆಗಳನ್ನು ನೋಡಲು ಹಗಲಲ್ಲಿ ಬಂದಿರುವ ಚಂದಿರ
ನಮ್ಮ ರಸಿಕತೆಯ ಬಿಸಿಗೆ ಆಕಾಶವೇ ಕರಗಿ ಹೋಗುತ್ತಿದೆ

- ಶ್ರೀ ಹರಿ





www.sriharikhoday.com


23-05-2011

ಲೋಕದ ರಹಸ್ಯಗಳನ್ನು ಪುಸ್ತಕದಿಂದ ಪಡೆಯದೆ
ನಾವು ನೋಡಿ ಕಂಡ ಲೋಕದ ರಹಸ್ಯಗಳನ್ನು
ಅನುಭವಿಸಿ ಅನುಭವಿಸಿ ತಿಳಿಯೋಣ
ಪ್ರೇಮಿಗಳ ಪ್ರೇಮ ತಣಿಸುವುದರಲ್ಲಿದೆ ರಹಸ್ಯ
ತಳ್ಳಿಬಿಡೋಣ ಪುರಾಣಗಳ ಜಗಳಗಳು

ನಾಳೆ ಬೆಳಗಾಗುವುದ ನೋಡುವ ಭರವಸೆ ನಮಗಿಲ್ಲ
ಮಣ್ಣಲ್ಲಿ ಮಣ್ಣಾಗಿ ಹಸಿರಾದರೂ ನಮ್ಮನ್ನು ಮೆಚ್ಚುವರಾರು ?
ನಮ್ಮಿಬ್ಬರ ಬಿಡಿಸಲಾಗದ ಈ ನಂಟು
ಹೇ ಕಾಲಚಕ್ರವೇ ನಿನ್ನ ಛಲದಿಂದ ಬೇಡದನ್ನು ನಾಶಮಾಡಿಬಿಡು

ಈ ಜಗದ ಗೋಜುಗಳು ಯಾರಿಗೂ ತೃಪ್ತಿತರದ ಕಾರಣ
ಚೆಲುವನ್ನು ನೋಡಲು ಕಣ್ಣಿಲ್ಲದ ಕಾರಣ
ಸತ್ಯವನ್ನು ತಿಳಿಯಲು ಅರಿವಿಲ್ಲದ ಕಾರಣ
ಹೇ ನನ್ನ ಪ್ರಿಯಯೇ ನಾವಿಬ್ಬರೂ ತಬ್ಬಿಕೊಂಡು
ನಿಷೆಯ ಬಟ್ಟಲನ್ನು ಮುತ್ತಿಡುತ್ತ ನಾಳೆ ಬರುವ ಬೆಳಕಿನ ಜೊತೆ
ಪ್ರೀತಿ ಪ್ರೇಮಗಳ ರಹಸ್ಯ ಬೆಳಕಿಗೆ ತಿಳಿಸೋಣ

- ಶ್ರೀ ಹರಿ



23-05-2011

ಬೆಲೆ ಕಟ್ಟದಿರು ಈ ಜಗತ್ತಿಗೆ
ಬೆಲೆ ಕಟ್ಟದಿರು ಈ ಚೆಲುವಿಗೆ
ಅರ್ಥ ತಿಳಿಸದ ಅನ್ಯಾಯಗಳಿಗೆ
ಜಗವ ಕಟ್ಟುವರಂತೆ

ಮಧುವ ಸೇವಿಸಿ ಸಿತಾರವ ಮೀಟಿ
ನಮ್ಮಿಬ್ಬರ ಜೊತೆ ಇರುವ ಮನಸ್ಸಿನ ಲಾವಣ್ಯ
ಹಳೆಯ ದಿನಗಳನ್ನು ಮರೆತು
ಇಂದಿನ ಹೊಸ ದಿನವನ್ನು ಬಳಸಿಕೊಳ್ಳೋಣ

ನನಗೆ ಸಲಹುತ್ತಿರುವ ನಿನ್ನ ಪ್ರೀತಿ
ನಮ್ಮಿಬ್ಬರ ಜೊತೆ ಜೀವಿಸುತ್ತಿರುವ ನಮ್ಮ ಪ್ರತಿಜ್ಞೆ
ನಾವುಗಳು ಸೇವಿಸುತ್ತಿರುವ ಈ ಮಧುಪಾನ
ನಿನ್ನಲ್ಲಿ ನಾನು ನನ್ನಲ್ಲಿ ನೀನು
ನಮ್ಮ ಕ್ರಿಯೆಗಳಿಗೆ ಸಮಯ ಸಾಲದಿದ್ದರೆ
ಬೇಕಿರುವ ಕಾಲವನ್ನು ಹಣಕೊಡದೆ ಕೊಂಡುಕೊಳ್ಳೋಣ

- ಶ್ರೀ ಹರಿ



26-05-2011

ಮುಖದಿಂದ ರೂಪ ಹೊರಬರುವಂತೆ
ದುಃಖದಿಂದ ಸಂತಸ ಚಿಗುರುವಂತೆ
ನಮ್ಮಿಬ್ಬರ ಸ್ನೇಹ ಜೋಡಿಸುತ್ತ
ನಮ್ಮ ನಿಷೆಯ ಬಟ್ಟಲು ಮನಸ್ಸುಗಳಿಗೆ
ಕಾಲವಿಲ್ಲದೆ ಬೆಸುಗೆ ಆಗಿದೆ

ನಮ್ಮನ್ನೇ ಮರೆಸುತ್ತಿರುವ ಈ ಜೋಡಿತನ
ನಮ್ಮ ನಿಷೆಯಲ್ಲಿ ಹರಿಯುತ್ತಿರುವ ಭಾವನೆಗಳು
ನಮ್ಮನ್ನು ಬಣ್ಣಗಳ ಪಲ್ಲಕ್ಕಿಯಲ್ಲಿ ಕೂರಿಸಿಕೊಂಡು
ಬಣ್ಣಗಳ ಕುಣಿತಕ್ಕೆ ನಾವುಗಳು ನಕ್ಕು ನಕ್ಕು
ಅರಳಿದ ಸಂತಸ ಜಗಕ್ಕೆಲ್ಲಾ ಚೆಲ್ಲುತ್ತ

ನಮ್ಮನ್ನು ಸೃಷ್ಟಿಸಿದ ಪ್ರಕೃತಿ
ನಮ್ಮ ಜೊತೆ ಗಂಡಾಗಿ
ನಮ್ಮ ಜೊತೆ ಹೆಣ್ಣಾಗಿ
ನಮ್ಮ ಕ್ರಿಯೆಗಳನ್ನು ನೋಡಿದ ಪ್ರಕೃತಿ
ಕ್ರಿಯೆ ಮಾಡದೆ ಸುಖಪಡುತ್ತಿದೆ

-ಶ್ರೀ ಹರಿ

www.sriharikhoday.com

28-05-2011

ಹೇ ಪ್ರಿಯೆ, ನೋಡು ನಮ್ಮೆದುರು
ಲಜ್ಜೆಯಿಲ್ಲದೆ ಕ್ರಿಯೆ ಮಾಡುತ್ತಿರುವ ಸೂರ್ಯನ ಕಿರಣಗಳನ್ನು
ಲಜ್ಜೆಯ ಹೊದಿಕೆಯಿಲ್ಲದ ಗಾಳಿಯ ಬೀಸಾಟ
ಅಗೋ! ನೋಡು ಲಜ್ಜೆಯಿಲ್ಲದ ಬೆಟ್ಟಗುಡ್ಡಗಳು
ಓ ಪ್ರೇಯಸಿಯೆ ಲಜ್ಜೆಯಿಲ್ಲದೆ ಜೊತೆಯಾಗೋಣ

ನನ್ನ ಕಾವ್ಯ ಕಲಾ ವ್ಯಾಸಂಗಕ್ಕೆ ಲಜ್ಜೆಯೆಲ್ಲಿ?
ನಮ್ಮ ನಿಷೆಯ ಬಟ್ಟಲನ್ನು ಮುತ್ತಿಟ್ಟು ಸೇವಿಸಲು ಲಜ್ಜೆಯೆಲ್ಲಿ?
ಎದುರು ಬಂದು ನಿಂತಿರುವ ಬಣ್ಣಗಳೇ
ನಮ್ಮನ್ನು ನೋಡಿ ಇಳಿದು ಬಂದಿರುವ
ಬೆಳ್ಳಿಯ ಚಂದಿರನ ಕಿರಣಗಳಿಗೆ
ನಮ್ಮಂತೆ ಮುಕ್ತ ಭಾವನೆಗಳುಳ್ಳ ಅವುಗಳಿಗೆ ಲಜ್ಜೆಯೆಲ್ಲಿ?

ಸತ್ಯಕ್ಕೆ ಲಜ್ಜೆಯಿಲ್ಲದ ಕಾರಣ, ಪ್ರೀತಿಗೆ ಲಜ್ಜೆ ಇಲ್ಲದ ಕಾರಣ
ನಮ್ಮ ನಿರ್ಮಲ ಭಾವನೆಗಳಿಗೆ ಲಜ್ಜೆ ಇಲ್ಲವಾದ ಕಾರಣ
ನಮ್ಮ ದೇಹಗಳು ಲಜ್ಜೆ ತಿಳಿಯದ ಕಾರಣ
ನಾವುಗಳೆಲ್ಲವನ್ನು ಮರೆತು ಲಜ್ಜೆಯಿಲ್ಲದ ಪ್ರಕೃತಿಯಂತೆ
ಬದುಕಿನ ಕ್ರಿಯೆಗಳನ್ನು ನಾವು ಮರೆತು ಜೊತೆ ಸಾಗೋಣ

- ಶ್ರೀ ಹರಿ





www.sriharikhoday.com


31-05-2011

ನೀವು ಇಂದು ಇರುವುದು ನಿಜವಾಗಿದ್ದರೆ
ಯಾವುದೋ ಒಂದು ಕಾರಣದಿಂದ ಇರಬಹುದಾಗಿದ್ದರೆ
ಈ ಜನ್ಮಗಳು ಸಾಕು ಬೇಕುಗಳೆಂಬ ಭಾವನೆ
ಮನದ ತಾಪತ್ರಯ ಮತ್ತು ಗೋಳಾಟಗಳನ್ನು ಮರೆತು
ನಾವಿಬ್ಬರು ಜೊತೆ ಉಲ್ಲಾಸದಿಂದ ಇರೋಣ
ಇದು ಧರ್ಮ ಮತ್ತೊಂದು ಅಧರ್ಮ
ಈ ಮನೋ ಪ್ರಕೃತಿ ಪ್ರಕೃತಿಯ ಬೇರನ್ನು ಮರೆತು
ರೂಪವಿಲ್ಲದ ಧರ್ಮಗಳನ್ನು ತಾವುಗಳು ನೋಡಿದಂತೆ ಮಾತಾಡಿ
ಧರ್ಮದ ಅಂತಃರಂಗಗಳನ್ನು ಜಗಜೀವಿಗಳು ಕಾಣದಾಗದಿಂದು

ಮನಗಳನ್ನು ಗಮನಿಸಿ ಮಾಡಿಕೊಳ್ಳಬೇಕಾದ ಸಂತಸ
ಪ್ರಕೃತಿಯ ಬೇರನ್ನು ಅನುಸರಿಸಿ
ಅದರ ಜೊತೆ ಸೇರಿ ಬೇಡದ್ದನ್ನು ಮರೆಸುವ
ಈ ನಿಷೆಯ ಬಟ್ಟಲನ್ನು ಸೇವಿಸಿ

ಅಂತರ್‌ಭಾವನೆಗಳಲ್ಲಿ ಅಡಗಿರುವ ಸುಖದ ಖಜಾನೆಯನ್ನು
ನಾವುಗಳು ಜೊತೆಯಾಗಿ ಅಳೆಯೋಣ ಅಳೆದು ಸುರಿಯೋಣ
ಅಳೆಯೋಣ ಮತ್ತೆ ಸುರಿಯೋಣ

- ಶ್ರೀ ಹರಿ



31-05-2011

ಕತ್ತಲಲ್ಲಿ ಹಾಲಿನ ಬಟ್ಟಲನ್ನು ಹಿಡಿದು
ದೀಪವಾರಿಸಿ, ಜೀವನದ ದೀಪ ಹಚ್ಚಲು
ಹತ್ತಿರ ಬಾ ಪ್ರಿಯತಮೆ

ನೀ ಹತ್ತಿರ ಬರಲು ಹೆಜ್ಜೆ ಜೊತೆ ಗೆಜ್ಜೆಯ ಸದ್ದು
ಕತ್ತಲಲ್ಲಿ ಮಾಯವಾಗಿ ನಮ್ಮ ನೆರಳು
ನನ್ನಯ ಕರುಳನ್ನು ಹಿಂಡುತ್ತಾ ಹತ್ತಿರ ಬರತಿಹಳು
ಒಂದೆಡೆ ಹೆದರಿಕೆ ಮತ್ತೊಂದೆಡೆ ಸಂತಸ

ನನ್ನ ಪ್ರೀತಿಯ ಬಲೆಗೆ ನೀ ನಿನ್ನ ಪ್ರೀತಿಯ ಬಲೆಗೆ ನಾ ಸಿಲುಕಿ
ಆಕಾರದಲ್ಲಿ ನೋಡಿ ನನ್ನ - ನಿನ್ನ ರೂಪ
ಕತ್ತಲಲ್ಲಿ ನಾವಿಬ್ಬರು ಎಂದೂ ಕಂಡಿಲ್ಲದ ಬಣ್ಣಗಳು
ತೀರದ ಸುಖದ ಅನುಭವದ ತುಂಟಾಟ

ಕತ್ತಲಲ್ಲಿ ಹಾಲಿನ ಬಟ್ಟಲಿಡಿದು
ದೀಪ ಆರಿಸಿ ಬಾ ಪ್ರಿಯತಮೆ

- ಶ್ರೀ ಹರಿ



31-05-2011

ಕೊರಗಿ ಕೊರಗಿ ಕೊರಗಿನಿಂದಾದ
ಮನೋಭಾರ ಯಾರಿಂದಲೂ ಎತ್ತಲಾಗಲಿಲ್ಲ
ಕೊರಗು ಮರೆತುಬಿಡೋಣವೆಂದರೆ
ಮರೆಯಲಾಗಲಿಲ್ಲ

ಅವಳು ನನ್ನ ಮನಸ್ಸಿನಾಳದಲ್ಲಿ
ಸಿಲುಕಿಕೊಂಡು ನೆಲೆಸಿ ದಾಳಿ ಇಟ್ಟು
ನನ್ನ ಮನಸ್ಸು ಎಚ್ಚರಗೊಂಡು
ಕಣ್ಣು ತೆರೆದು ನೋಡೆ ಎಲ್ಲ ವಸ್ತುಗಳು
ಅವಳಂತೆ ಸೆಳೆಯಲಿಲ್ಲ

ಬಿಡುವಿನ ಸಮಯ ನಾನು ಅವಳನ್ನು ನೆನೆದು
ಮನೋಭಾರ ಇಳಿದು ತಿಳಿಯಾಗಿ
ದೊರೆತ ಕ್ಷಣದ ಅವಕಾಶ
ಅವಳ ಚಿಂತನೆಯಿಂದ ಸತ್ತಂತಿದ್ದ ಮನವು
ಉಲ್ಲಾಸಿತವಾಗಿ ಉಸಿರಾಡಿತು

- ಶ್ರೀ ಹರಿ



www.sriharikhoday.com

01-06-2011

ನಮ್ಮಗಳ ಒಂದೊಂದು ತರಹದ ಮನಸ್ಸು ಒಂದು ಕವನವಾಗಿ
ನಾವುಗಳು ನಮ್ಮನ್ನು ಮರೆತು ಆಲೋಚಿಸಿದ ತರಂಗಗಳು
ಸುಮ್ಮನಿರುವ ಸಮುದ್ರವನ್ನು ಅಲ್ಲಾಡಿಸಿದಂತೆ
ಎಲ್ಲಿಂದಲೋ ಮನದಲ್ಲಿ ಮನ ಸುಂಟರಗಾಳಿಗೆ ಸಿಲುಕಿದಂತಿದೆ

ಸತ್ಯ ನಮ್ಮ ಸ್ವಭಾವದಲ್ಲೇ ಅಡಗಿರುವುದನ್ನು ನೋಡುತ
ಮನಸೊಪ್ಪುವ ಜೀವನದಿ ಸೊಬಗನ್ನು ಸವಿಯುತ್ತ
ಪ್ರತಿ ಸಲ ಗುಲಾಬಿಯನ್ನು ಮೂಸಿಸುತ
ಅವಸರವಿಲ್ಲದೆ ನಿಧಾನವಾಗಿ ಸುಖವನ್ನು ಅನುಭವಿಸೋಣ

ಕೇಳದೆ ತಾವಾಗಿ ಬರುತ್ತಿರುವ ಅಂತರಂಗದ ಭಾವನೆಗಳಿಗೆ
ಪ್ರೀತಿಯಿಂದ ಬರಮಾಡಿಕೊಂಡು ನಮ್ಮಿಬ್ಬರರಿಗೆ ತಿಳಿದಿರುವುದನ್ನು
ಭಾವನೆಗೆ ಹೇಳಿ ತೋರಿಸಿ, ಆತಂಕವಿಲ್ಲದ ಸುಖವನ್ನು ಅನುಭವಿಸುತ
ಹೊಸತರ ಜೊತೆಗೆ ಜೊತೆಯಾಗಿ ಅದರಲ್ಲಿ ಹೊಸದರ ಜೊತೆಗೆ
ಬೆರೆಯೋಣ

- ಶ್ರೀ ಹರಿ






03-06-2011

ನಂಬಿಕೆ ಅಪನಂಬಿಕೆ
ಉಲ್ಲಾಸಕ್ಕೆ ಅಡ್ಡವಾಗಿ ನಿಂತಿರುವ ಗೋಡೆ
ಅಳುವು ನಗುವು ಒಂದೇ ನಾಣ್ಯದ ಎರಡು ಮುಖಗಳು
ನಗುತ ನಗುತ ತಲೆಬಾಗುವುದು ತಪ್ಪೇನಿಲ್ಲ

ಇಂದು ನಾವು ಸೂರ್ಯ ಚಂದ್ರರಿಗೆ ನಕ್ಷತ್ರಗಳನ್ನು ತೋರಿಸೋಣ
ಇಂದು ನಾವು ಸಮುದ್ರಕ್ಕೆ ಮುಗಿಲ ಮುಟ್ಟಿಸೋಣ
ಇಂದು ಕತ್ತಲಿಗೆ ಬೆಳಕ ಪರಿಚಯ ಮಾಡಿಸೋಣ
ಸಾವಿರ ಕವನಗಳ ಅರ್ಥವನ್ನು ಜಗಕೆ ಇಂದು ಹೇಳಿ ಮೆರೆಯೋಣ

ಇಂದು ನಾವುಗಳು ಹೆಚ್ಚಾಗಿ ಕುಡಿದು
ನಾವಿಂದು ಎಂದಿಲ್ಲದ ಅತಿ ಎತ್ತರಕ್ಕೆ ತಲುಪಿ
ಗಾವುದ ದೂರವಿದ್ದ ನಿನ್ನನ್ನು ಪ್ರಕೃತಿ ಜೊತೆ ಮಾಡಿ
ಇಂದು ಎರಡಾಗಿದ್ದ ನಾವುಗಳು ಒಂದಾಗಿ
ಕೊರಗಿಲ್ಲದ ದೆಶೆಯಲ್ಲಿ ಪಯಣ ಮಾಡುತ್ತ
ಗುಲಾಬಿಯನ್ನು ಜೊತೆಯಲ್ಲಿ ಮೂಸಿ ನೋಡೋಣ

-ಶ್ರೀ ಹರಿ





www.sriharikhoday.com

ತಿಳಿದವನು ಏನೂ ಹೇಳುವುದಿಲ್ಲ
ಹೇಳುವವನು ಏನೂ ತಿಳಿದಿರುವುದಿಲ್ಲ
ಇದೇ ಸತ್ಯದ ಒಗಟು ಈ ಮನೋ ಕೊರಗು
ಉಮರನ ನಿಷೆಯ ಬಟ್ಟಲಿಗೆ ತಿಳಿದದ್ದು

ಈ ಕೊರಗಿನ ಸವಾಲಿಗೆ ಏನು ಜವಾಬು
ಒಬ್ಬ ಗಂಡಿನ ಮನಸ್ಸಿನಲ್ಲಿ ಹೆಣ್ಣಿರುವಂತೆ
ಒಂದು ಹೆಣ್ಣಿನ ಮನಸ್ಸಿನಲ್ಲಿ ಗಂಡಿರುವಂತೆ
ಈ ಇಬ್ಬರ ಜೊತೆ ಮಾತ್ರ ಸತ್ಯದ ಒಗಟನ್ನು ಬಿಡಿಸೋಣ

ಸಾವಿರ ಮನೋಸ್ಥಿತಿಗಳು ಒಂದು ಕಾವ್ಯವನ್ನು ಸಿದ್ಧಪಡಿಸುವಂತೆ
ಮೃತ್ಯುಸ್ಮರಣೆ ಇಲ್ಲದ ಉಲ್ಲಾಸ ಜೀವನವನ್ನು ಅನುಭವಿಸುತ್ತ
ಬಾರಿ ಬಾರಿ ಗುಲಾಬಿಯನ್ನು ಮೂಸಿಸುತ
ನಿಶೆಯ ಬಟ್ಟಲ ಮುತ್ತಿಟ್ಟು ನಾವಿಬ್ಬರು ಜಗವ ಮರೆಯೋಣ

ಹೆಣ್ಣಿನ ಪಾನಕದಲ್ಲಿ ಪ್ರೀತಿಯ ಸಕ್ಕರೆಯನ್ನು ಸೇರಿಸಿ
ಇಬ್ಬರಂತೆ ಕಂಡರೂ ಒಬ್ಬರಾಗಿರುವ ನಮ್ಮ ಜೀವನ ರಹಸ್ಯ
ಉಮರನು ಹೇಳದೆ ಜಗತ್ತಿಗೆ ತನ್ನ ಕ್ರಿಯೆ ರೂಪದಲ್ಲಿ
ಎಲ್ಲವನೂ ತೋರಿಸಿರುವನು

- ಶ್ರೀ ಹರಿ



www.sriharikhoday.com



ಈ ಜೊತೆಯಲ್ಲಿರುವ ಸಮಯಗಳು ಚಪ್ಪರಿಸಿ
ಮನಸೊಪ್ಪುವಂತೆ ಸುಖವನ್ನು ಅನುಭವಿಸೋಣ
ಸ್ವಾತಂತ್ರ್ಯದ ಹಂದರದಲ್ಲಿರುವ ನಾವುಗಳು ಸಾವಿಗೆ ಹೆದರದೆ
ಒಂದೊಂದು ಬೇರೆ ಬೇರೆಯಾಗಿ ಬಾಧಕವಿಲ್ಲದ ಇರುವಿಕೆಯ
ನೆರಳಲ್ಲಿ ಗುಲಾಬಿಯ ಬಣ್ಣಗಳನ್ನು ನೋಡೋಣ

ಜಗತ್ತಿನ ಸುಖದ ಮರ್ಮ ದೇವರು ಬಚ್ಚಿಟ್ಟಿರುವನು
ಧೂಳಿನಿಂದ ನಗುವ ಹಸಿರು ಸಂತಸವ ಬೆಳಗುವಂತೆ
ನೋಡುವವರಿಗದು ಅಪಾರ್ಥವಾದರೆ ಇಂದ್ರಿಯಸುಖಗಳಿಗೆ
ಒಂದು ಕಾರಣವಿರುವಂತೆ ಚಿತ್ತದ ವಿಕಾಸದಲ್ಲಿ ಹರಡಿ ನೋಡಿ
ತಿಳಿದ ವಿಚಾರವೇನೆಂಬುದು ಭೋಗದ ಭಾವನೆಗಳನ್ನು
ಪಡೆಯುತ ಗುಲಾಬಿಯನ್ನು ಮೂಸಿ ನೋಡೋಣ

ದೇಹದ ಆಸೆಗಳಿಗೆ ತ್ಯಾಗ ಪ್ರಚೋದಿಸದೆ
ಹರಿದು ಬರುವ ಭೋಗದ ಅನುಭವಗಳನ್ನು ಖಂಡಿಸದೆ
ಸೃಷ್ಟಿಯಲ್ಲಿ ಹರಡಿರುವ ಭೋಗದ ನಿಯಮಗಳನ್ನು
ಅನುಸರಿಸಿ ಮದ್ಯ ಕೀರು, ತಾಂಬೂಲ ಗುಲಾಬಿಗಳನ್ನು
ದೇವರು ನಿರ್ಮಿಸಿರುವನೆಂದು ಅನುಭವಿಸುವುದರಲ್ಲಿ
ತಪ್ಪೇನಿಲ್ಲವೆಂದು ಗುಲಾಬಿಯ ಕೋಮಲತೆಯನ್ನು ಜೊತೆಯಲಿ
ಅನುಭವಿಸೋಣ

- ಶ್ರೀ ಹರಿ

09-06-2011

ಮೂಕನಿಗೆ ನುಡಿಯಿಲ್ಲ
ಸವಿಯನ್ನು ಸನ್ನೆಯಿಂದ ತೋರಿಸಲಾರ
ನಮ್ಮಿಬ್ಬರಲ್ಲಿರುವ ಪ್ರೀತಿ ಸನ್ನೆಯಿಂದ ತೋರಿಸದೆ
ಜೊತೆ ಸೇರಿ ಅನುಭವಿಸಿ ವ್ಯಕ್ತಪಡಿಸೋಣ

ಚಂದಿರನ ಸೊಬಗು ಮೀರಿಸುವ ನಿನ್ನ ರೂಪ
ಸನ್ನೆಗಳನ್ನು ನೀಡುತ್ತಿರುವ ನಿನ್ನ ಸೌಂದರ್ಯ
ನಿನ್ನನ್ನು ಯಾರೂ ನೋಡದೆ ಮನದ ಕದವ
ಮುಚ್ಚಿಕೊಂಡು ನಮ್ಮಿಬ್ಬರ ಜೊತೆಯ ಕ್ರಿಯೆಗಳು
ಕತ್ತಲಿಗೆ ಸುಖ ಬರುತ್ತಿದೆ

ಒಂದು ಕಡೆ ದೇವರ ನೆನಪು ಮತ್ತೊಂದೆಡೆ ನಿಶೆಯ ಬಟ್ಟಲು
ಸತ್ತ ಮೇಲೆ ಸಿಗದ ಈ ರೋಮಾಂಚನ ಖಜಾನೆಯ
ಜೊತೆ ದೊರೆಯುತ್ತಿರುವ ಪರಸ್ಪರ ಲಾಭಗಳು
ದೇವರ ಹತ್ತಿರ ಕೊಂಡೊಯ್ದು ದೇವರನ್ನು
ಶ್ಲಾಘಿಸಲು ಪದಗಳಿಲ್ಲವಾಗಿದೆ

- ಶ್ರೀ ಹರಿ






10-06-2011

ಜ್ಞಾನಕ್ಕೆ ಶ್ರೇಯಸ್ಸನ್ನು ಸಲ್ಲಿಸುವುದೇ ಈ ಧರ್ಮ
ಇದುವೇ ಹರಿದು ಹೋಗಿರುವ ಕಾಲದ ಚರಿತ್ರೆ
ಇಂದಿದ್ದು ನಾಳೆ ಹೋಗುವವರು ನಾವು
ಹಳೆಯದನ್ನು ಮರೆತು ಹೊಸದನ್ನು ಅನುಭವಿಸದೆ
ಭೂತ ಭವಿಷ್ಯ ವರ್ತಮಾನಗಳು ತೇಲಾಡುತ್ತಿವೆ

ಈ ಜಗತ್ತು ಕಾರಣವಿಲ್ಲದೆ ತಳಮಳಕ್ಕೆ ಸಿಲುಕಿ ನಿಶೆಯ
ಅಮಲಿನಲ್ಲಿ ಶುದ್ಧವಾದ ಭಾವನೆಗಳಿದ್ದಲ್ಲಿ ನಾಲ್ಕೈದು
ಅಕ್ಷರಗಳಿಂದ ಕವನ ಬರೆಸುವ ಈ ನಿಶೆಯ ಬಟ್ಟಲು
ಮನಸ್ಸಿನ ಕುಂಚ ಭಾವನೆಗಳಿಂದಾದ ಚಿತ್ರ
ಎಂದೂ ಮರಣ ಬರದ ಕವನಗಳನ್ನು ಸೃಷ್ಟಿಸಿದೆ

ಬದಲಿಸುವವನು ಪಂಡಿತನಾದರೆ ಅವನ ಮಾತುಗಳನ್ನು
ಜನರು ನಂಬಿ ಜೀವನದಲ್ಲಿ ಸತ್ಯದ ಗುರಿಯನ್ನು ಸಾಧಿಸಲಾಗದೆ
ನಾ ಕುಡಿದು ಪಂಡಿತನಾಗದೆ ಪ್ರಕೃತಿಯ ಎಲ್ಲ ಕ್ರಿಯೆಗಳನ್ನು
ಅನುಭವಿಸಿ, ನನ್ನ ಕಾಂತೆಯೊಡನೆ ಬೆರೆಯುವುದ ಕಲಿತು
ನನ್ನ ಅಮಲಿನ ಜೊತೆ ನಾ ವಿಶ್ವದಲ್ಲಿ ಬೆರೆತಂತಿದೆ

- ಶ್ರೀ ಹರಿ





www.sriharikhoday.com

11-06-2011

ಕೊನೆಯ ಕಾಣಲು ಕಣ್ಣಿಲ್ಲದ ಭಾವನೆಗಳು
ಬೆರೆತು ಜೊತೆಯಾಗಲು ಕಾದಿರುವ ಪ್ರಕೃತಿ
ಕಾಣುವ ಎದುರಲ್ಲಿ ಬೆರೆಯಲು ಕಾದಿರುವ ಅದು
ನಾ ಪ್ರಕೃತಿಯೆಂದು ಹೇಳಲು ಹೆದರಿಕೆ

ಇಂದಿರುವಂತೆ ನಾಳೆಯಿಲ್ಲದ ಸತ್ಯ
ಚಿಟ್ಟೆಯ ರೆಕ್ಕೆಗಳ ಬಡಿತದ ಸದ್ದು
ಸೂರ್ಯನಿಗೆ ದಿಗಂತದಲ್ಲಿ ಚಿಟ್ಟೆಗಳು ನೀಡುತ್ತಿರುವ
ಬಣ್ಣಗಳ ಸಾಹಸ ತನಗೇ ತಿಳಿಯದೆ
ಪ್ರಕೃತಿಯ ತರಂಗಗಳು ಬೆಳೆಯುತ್ತಿವೆ

ನನ್ನನ್ನು ಮರೆಸಿ ಸತ್ಯದ ಜೊತೆ ಬೆರೆಸಿದ ನಿಶೆಯ ಬಟ್ಟಲು
ಈ ದೇಹದಿಂದ ಅರ್ಥವಾಗದ ವಿಶ್ವದ ರಹಸ್ಯಗಳು
ನನ್ನಲ್ಲಿ ಹರಿದುಹೋಗುವಂತೆ ಮಾಡಿದ ಜ್ಞಾನಾಮೃತ
ಕಾಂತೆಯ ಜೊತೆ ನಾವುಗಳು ನೋಡಿದ ವಿಶ್ವದರ್ಶನ
ಕನ್ನಡಿಯಂತಿರುವ ನನ್ನ ಮನಸ್ಸಿಗೆ ಕುರುಡು ತಂದಿದೆ

- ಶ್ರೀ ಹರಿ





13-06-2011


ಕವಿಯ ಹೃದಯದಲ್ಲಿ ಅಡಗಿರುವುದೊಂದು
ಜೀವವಲ್ಲ ಹತ್ತಾರು ಜೀವಗಳು
ಕವಿಯ ಕಂಠ ಒಂದು ಧ್ವನಿಯಲ್ಲ
ಕೋಟಿ ಜನರಲ್ಲಿ ಅಡಗಿರುವ ಕಷ್ಟ-ಸುಖಗಳ ಧ್ವನಿ

ಸಮಾಜವನ್ನು ಸರಿಪಡಿಸುವ ಬರವಣಿಗೆ
ಹುಲ್ಲಿನ ನಗುವನ್ನು ನೋಡಿಸುವ ನೋಟ
ಪ್ರೇಮಿಗಳ ಪ್ರೇಮ ಓಡಾಡುವ ಸೇತುವೆ
ಎಲ್ಲವೂ ದೇವರ ಪ್ರಸಾದವೆಂದು ಸ್ವೀಕರಿಸಸುವ ಮಹಾನ್ ಜೀವಿ

ಭಾವನೆಗಳನ್ನು ಒಗಟಾಗಿ ಬರೆದು
ಓದುಗರು ಒಗಟನ್ನು ಸಡಿಲಪಡಿಸುವ ಪ್ರಯತ್ನದಲ್ಲಿ
ಹೊಸ ಅನುಭವಗಳಾಗುವಂತೆ
ಹೊಸ ಜೀವನದ ನೋಟ ದೊರಕಿದಂತೆ

ಓದುಗರಿಗೆ ಕವಿಗಳಾಗುವ ಜಾಲ
ಒಂದೇ ಬಣ್ಣದ ಕುಡಿಕೆಯಿಂದ ನೂರಾರು ಬಣ್ಣಗಳನ್ನು
ಹೊರ ತೋರಿಸುವ ಕವಿ ಹೃದಯ
ಜಗತ್ತಿಗೆ ಹೊಸ ದಿಗಂತ ತೋರಿಸುವವನೇ ಕವಿ

- ಶ್ರೀ ಹರಿ





www.sriharikhoday.com

ಬಯಕೆಯಲ್ಲಿ ದೋಷವೇನಿದೆ ? ಮನಸ್ಸಿನ ಉಲ್ಲಾಸ
ಬಯಸುವುದರಲ್ಲಿ ತಪ್ಪೇನಿದೆ ? ಎರಡು ಹನಿ
ದ್ರಾಕ್ಷಾರಸದ ಗುಟಕಲ್ಲಿ ಕೆಟ್ಟದ್ದೇನಿದೆ ?
ಕಾಂತೆಯ ಜೊತೆ ಅಪೇಕ್ಷಿಸುವುದಕ್ಕೆ ಭೇದವೇತಕೆ ?

ಸುಖ ಬಯಸುತ್ತ ಕೊರಗುವುದೇತಕೆ ?
ವಸಂತ ಬಂದಾಗ ಹೂವು ಅರಳಿಸುವುದು ಕಷ್ಟವೇ ?
ಪಾಲಿಗೆ ಬಂದಿರುವ ಭೋಗಕ್ಕೆ ಅಡಚಣೆಯೇತಕೆ ?
ಕೇಳುತ್ತಿರುವ ಮನಸ್ಸಿನ ಸದ್ದು ಕೇಳಿಸಿಕೊಳ್ಳದೆ
ಮನಸ್ಸಿನ ನಿಘಂಟಿನ ಅರ್ಥವೇತಕೆ ?

ಪ್ರಶ್ನೆಗಳ ಕೇಳುವ ಮನಸ್ಸು ಆಗದೆ ಕಷ್ಟಗಳಿಗೆ ಉತ್ತರ
ಕೊಡುವ ಉತ್ತರಗಳಾಗಿ ಕೊರಗಿನ ಭಾರವನ್ನು ಮನಸ್ಸಿನಲ್ಲಿಳಿಸಿ
ಎಲ್ಲದ್ದರಿಂದ ದೂರ ಹೋಗಿ ಯಾರೂ ನೋಡದ ಅನುಭವಗಳನ್ನು
ನೋಡಿ, ಯಾರೂ ಅನುಭವಿಸದ ಅನುಭವಗಳನ್ನು ಪಡೆದು
ಭಾರವಿಲ್ಲದ ಹಗುರಿನಲ್ಲಿ ನಾವಿಬ್ಬರೂ ತೇಲಾಡೋಣ

- ಶ್ರೀ ಹರಿ

www.sriharikhoday.com







ಸೃಷ್ಟಿಗೆ ಸಂಕಲ್ಪವುಂಟು ನಾನು ಯಾವ ಸಂಕಲ್ಪ
ಮಾಡಲಿ ಕಷ್ಟಗಳು ಬರಲೆಂದು ಸಂಕಲ್ಪಿಸಲೇ
ಯಾವುದರ ಜೊತೆ ಬೆರೆಯಲೆಂದು ಸಂಕಲ್ಪಿಸಲಿ
ಎಲ್ಲರ ಜೊತೆ ಬೆರೆಯಲೆಂಬುದ ಸಂಕಲ್ಪಿಸಲೇ?
ಸಂಕಲ್ಪಗಳಿಂದ ಆಸೆ ಹೊರತೋರಿಸಲೇ ?

ದ್ವೇಷಗಳಿಗೆ ಅಸೂಯೆಗಳೇ ಸಾಮಗ್ರಿ
ದ್ವೇಷಿಗಳಿಗೆ ನಿಂದನೆಯೇ ಸಾಮಗ್ರಿ
ಯಾರಿಗೂ ನೆಮ್ಮದಿಕೊಡದ ದ್ವೇಷಿಗಳು
ದ್ವೇಷಿಗಳಿಗೇ ಇದು ತಿಳಿಯಲಾಗಿದೆ
ದ್ವೇಷಿಗಳಿಗೆ ದ್ವೇಷ ಸಾಧಿಸಲು ಅವರ
ಸಾಧನೆಗೆ ಸುಖ ಬರುವುದೆಂದು ಭ್ರಾಂತಿ
ತಿಳಿದವನು ಸುಖಪಟ್ಟವನು ಸುಖ ಕೊಡಬಲ್ಲ

ಸುಖಪಡಲು ಸೃಷ್ಟಿಸಿಕೊಂಡಿರುವ ಸೃಷ್ಟಿ
ಸೃಷ್ಟಿಯ ಬೆಳೆಯಾದ ನಾವುಗಳು ಸುಖಪಟ್ಟರೆ
ಸೃಷ್ಟಿಗೆ ಸುಖದ ಅಮಲು ದ್ರಾಕ್ಷಾರಸದ ಅಮಲಂತೆ
ಸೃಷ್ಟಿಯ ಅಮಲು ಈ ಅರಿವಿನಿಂದಲೇ
ಗುಲಾಬಿಯನ್ನು ಮೂಸಿಸುತ
ಜಗತ್ತಿನ ಎಲ್ಲಾ ಸತ್ಯಗಳನ್ನು ಅರಿತು

ಕಾಂತೆಯೊಡನೆ ಭೋಗಾನುಭೋಗಗಳಲ್ಲಿ
ಸೃಷ್ಟಿಯ ಸಂಕಲ್ಪಗಳನ್ನು ಉಮರನು
ಅನುಭವಿಸುತ್ತಿರುವುದು ಸೃಷ್ಟಿಯ ಸಂಕಲ್ಪವೇ ಸರಿ.

- ಶ್ರೀ ಹರಿ



16-06-2011

ಈ ಸುಖದ ಹಬ್ಬಕ್ಕೆ ಚೆಲುವಾಗಿರುವ ನಿನ್ನ ರೂಪ
ಕುಂಬಾರನ ಚಕ್ರ ಮನದಲ್ಲಿ ತಿರುಗುವಂತೆ
ನನ್ನ ಮನಸ್ಸು ಸಲಿಸಲಿ ಬೇರೆ ಬೇರೆ ಹೊಸ
ನಿನ್ನ ರೂಪ ತಾಳುತ್ತಿದೆ ಈ ದಿನವೆಲ್ಲ ನೀ
ನನ್ನ ಜೊತೆ ಇದ್ದುಬಿಡು

ಇಂದು ಜೊತೆ ಹಾಡಿ ಪ್ರಕೃತಿಗೆ ನಾವು ಸಂತಸಪಡಿಸೋಣ
ಪ್ರಕೃತಿಯನ್ನು ಮರೆತಿರುವ ಎಲ್ಲರನ್ನು ಎಚ್ಚರಿಸೋಣ
ತಿರುಕನನ್ನು ರಾಜನನ್ನು ಮಾಡೋಣ
ರಾಜನನ್ನು ತಿರುಕ ಮಾಡೋಣ
ನಾ ರಾಜ ನೀ ತಿರುಕ ನೀ ರಾಜ
ನಾ ತಿರುಕ ಆಟ ಆಡೋಣ

ಮುಚ್ಚಿಕೊಂಡಿರುವ ಎಲ್ಲರ ಸಂತಸದ ಕದವನ್ನು ತೆರೆಯೋಣ
ಮಧುಪಾನವನ್ನು ಚುಂಬಿಸಿ ಚುಂಬಿಸಿ ಸೇವಿಸಿ
ಈ ದಿನದ ನಮ್ಮ ಸಂತಸದಲ್ಲಿ ದೇವರನ್ನು ಕರೆಸಿಕೊಂಡು
ದಿನವೂ ಹಬ್ಬವಾಗಿರುವ ನಮ್ಮಿಬ್ಬರಿಗೆ ಕಾಲವನ್ನು
ಜೊತೆ ಮಾಡಿಕೊಂಡು ಸಂತಸದಿ ಗುಲಾಬಿಯನ್ನು ಮೂಸುತ್ತ
ಮೂಸುತ್ತ ಬೆಳಕು ಕತ್ತಲೆಗಳನ್ನು ಒಂದಾಗಿಸೋಣ

- ಶ್ರೀ ಹರಿ





17-06-2011


ಸೃಷ್ಟಿಯಿಂದಾದ ದಿನದಿಂದ ಮಾನವನ ಎದೆಯಲ್ಲಿ
ಒಂದಲ್ಲ ಒಂದು ಚಿಂತೆ, ಚಿಂತನೆಗಳು ಮರೆಯಲಾಗದೆ
ಇದು ಬೇಕು ಅದು ಬೇಕು ಎಂಬ ಕೊರಗು
ಜೀವಿಸುವ ಅಧಿಕಾರವನ್ನು ಕಳೆದುಕೊಂಡಿದ್ದಾನೆ ಮಾನವ

ಅರೆ ಕುರುಡನ ಹಾರಾಟ, ಅದೃಷ್ಟದ ಹುಡುಕಾಟ
ರೋಗ ವಿಯೋಗ ಮರಣಗಳ ಹೆದರಿಕೆ
ಇದರ ಜೊತೆಗೆ ಧರ್ಮ ವ್ಯವಸ್ಥೆಗಳು
ಇಂದ್ರಿಯ ನಿಗ್ರಹಗಳು ವೈರಾಗ್ಯದ ವೃತ್ತಿಗಳು
ತನ್ನ ಹುಟ್ಟು ತನ್ನಲ್ಲೇ ಕಳೆದುಕೊಂಡಿದ್ದಾನೆ ಮಾನವ

ಹೇ ಪ್ರಿಯೆ ಮುಂದಿನ ಕಾಲಕ್ಕೆ ನಾವುಗಳು
ಇಂದಿನ ಅನುಭವದ ಕಾವ್ಯಗಳನ್ನು ಬರೆಯೋಣ
ಪ್ರಕೃತಿಯ ಸಂಕಲ್ಪದಂತೆ ನಾವುಗಳು
ಹೆದರಿಯನ್ನು ದೂರವಿರಿಸಿ ಗುಲಾಬಿಯ
ಮಕರಂದದ ಸವಿಯನ್ನು ಚಪ್ಪರಿಸೋಣ

ತಮ್ಮ ಸುಖದ ಚಿಂತನೆಗಳನ್ನು ಬೇರೆಯವರಿಗೆ
ದೊರಕಿಸಿ ಚಿಂತಿಸುತ್ತಿರುವ ಮಾನವನಿಗೆ
ನಮ್ಮ ಸುಖದ ಹೊಸ್ತಿಲನ್ನು ತೋರಿಸೋಣ

- ಶ್ರೀ ಹರಿ





www.sriharikhoday.com

18-06-2011

ನನ್ನ ಶಕ್ತಿಗೆ ಸಾಧ್ಯವಾದಷ್ಟು ತಿಳಿದುಕೊಳ್ಳಲು
ಪ್ರಯತ್ನಿಸಿದೆ ನಾ ದೇವರನ್ನು
ಎಂದೂ ನೋಡದೆ ದೇವರನ್ನು ಅನುಭವಿಸಿದೆ
ನನ್ನ ಪ್ರಿಯೆಯ ಜೊತೆಗೆ ನಿಶೆಯ ಬಟ್ಟಲಲ್ಲೂ ಜೊತೆಗೆ
ಎಲ್ಲದರಲ್ಲೂ ಎಲ್ಲರಲ್ಲಿ ದೇವರನ್ನು ಅನುಭವಿಸಿದೆ

ನನ್ನ ಬುದ್ಧಿ ನನಗೆ ಕೇಳಿದ ಪ್ರಶ್ನೆಗಳಿಗೆ
ಉತ್ತರ ನೀಡದೆ ಉತ್ತರವನ್ನು ಅನುಭವಿಸುವಂತೆ
ಮಾಡಿ ನನ್ನ ಜೊತೆಗೆ ನಾ ಮಾತನಾಡಿ
ನಾ ಹುಡುಕದೇ ದೊರೆಯುವ ಭೋಗಗಳಿಂದ
ನನ್ನ ಚಿತ್ತ ಶುದ್ಧಿ ಮಾಡಿಕೊಂಡಿರುವೆನು

ನಾನು ತಪ್ಪು ಮಾಡುತ್ತಿರುವೆನೆಂದು ಯಾರೂ ಹೇಳದೆ
ಸೃಷ್ಟಿಯ ನಿತ್ಯ ಲಕ್ಷಣಗಳನ್ನು ಗಮನಿಸಿ ಲಭ್ಯವಾದ ಸಂತೃಪ್ತಿ
ನನ್ನ ಕಾಂತೆಯ ಜೊತೆಗೆ ಹಂಚಿಕೊಂಡು ವಿಕಾರಗಳಿಲ್ಲದ
ಆಕಾಶದಂತೆ ನಾ ಅನುಭವಿಸಿದ ಅನಿಸಿಕೆ ಕಾಣದ
ದೇವರ ಜೊತೆ ಅನುಭವಿಸುತ್ತಿರುವುದು ಸೃಷ್ಟಿಯ ಹೊಸ
ಸೃಷ್ಟಿಗೆ ಸೃಷ್ಟಿ ಸಂಕಲ್ಪದ ಗೂಡುಕಟ್ಟುತ್ತಿರುವಂತೆ

- ಶ್ರೀ ಹರಿ



20-06-2011

ಸ್ವರ್ಗದಲ್ಲಿ ಅದೇನು ಹೆಚ್ಚು?
ಮಧುಪಾನವೇ ನಾರಿಯರೇ ಸ್ವರ್ಗದ ಸುಖ
ಇಲ್ಲಿ ಬೇಡಿದರೇನು ತಪ್ಪು?
ನಾನು ಸ್ವರ್ಗಕ್ಕೆ ಹೋಗಲು ಅರ್ಹನೇ?

ನನ್ನಲ್ಲಿ ತಾನಾಗಿ ಹುಟ್ಟುತ್ತಿರುವ ಸುಖ
ಯಾರಿಂದಲೂ ಕಸಿದುಕೊಳ್ಳಲಾಗದ ನನ್ನ ಸುಖ
ಯಾರಿಂದಲೂ ಆರಿಸಲಾಗದ ಸುಖದ ಜ್ವಾಲೆ
ತಾನಾಗಿ ತಾನೇ ಅನುಭವಿಸಿ ಆರಿಸಬೇಕಾಗಿದೆ

ವಿಧಿ ವಿಧಿಸುತ್ತಿರುವ ನನ್ನ ಸುಖಕ್ಕೆ
ನನ್ನ ಹೊಸ್ತಿಲಿಗೆ ದ್ರಾಕ್ಷಿಯನ್ನು ಬೆಳೆದು
ತಂದು ಮಧುಪಾನ ಮಾಡಿ ಎಂದು ನನ್ನ
ಕಾಂತೆಗೆ ಕೊಟ್ಟಿರುವ ಬೆಳೆಗಾರ

ನನ್ನ ಕಾಂತೆ ಮಧುಪಾನವನ್ನು
ಜೊತೆಯಲ್ಲಿ ಸೇವಿಸೋಣವೆಂದರೆ
ವಿಧಿ ನನ್ನ ಜೊತೆಗೆ ಸುಖಪಡುವಂತಿದೆ

- ಶ್ರೀ ಹರಿ

www.sriharikhoday.com

20-06-2011

ಜಿಜ್ಞಾಸುಗಳು ಕೇಳುತ್ತಿರುವರು ದೇವರೆಲ್ಲಿದ್ದಾನೆ ?
ಎದುರಿಗೆ ಏಕೆ ಬರುತ್ತಿಲ್ಲ ದೇವರಿದ್ದರೆ ಏಕೆ ಕಾಣಿಸುತ್ತಿಲ್ಲ
ಹಳಬರ ಪೀಠಿಕೆಯ ಮಾತುಗಳೇಕೆ ?
ದೇವರನ್ನು ಏಕೆ ನಾವು ಹುಡುಕಬೇಕು

ನಮ್ಮ ಕಷ್ಟಗಳಿಗೆ ಸುಖ ಕೇಳಲೆಂದೆ ?
ನಮ್ಮನ್ನು ರಾಜನಾಗಿ ಮಾಡಲೆಂದೆ ?
ಎಲ್ಲಾ ಭೋಗಗಳು ನಮಗೆ ದೊರೆಯಲೆಂದೆ ?

ಸುಖದ ಅರ್ಹತೆ ದೊರೆಕುವುದು
ಎಲ್ಲವನ್ನು ಮರೆತು ಸುಖಪಡುವುದರಲ್ಲಿ
ನಾನು ಎಂಬುದ ಮರೆತು ಅನುಭವಿಸುವುದರಲ್ಲಿ
ಹೆದರಿಕೆ ಇಲ್ಲದ ಆಕಾಶದ ಅನುಭವದಲ್ಲಿ

ದೇವರು ಸುಖ ದುಃಖಗಳು ಅರ್ಹತೆಗಳು ಆಕಾಶದಲ್ಲಿ ಇದ್ದಂತೆ
ಕಾಂತೆ ತಂದ ಮಧುವನ್ನು ಸೇವಿಸಿ
ನಾವುಗಳು ಜೊತೆ ಅನುಭವಿಸಿದ ಆಕಾಶದಲ್ಲಿ
ಕಷ್ಟಗಳಿಲ್ಲದ ಸುಖ, ಸುಖದ ಆಕಾಶ ನೀಡಿದ ಅರ್ಹತೆ
ಹಬ್ಬಿ ಜೊತೆಗಿರುವ ಭೋಗದ ಖಜಾನೆ

ಇಷ್ಟರಲ್ಲೇ ಇರಬೇಕು ದೇವರು, ಇದರಲ್ಲೇ ಇರಬೇಕು
ದೇವರು, ಕಾಂತೆ ಮುತ್ತಿಟ್ಟ ನಿಶೆಯ ಬಟ್ಟಲಿನಿಂದ
ದೇವರನ್ನು ಹುಡುಕದೇ ದೊರೆಯುತ್ತಿರುವ ದೇವರ ಜೊತೆ
ಜಿಜ್ಞಾಸುಗಳು ತಮ್ಮ ಮಾತಿನಲ್ಲಿ ದೇವರನ್ನು ಕಳೆದುಕೊಂಡರು
ನಾವು ಪಡುತ್ತಿರುವ ಸುಖದಲ್ಲಿ ದೇವರನ್ನು ಪಡೆದುಕೊಂಡೆವು

- ಶ್ರೀ ಹರಿ



www.sriharikhoday.com

20-06-2011


ಕೆಲವರಿಗೆ ಸುಖ ಪಡೆಯಲು ನಾಚಿಕೆ
ಕೆಲವರಿಗೆ ನಿನ್ನ ಹತ್ತಿರ ಬರಲು ಅಂಜಿಕೆ
ಕೆಲವರಿಗೆ ನಾನು ತಾನು ಬಿಟ್ಟು ಜೀವಿಸಲು ಹೆದರಿಕೆ
ಕೆಲವರು ತನಗೆ ತಾನು ತಿಳಿದುಕೊಳ್ಳದೆ ಹಾಕುವರು ಬೆದರಿಕೆ

ವಿಶ್ವದ ಬಿಂದಾಸು ನೀನು ವೃತ್ತವಾಗುತ್ತಿರುವ ನಿನ್ನ ಬ್ರಹ್ಮಾಂಡ
ನಿನ್ನಲ್ಲಿ ಬೆರೆತಿರುವ ನಾನು ನೀನು
ದೊರೆಯುತ್ತಿರುವ ಕೊನೆಯಿರದ ಸುಖ
ಅಭಾವವಿಲ್ಲದ ಇರುವಿಕೆಗೆ ನಮ್ಮ ಜೊತೆಯೇ ಕಾರಣ

ನನ್ನನ್ನು ನಂಬಿರುವ ನನ್ನ ಕಾಂತೆ
ನನ್ನನ್ನು ಬಿಟ್ಟು ಜೀವಿಸಲಾಗದ ಅವಳ ಜೀವ
ಬೇಡದ್ದನ್ನು ಮರೆಸಿರುವ ಈ ನಿಶೆಯ ಬಟ್ಟಲು
ನನ್ನ ತೊಡೆಯ ಮೇಲೆ ತೃಪ್ತಿಪಡೆದು ಮಲಗಿರುವ ಅವಳು

ಕೊನೆಯಿರದ ಸುಖಪಡುತ್ತಿರುವ ನಾವುಗಳು
ನಿನ್ನ ವೃತ್ತದ ವಿಕಾಸದಲ್ಲಿ ಸೇರಿಹೋಗಿರುವೆವು

- ಶ್ರೀ ಹರಿ



21-06-2011

ನಿನ್ನೆ ಸತ್ತು ಹೋಗಿದೆ
ನಾಳೆ ಹುಟ್ಟುತ್ತಿದೆ
ನಿನ್ನೆಯ ಕಷ್ಟಗಳ ನೆನೆಯುವುದೇತಕೆ ?
ನಾಳೆಯ ಸುಖವನ್ನು ಬಯಸೋಣ

ನಿನ್ನ ಕೈಯಿಂದ ತುಂಬು, ನಿಶೆಯ ಬಟ್ಟಲನ್ನು,
ನಿಶೆ ಇಳಿದಾದ ಮೇಲೆ
ಜಗದ ಕಷ್ಟಗಳು ನನ್ನನ್ನು ಕಾಡುತ್ತವೆ
ಸೂರ್ಯ ಚಂದ್ರರೇ ನಿನ್ನೆಗಳನ್ನು ಮರೆತಿರುವಾಗ
ನಾನೇಕೆ ನಿನ್ನೆಗಳನ್ನು ನೆನಸಲಿ?
ಏಕೆ ಇಂದಿನ ಸುಖ ಹಾಳು ಮಾಡಲಿ

ಕತ್ತಲೆಯಲ್ಲಿ ಆಳವ ಹುಡುಕುವುದೇತಕೆ ?
ಸಿಗದ ಆಳವ ತಡಕಾಡುವುದೇತಕೆ
ಕಾಣತ್ತಿರುವ ಎದುರಲ್ಲಿ ಇರುವ ದೇವರ ಜೊತೆಗೆ
ನಾನು ಜೊತೆ ಇದ್ದೇನೆ ಎಂಬ ನನ್ನ ಭಾವ

ಕುಡಿದಿದ್ದನ್ನೆಲ್ಲಾ ಮರೆತು ಅನುಭವಿಸಿದುದನೆಲ್ಲಾ ಮರೆತು
ಇಂದು ನಮ್ಮ ನಡುವೆ
ನಾನು ನೀನಾಗೋಣ
ನೀನು ನಾನಾಗೋಣ,
ನಾವುಗಳು ಬಣ್ಣಗಳಾಗೋಣ
ನಾವುಗಳು ಕಾಣುತ್ತಿರುವ ದಿಗಂತಗಳಲ್ಲಿ ಬೆರೆಯೋಣ

- ಶ್ರೀ ಹರಿ





www.sriharikhoday.com

22-06-2011

ಸುಖದ ಅಪೇಕ್ಷೆ ಪ್ರಾಣಿಗಳಿಗೆ ಸಹಜ ಗುಣವಾದರೆ
ಗುಲಾಬಿಯ ಸುವಾಸನೆ ಗುಲಾಬಿಯ ಸಹಜ ಗುಣವಾದರೆ
ಸೂರ್ಯ ಚಂದ್ರರ ದಿನಚರಿ ಅವರ ಸಹಜ ಗುಣವಾದರೆ
ಈ ಮನುಷ್ಯನ ದಿನಚರಿಯ ಸಹಜ ಗುಣವೇನು ?

ಒಬ್ಬರನೊಬ್ಬರ ನಿಂದನೆಯ ದಿನಚರಿಯು
ಒಬ್ಬರ ಪ್ರತಿಷ್ಠೆಯ ಪ್ರದರ್ಶನಗಳು
ನಿನ್ನಿಂದ ನಾನು ದೇವರ ಹತ್ತಿರವಿರುವೆ ಎಂಬ
ಪ್ರಚೋದನೆಯೋ ? ಎಲ್ಲರೂ ನನ್ನನ್ನು ಪ್ರೀತಿಸಿ
ಹೊಗಳಿಕೆಯ ಪರಾಕ್‌ಗಳ ಬೇಡಿಕೆಯೋ ?

ನೋಡುತ ನೋಡುತ ನೊಂದ ನನ್ನ ಮನಸ್ಸು ಹೇಳುತ್ತಿದೆ
ಈ ಲೋಕದಲ್ಲಿ ಪ್ರಾಣಿಗಳಿಗಿರುವ ಸಹಜ ಗುಣಮನುಷ್ಯ
ತಿಳಿದುಕೊಂಡಿದ್ದಾನೆ
ಹುಟ್ಟಿನಿಂದಲೂ ಉಸಿರಾಡುತ್ತಿರವ ಉಸಿರನ್ನು ಉಸಿರಾಡುತ್ತಿಲ್ಲ ಎಂಬ
ಸುಳ್ಳು ಹೇಳುವ ವಾಡಿಕೆ ಸುಖದ ಅಪೇಕ್ಷೆಯಿದ್ದರು ನಮಗೆ
ಬೇಡವೆಂದು ಸುಳ್ಳು ಹೇಳುವ ವಾಡಿಕೆಯೋ ?

ತಾವೇ ಸ್ವಯಂಕಲ್ಪಿತ ನಿಯಮಗಳನ್ನು
ಸೃಷ್ಟಿಸಿಕೊಂಡು ಸುಖದ ಖಜಾನೆ ಎದುರಿಗಿದ್ದರೂ ಅವರ
ಕಣ್ಣಿಗೆ ಕಾಣದಾಗಿದೆ ಸತ್ಯವನ್ನು ನೋಡಲು ಕುರುಡಾಗಿ ಪ್ರಕೃತಿಯ
ಭಾವನಾತರಂಗಗಳ ಹರಿದಾಟಕ್ಕೆ ತಮ್ಮ ಮನದಲ್ಲಿ ಹಳ್ಳ ತೋಡಿ
ಸುಳ್ಳಿನ ಮೂಳೆ ಮೇಲೆ ಗೋರಿಗಳನ್ನು ಕಟ್ಟುತ್ತಿದ್ದಾರೆ

- ಶ್ರೀ ಹರಿ



25-06-2011

ಅಂತರಂಗದ ಭಾವನೆಗಳು
ನಾನು ಹುಟ್ಟಿಸುತ್ತಿಲ್ಲ
ನನಗೇ ತಿಳಿಯದೆ ಮನಸ್ಸಿನ
ಕತ್ತಲೆಯಿಂದ ಹೊರ ಬರುತ್ತಿದೆ

ಹೊರ ಬಂದು ನಾ ಹೇಳಿದಂತೆ
ನೀ ನಡೆ, ಬರಿ ಮಾತಾಡಬೇಡ
ನಾ ತಿಳಿಸಿದಂತೆ ನಡೆ ನನ್ನ ಭಾವನೆಗಳಿಗೆ
ಭಾಗಿಯಾಗಿರುವ ನಾನು
ತಿಳಿಸಿದಂತೆ ನಡೆದುಕೊಂಡು
ನನ್ನ ಸತ್ಯದ ಕ್ರಿಯೆಗಳಲ್ಲಿ ಬೆರೆತುಹೋಗಿರುವೆ

ಬೆರೆತುಹೋಗುವುದು ಪ್ರಕೃತಿಯ ಗುಣವಾದರೆ
ಬೆರೆತು ಅನುಭವಿಸುವುದು ಪ್ರಕೃತಿಯ ಬೆಳೆಯ ಕೆಲಸವಾದರೆ
ಕುಡಿಯದೆಯೇ ಸತ್ಯದ ಅಮಲಿನ ಜೊತೆ ನಾ ಇರುವಾಗ
ನಾ ನಿಮ್ಮ ಎದುರು ನನ್ನ ಕಾಂತೆಯೊಡನೆ
ಪ್ರಕೃತಿಯ ಕೆಲಸ ಮಾಡುತ್ತಿದ್ದರೆ ನಶೆಯ ಬಟ್ಟಲು ಒಂಟಿಯಾಗಿ
ನನ್ನನ್ನು ನನ್ನ ಜೊತೆ ಬೆರೆಸಿಕೋ ಎಂದು ಬಯಸುತ್ತಿದೆ

- ಶ್ರೀ ಹರಿ





27-06-2011


ಮನುಷ್ಯ ಮಾಡುವ ದೊಡ್ಡ ಅಪರಾಧ ಚಿಂತೆ
ಪ್ರಯತ್ನಗಳ ಅಪೇಕ್ಷೆಗಳ ಲಾಭ ನಷ್ಟಗಳ ಚಿಂತೆ
ಅಪೇಕ್ಷೆಗಳಿಲ್ಲದ ಪ್ರಯತ್ನ ಬಯಸಿದ
ಸುಖದ ಜೊತೆಗೆ ಹೆಚ್ಚಿನ ಸುಖದ ಲಾಭ

ಹೃದಯದಲ್ಲಿ ಆಕಾರ ಬೀಜವನ್ನು ಬೆಳೆಸಿದರೆ
ಆ.. ಹೋ.. ಎಂದು ಅರಚುತ್ತ ನೋವಿನಿಂದ ಅಳುತ್ತ
ನಗೆ ರೂಪ ಕಣ್ಣಿನ ಶುಭ್ರ ಭಾವನೆ ಮನೋಚಾಲನೆ
ನಗೆ ನಲಿಯುವ ಹೊರ ಪ್ರದರ್ಶನ

ಅಪ್ಪಿ ತಬ್ಬಿ ಮುತ್ತಿಡುತ್ತ ಸಿತಾರವ ನುಡಿಸಿ
ನಿಶೆಯ ಬಟ್ಟಲಿನ ತೃಪ್ತಿ ಲಾಭವಾಗಿ ದೊರೆಯುತ್ತಿರುವ
ಸುಖ ಕಾಣುತ್ತಿರುವವರ ಕಣ್ಣಿಗೆ
ಕೆಲವರಿಗೆ ಸಂತಸ ಕೆಲವರಿಗೆ ಅಸೂಯೆ

ಹೇ ಕಾಂತೆ ನಡೆ ನಾವು ಬೆಟ್ಟದ ಮೇಲೆ ಹೋಗೋಣ
ಆ ಬೆಟ್ಟದ ಮೇಲೆ ಮನಸ್ಸಿನ ನಗ್ನತೆ
ಆಕಾಶಕ್ಕೆ ತೋರಿಸಿ ಅಸೂಯೆಗಳಿಲ್ಲದ ಈ
ಪ್ರದೇಶದಲ್ಲಿ ನಮ್ಮ ಪ್ರೀತಿಯ ಧ್ವಜ ಹಾರಿಸೋಣ

- ಶ್ರೀ ಹರಿ





www.sriharikhoday.com

27-06-2011

ಗೋಡೆಗಳಿಲ್ಲದ ಅರಮನೆ
ನಮ್ಮಿಬ್ಬರ ಪ್ರೀತಿಯ ಸೆರೆಮನೆ
ನಿನಗೆ ನಾ ಬಂದಿ, ನನಗೆ ನೀ ಬಂದಿ

ನಮ್ಮ ಪ್ರೀತಿ ನಮ್ಮಿಬ್ಬರ ಜವಾಬ್ದಾರಿ ಇದನ್ನು ಹೊರಲು
ನಮ್ಮಿಬ್ಬರನ್ನು ಬಿಟ್ಟು ಯಾರೂ ಹೊರಲಾರರು ಸುಖ
ಪಡೆಯಲು ನಾಚಿಕೆಯಿಲ್ಲದ ನಾವುಗಳು ಭೋಗದ
ಆಕಾಶದಲ್ಲಿ ಬೆರೆತು ಕಳೆದುಕೊಳ್ಳೋಣ

ಭೋಗಾನುಭವ ನೀಡುತ್ತಿರುವ
ವಿಶ್ವದ ಅನುಭವ, ಉಂಟಾಗುತ್ತಿರುವ
ನಮ್ಮ ಮೇಲಿನ ಪರಿಣಾಮ
ಗುಲಾಬಿಯನ್ನು ನಗಿಸುತ್ತಿದೆ

ನಭೋ ಮಂಡಲದ ಕಲೆಗಳನ್ನು ಮುಚ್ಚಿಕೊಂಡು
ಶೂನ್ಯದ ಹಂದರದಲ್ಲಿ ಪ್ರೀತಿಯ
ಕ್ರಿಯೆಗಳನ್ನು ನಡೆಸುತ್ತಿರುವುದು ಸೃಷ್ಟಿಯ
ಭಂಡಾರ ನಮಗೆ ದೊರಕಿಸಿದಂತಿದೆ

- ಶ್ರೀ ಹರಿ



www.sriharikhoday.com

27-06-2011

ರಸಿಕತೆಗೆ ಉಸಿರಾಡುತ್ತಿರುವ ನನ್ನ ಕಣ್ಣುಗಳಲ್ಲಿ
ರೋಮಾಂಚನದ ಬೇಡಿಕೆಗಳ ಕರೆಗಳು
ನಿನ್ನನ್ನು ಎತ್ತಿಕೊಂಡು ಗಿಡದ ನೆರಳಲ್ಲಿ
ಸೋಂಕಿಸಿದ ತುಟಿಗಳಿಗೆ ತುಂಟಾಟದ ಔತಣ

ನಾನು ನೀನು ಮರೆತಿರುವ ನಾವುಗಳು
ತುಟಿಗಳು ಬಯಸುತ್ತಿರುವ ನಿಶೆಯ ಬಟ್ಟಲು
ಕಾಲಕ್ಕೆ ಬಟ್ಟಲು ತುಂಬು ಎಂಬ ನಮ್ಮ ಬೇಡಿಕೆಗೆ
ಕಾಲ ಹೇಳುತ್ತಿದೆ ಕುಡಿ, ಸತ್ತದ ಮೇಲೆ ಯಾರು ಕುಡಿವರು

ಬೀಗ ಇಲ್ಲದ ಈ ಪ್ರೇಮದ ಮಂದಿರದಲ್ಲಿ
ಕತ್ತಲೆಯನ್ನು ಅಟ್ಟಿ ಹೊರಹಾಕಿ ಪ್ರೇಮದ
ಅನಿಸಿಕೆಯ ಬೆಳಕಿನ ಬಣ್ಣಗಳ ಸ್ವರ್ಗವನ್ನು ಕೆಳಗಿಳಿಸಿ
ಸ್ವರ್ಗದ ಸುಖ ಪಡೆಯುತ್ತಿರುವೆವು

- ಶ್ರೀ ಹರಿ

30-06-2011

ಯಾವುದೋ ಒಂದು ಮಹಾನ್ ಶಕ್ತಿ ವಿಶ್ವವನ್ನು
ನಿರ್ಮಿಸಿದೆ ಈ ದೇಹ ಅದರಲ್ಲಿರುವ ಆತ್ಮ
ಇವುಗಳಲ್ಲಿರುವ ಪರಸ್ಪರ ಅದರ ಸಹಪಾಠಿಗಳು

ಭೂಗುಣ ಸಾವಿರಾರು ವಿಧಗಳು
ಅವುಗಳಲ್ಲಿ ಏರು ತಗ್ಗುಗಳು ಸಾವಿರಾರು
ವಿಧಗಳು ಸಾವಿರ ತರಹದ
ಮನೋ ಉದ್ದೇಶಗಳು ಪ್ರತಿಷ್ಠೆಗಾಗಿ
ವೀಕ್ಷಿಸುವುದನ್ನು ಗ್ರಹಿಸಿ ಸಂಪ್ರದಾಯಗಳು
ಎಂದು ಮನುಷ್ಯ ನುಡಿಯುತ್ತಾನೆ

ಪ್ರಿಯೆಯ ಸರಾಗ ಸಾನ್ನಿಧ್ಯ ಲಭ್ಯವಾದಾಗ
ಚಿಂತೆಗಳು ಏಕೆ ಎನ್ನುತ್ತಾನೆ ಉಮರನು
ದೇವರನ್ನು ಅನುಭವಿಸಿ ಸಂಪ್ರದಾಯಗಳು ಎನ್ನುವರು
ದೇವರನ್ನು ಇಲ್ಲವೇ ಇಲ್ಲ ಎನ್ನುವನು
ದೇವರನ್ನು ಕಂಡು ಹೆದರುವರು ವಿಶ್ವವನ್ನು
ನಿರ್ಮಿಸುವ ಶಕ್ತನು ನಾನೇ ಎನ್ನುವನು

ಇದು-ಅದು ತಾನೇ ಎಂದು ಹೇಳುವವನು
ಸತ್ಯವನ್ನು ಯಾರೂ ತಿಳಿದುಕೊಳ್ಳದೆ ಅಜ್ಞಾನ
ಹೆದರಿಕೆಗಳನ್ನು ಹರಡುತ್ತಿರುವವನು ಈ ಮನುಜನು

- ಶ್ರೀ ಹರಿ






04-07-2011

ಮನಸ್ಸಿನ ಭಾವಭಂಗಿಗಳಂತೆ
ಸೂರ್ಯ ಚಂದ್ರ ನಕ್ಷತ್ರಗಳ ಇರುವಿಕೆ
ವಿಶ್ವದ ಭಾವ ಭಾವನೆಗಳ ಭಂಗಿಗಳು

ವಿಶ್ವದಲ್ಲಿ ಯಾವುದೂ ಒಂದೆಡೆ ನಿಂತಿಲ್ಲ
ವಿಶ್ವದಲ್ಲೂ ಕೆಲಸ ಮಾಡದೆ ಯಾರೂ ಇಲ್ಲ
ಎಲ್ಲರೂ ಒಂದಲ್ಲ ಒಂದು ಕೆಲಸ ಮಾಡುತ್ತಿರುವರು
ಹರಿದಾಟವೇ ವಿಶ್ವದ ಸೂತ್ರ

ಇಲ್ಲಿಂದ ಅಲ್ಲಿ ಅಲ್ಲಿಂದ ಇಲ್ಲಿ
ವಿಶ್ವದ ನಿಮಿತಿ ಹರಿದಾಟದಲ್ಲಿ
ಹೊಸತನವ ಅನುಭವಿಸುವ ಹೊಸತನ
ವಿಶ್ವದಿಂದ ಮುದಿತನವ ತೆಗೆದುಹಾಕಿದೆ

- ಶ್ರೀ ಹರಿ





www.sriharikhoday.com

04-07-2011

ನಿನ್ನನ್ನು ನಾನು ಕನಸಿನಲ್ಲಿ ಕಂಡಾದ ಮೇಲೆ
ನಮ್ಮಿಬ್ಬರ ಪ್ರೀತಿ ಪ್ರೇಮಗಳು
ಹೊಸತನವ ತಿಳಿದುಕೊಂಡಿದೆ

ನೀನೇ ಆಕಾಶವೋ ಸತ್ಯ ಮೀರಿರುವ ಇರುವಿಕೆಯೊ
ಹತ್ತಿರ ದೂರ ತಿಳಿಯದ ಜೊತೆಯೋ
ಜೊತೆಯಿದ್ದು ಕಳೆದುಹೋಗಿರುವ ಮೌಲ್ಯವೋ?
ಕಾಲವ ತಿಳಿಯದ ನಮ್ಮಿಬ್ಬರ ನಿನ್ನ ಜೊತೆಯೋ ?

ಸಾವಿರ ಜನ್ಮ ಪಡೆದರೂ ಮುಗಿಯದ ನಂಟೋ
ನಿನ್ನನ್ನು ಅಂಗಾಂಗಗಳಲ್ಲಿ ಪಡೆಯುತ್ತಿರುವ ನಾವುಗಳು
ಕೊನೆ ಬರದೇ ಇರುವ ಉಸಿರ ಜೊತೆ
ನೀ ನಮ್ಮ ಜೊತೆ ಬೆರೆತುಹೋಗಿರುವೆ

- ಶ್ರೀ ಹರಿ





www.sriharikhoday.com


04-07-2011

ನಿಂದಿಸಿದವರಿಗೆ ನಗುತ ನಗುತ ತಲೆಬಾಗು
ನಮ್ಮಲ್ಲಿರುವ ದೇವರನ್ನು ನಂಬಿ ತಲೆಬಾಗು
ಜೊತೆಗಿರುವ ಪ್ರಕೃತಿಗೆ ನಂಬಿ ತಲೆಬಾಗು!

ಅಪನಂಬಿಕೆ ಜೊತೆ ನಂಬಿಕೆಯ ಬೆರಸದಿರು
ಅರಳಿ ನಿಂತಿರುವ ಗುಲಾಬಿಯಲ್ಲಿ ವಿಶ್ವವ
ನೋಡಿ ಬೆರಗಿನಿಂದ ಬೆರೆತುಬಿಡು !

ದೇಹದ ಸುಖದ ಜೊತೆಗೆ ದೇವರ ಸುಖ ಪಡೆ
ತೃಪ್ತಿಯಿರದ ದೇಹ ಸುಖದ ಜೊತೆಗೆ ದೇವರನ್ನು
ಅನುಭವಿಸಿದರೆ ಸುಖವೋ ಸುಖ, ಸುಖವೋ ಸುಖ!

- ಶ್ರೀ ಹರಿ



04-07-2011

ಬಣ್ಣಗಳಿಗೆ ಬೆಳಕಾಗುವ ಗುಣ
ನನ್ನ ಮನ ನಿನ್ನದಾಗುವ ಋಣ
ನಮ್ಮಿಬ್ಬರ ಸಂಬಂಧ ಬೆಳೆಸುತ್ತಿರುವ
ದೇವರಿಗೆ ನಮ್ಮಿಬ್ಬರ ಋಣ !

ನೀ ಹೆಣ್ಣಾಗಿರುವುದು ನಿನ್ನ ಋಣ
ನಾ ಗಂಡಾಗಿರುವುದು ನನ್ನ ಋಣ
ಸೂರ್ಯೋದಯ ಸೂರ್ಯಾಸ್ತಮದ ಋಣ
ಎಂದೂ ಮುಗಿಯಲಾಗದ ಋಣ ದೇವರ ಋಣ !

ಕೊಳ್ಳುವುದು ಮಾರುವುದು ಒಂದು ಋಣ
ಜೀವ ಕೊಟ್ಟ ಉಸಿರಿಗೆ ದೇವರ ಋಣ
ಗುಲಾಬಿಯ ಸುವಾಸನೆ ಪ್ರಕೃತಿಗೆ ಋಣ
ನಾನು ನೀನು ದೇವರು ಬರೆಯುವುದ ಕಲಿಸಿದ
ಆ ಕಾಣದ ಶಕ್ತಿಗೆ ಕಾರಣಗಳಿಲ್ಲದ ಋಣ !

- ಶ್ರೀ ಹರಿ






07-07-2011

ವಿಧಿಯ ಸಂಚಿನಲಿ
ಮುಪ್ಪಿಲ್ಲದ ಪ್ರೇಮದಲಿ
ಪ್ರೇಮದ ಹುಚ್ಚಿಗೆ
ಪ್ರೇಮಿಗಳ ಹುಡುಕಾಟ !

ಶುಭ್ರವಾದ ಶೂನ್ಯದ ಬಿಂದುವಿನಿಂದ
ಪ್ರೇಮಿಸಿ ಪ್ರಕೃತಿ ಬೆಳೆಸಿ ನಿಲ್ಲಿಸಿರುವ ಈ
ಗುಲಾಬಿ ಪ್ರೀತಿ-ಪ್ರೇಮಗಳ ಅರಿತಿರುವುದು
ಪ್ರೀತಿ - ಪ್ರೇಮಗಳ ನಮ್ಮಲ್ಲಿ ತುಂಬುತ ಪ್ರೀತಿಸಿ
ಪ್ರೇಮಿಸದ ದೇವರನ್ನು ಜೊತೆ ಬೆರೆಸುತ್ತಿರುವುದು!

ಈ ಮಣ್ಣು ಬೆಳೆಸಿದ ದ್ರಾಕ್ಷಾರಸ
ನಮ್ಮಿಬ್ಬರನ್ನು ವಿಶ್ವದ ಎತ್ತರದ ಅನುಭವಿಸಿ
ನಮ್ಮ ತನು-ಮನಗಳ ಅನುಭವ
ನಾವುಗಳು ಇಲ್ಲದಿದ್ದರೆ ದೇವರು
ತಬ್ಬಲಿ ಆಗಿಹೋಗುವನೋ ಎಂಬ ಹೆದರಿಕೆ

- ಶ್ರೀ ಹರಿ





www.sriharikhoday.com

07-07-2011

ಕುಯ್ದಷ್ಟು ಕೈಗೆ ಬೆಳೆ
ನೋಡಿದಷ್ಟು ದಿಗಂತಗಳು
ಬರೆದಷ್ಟು ಮನದ ಕವನಗಳು
ನೋಡಿದಷ್ಟು ಕೊನೆಬರದ ಸುಂದರ ರೂಪ

ಕುಡಿದಷ್ಟು ಮನಸ್ಸಿನ ವಿಚಾರ
ಹದಗೊಳ್ಳುವಷ್ಟು ದೇವರ ಹತ್ತಿರ
ನಮ್ಮನ್ನು ನಾವೇ ಮರೆತಷ್ಟು ಎಲ್ಲರ ಜೊತೆ
ಬೇರೆಯವರ ಕಷ್ಟಗಳಲ್ಲಿ ಬೆರೆತರೆ ಅವರಿಗೆ ಸುಖ

ನಾವು ಏನೂ ಮಾತಾಡದೆ
ಒಂದಾದ ನಾವುಗಳು ಏನೂ ಕಳೆದುಕೊಳ್ಳದೆ
ಗಳಿಸಿಕೊಂಡಿರುವ ಖಜಾನೆ ಗಳಿಸಿದನ್ನು
ಹಂಚಿಕೊಂಡು ಬೇಡದೆ ನೀಡಿರುವ ಸುಖ

ನಿಲ್ಲದೆ ಬೆಳೆಯುತ್ತಿರುವ ಬ್ರಹ್ಮಾಂಡದಲ್ಲಿ
ಪ್ರೀತಿ ಪ್ರೇಮಗಳನ್ನು ಸೇದಿ
ಎಲ್ಲರನ್ನು ತಣಿಸಿ ನಾವು
ಸಂತಸ ಪಡೆಯೋಣ

- ಶ್ರೀ ಹರಿ





www.sriharikhoday.com

07-07-2011


ಗುಲಾಬಿಯ ಸುವಾಸನೆ ಗಾಳಿಯಲ್ಲಿ ಬೆರೆಯುವಂತೆ
ನಾವುಗಳು ದೇವರಲ್ಲಿ ಬೆರೆತರೆ ಬರುವ ಸಂತಸದ
ಅನುಭವಗಳು ಹಳೆಯ ಅನುಭವಗಳನ್ನು ಹೊಸ
ಅನುಭವಗಳನ್ನಾಗಿ ಮಾರ್ಪಡಿಸುತ್ತದೆ !

ನಾನು ನೀನು ದೇವರ ಜೊತೆ ಬೆರೆತ ಅನುಭವ
ಆ ಅನುಭವದ ಸುಖದ ಹೊಸತನ ವಿಶ್ವವೇ ಅಳಿಯಲಾಗದ
ಸಲಿ ಸಲಿ ಬೆರೆಕೆ ಹೇ ಪ್ರಿಯೆ ಸಲಿ ಸಲಿ ಜೊತೆ
ಹುಟ್ಟಿ ಹೊಸದನ್ನು ಅನುಭವಿಸೋಣ!

ನಮಗೆ ತಿಳಿದಷ್ಟು ಈ ಜಗತ್ತಿನಲ್ಲಿ ದೇವರ ಜೊತೆ
ಅನುಭವಿಸುವುದಾದರೆ ಅನುಭವ ಸಾಲದೆ ಅದರ
ಸುಖದ ಅನುಭವವನ್ನು ನಾನು ನೀನು
ದೇವರು ಬಣ್ಣಗಳು ಸೂರ್ಯ, ನಕ್ಷತ್ರಗಳು ಜೊತೆ ಬೆರಕೆ

ಹೋಲಿಕೆ ಬಿಟ್ಟು ಸಂತಸವೋ ಸಂತಸ
ಸುಖದ ಸಂತಸದ ಹೊಸ ಕಿರಣಗಳ ಉದಯ !

- ಶ್ರೀ ಹರಿ



07-07-2011

ನನ್ನನ್ನು ಮದ್ಯದ ಪೂಜಾರಿ ಎನ್ನುವರು ಅಹುದು !
ಸ್ತ್ರೀಲೋಲನು ಎನ್ನುವರು ನನಗೆ ಅಹುದು!
ಬಹಿರಂಗ ಚರ್ಚೆಗಳು ಪರೀಕ್ಷಿಸಿದರೆ
ನನ್ನ ಅಂತರಂಗದಲ್ಲಿ ನನ್ನಂತೆ ನೀನು, ನಿನ್ನಂತೆ ನಾನು!

ನಿನ್ನ ಜೊತೆ ಇದ್ದು ತಪ್ಪೇನು ?
ಏನೆಂದು ಬೇರೆಯವರಲ್ಲಿ ಬೆರೆಯಲಿ?
ಎಲ್ಲವೂ ನಿನ್ನ ಪ್ರಚೋದನೆಯಂತೆ ನಾ ಮಾಡುತ್ತಿರುವೆ
ಬೆಳಕಿನ ಆಶ್ರಯದಲ್ಲಿ ಕತ್ತಲೆ ಹೇಗೆ ಬರುವುದು ?
ನಿನ್ನನ್ನು ಹಿಂಬಾಲಿಸಿದರೆ ಕಾಲಿಗೆ ಮುಳ್ಳೆಲ್ಲಿ ?
ನಿನ್ನ ಗುಹೆ ಒಳಗೆ ಹೊಕ್ಕಿ ಕತ್ತಲಿಗೇಕೆ ಹುಡುಕಾಟ?

ನನ್ನನ್ನು ಆವರಿಸಿಕೊಂಡಿರುವ ನೀನು
ನಮ್ಮಿಬ್ಬರ ಬೆರೆತಾಟದಲ್ಲಿ ಜೊತೆ
ಬೆರೆಯುತ್ತಿರುವ ನೀನು, ನಿಶ್ಶಬ್ದದಲ್ಲಿ ಎಲ್ಲವೂ
ಪಡೆಯುತ್ತಿರುವ ನಮ್ಮ ಗಳಿಗೆ, ಟೀಕೆ ಮಾಡಲು
ಅವರಿಗೆ ದೊರೆಯದೆ ಕಾಣದಾಗೋಣ !

- ಶ್ರೀ ಹರಿ





20-07-2011

ನನಗೆ ಹುಚ್ಚನೆಂದು ಕರೆಯಿರಿ
ದೇವರ ಜೊತೆಗಿರುವ ನನಗೆ
ಹುಚ್ಚ ಹುಚ್ಚನೆಂದು ಕಲ್ಲಿನಿಂದ ಹೊಡೆಯಿರಿ
ಆದರೆ ನನ್ನ ಕಣ್ಣಿಗೆ ಮಾತ್ರ ಹೊಡೆಯದಿರಿ!

ನೀವು ಬಿಟ್ಟಿರುವ ಈ ಕಣ್ಣಿನಿಂದ
ನನ್ನಂಥ ಮತ್ತೊಬ್ಬ ಹುಚ್ಚನ ನೋಡುವ ಆಸೆ
ನಾನು ನಿಮ್ಮ ನೆಂಟನಲ್ಲ ನಿಮ್ಮ ಸಿರಿತನ ಬೇಡಲಿಲ್ಲ
ದೇವರ ಜೊತೆಯಿರುವ ನನ್ನ ಮೇಲೆ ಏಕಿಂಥ ದ್ವೇಷ ?

ದೇವರು ಸೃಷ್ಟಿಸಿರುವ ಭೂಮಿಯ ಮೇಲೆ
ನಾನು ನಾಯಿ ಜೊತೆಗಿದ್ದು ನಿಮ್ಮ ನೆರಳು ಬೇಡದೆ
ನನ್ನ ದೇವರ ನೆರಳಲ್ಲಿ ಮಲಗಿ ಬೆಚ್ಚನೆಯಾಗಿರುವೆ
ನಿಶೆಯ ಅಮಲು ನಿಮಗೆ ಏನು ತೊಂದರೆ ನೀಡಿತು ?

ನನ್ನ ಮೇಲಿನ ದ್ವೇಷ ಒಬ್ಬ
ಬಡವನ ಕಷ್ಟಕ್ಕೆ ಉಪಯೋಗಿಸಿ
ನೀವು ದೇವರನ್ನು ನೋಡಲು
ಅಡ್ಡವಾಗಿರುವ ನಿಮ್ಮ ಕೋಪಗಳು

ಆ ನಿಮ್ಮ ಕೋಪಗಳಿಗೆ ಮನಸ್ಸಿನ ಕಲ್ಲಿನಿಂದ
ಒಡೆದು ಓಡಿಸಿ, ನನ್ನ ದೇವರ ಜೊತೆ
ನೀವು ಸೇರಿಕೊಂಡು
ಈ ನಿಶೆಯ ಬಟ್ಟಲನ್ನು ನಾವು ಜೊತೆಗೂಡಿ ಸೇವಿಸೋಣ

- ಶ್ರೀ ಹರಿ



www.sriharikhoday.com

20-07-2011

ಸ್ವಂತಕ್ಕಾಗಿ ಯಾವ ಅಪೇಕ್ಷೆ ಬೇಕಿಲ್ಲವೆಂಬುವುದೇ
ಜೀವಿಸುವ ಜೀವನ ಯುಕ್ತಿ
ಭೋಗಾಪೇಕ್ಷೆಗಳು ಇಲ್ಲದಿದ್ದಲ್ಲಿ ಕಲೆ ನಾಗರೀಕತೆ
ಸಂಸ್ಕೃತಿ ಸಭ್ಯತೆ ಹೇಗೆ ಹುಟ್ಟುತ್ತಿತ್ತು?

ನನ್ನಲ್ಲಿ ಬಯಕೆ ಹುಟ್ಟುತ್ತಿಲ್ಲವೆನ್ನುವವರು ಕೆಲವರು
ತಾನು ತಾಳಿದ ಜನ್ಮವನ್ನು ತಾನೇ ಹುಟ್ಟಿಲ್ಲ ಎನ್ನುವಂತೆ
ನನ್ನ ಜವಾಬ್ದಾರಿ ನಿಭಾಯಿಸಲು ಬೇರೆಯವರ ಹುಡುಕಾಟ
ನಾಟಕದಲ್ಲಿ ನಾಟ್ಯ ಮಾಡುವಂತೆ ಜೀವನದಲ್ಲಿ ಆಟ ಆಡಬೇಡಿ!

ಸಾವಿನ ಜೊತೆಯಿರುವ ಜೀವನ
ನಂಬಿಕೆ ಜೊತೆಯಿರುವ ಅಪನಂಬಿಕೆ
ಅಳುವಿನ ಜೊತೆಯಿರುವ ನಗು
ಅಮಲಿನ ಜೊತೆಯಿರುವ ನನ್ನ ಕಾಂತೆ

ಎಲ್ಲರ ಜೊತೆಯಿರುವ ನನ್ನ ದೇವರ ಜೊತೆ
ನಾನು ಎಲ್ಲರ ಜೊತೆ ಇದ್ದೂ ಇಲ್ಲದಂತೆ
ಇಲ್ಲದಂತೆ ಇದ್ದರೂ ಎಲ್ಲರ ಜೊತೆ ಇದ್ದಂತೆ

- ಶ್ರೀ ಹರಿ





21-07-2011


ದೃಷ್ಟಿಯಲ್ಲಿ ಒಂದು ಸರಿ ಮತ್ತೊಂದು ತಪ್ಪು
ಸರಿ ತಪ್ಪುಗಳ ವಿಮರ್ಶೆಯೇ
ಸತ್ಯವನ್ನು ದೂರ ತಳ್ಳುತ್ತಿರುವುದು!

ಹೊತ್ತು ಮರೆತು ತಾಯಿಯ ತೊಡೆಯ ಮೇಲೆ
ಮಗು ಮಲಗಿ ಹೊತ್ತನ್ನು ಕಳೆಯುವಂತೆ
ದೇವರ ಜೊತೆಗಿದ್ದು ಹೊತ್ತನ್ನು ಕಳೆಯುತ
ಕಾಲವನ್ನು ಮರೆತುಬಿಡೋಣ!

ಇಂದು ನನ್ನ ಕಾಂತೆಯ ಬಿಟ್ಟು
ಬೆಟ್ಟದ ಮೇಲೆ ನಾನೊಬ್ಬನೇ ಇದ್ದಾಗ
ಜೊತೆಗಿಲ್ಲದ ಸೂರ್ಯ, ಬಣ್ಣ ಬಣ್ಣಗಳಿಂದ ಮಾತನಾಡಿ
ಜಗದಲ್ಲಿ ಎಲ್ಲರೂ ನನ್ನ ಬಿಸಿಲ ಕಿರಣ ಬಳಸಿಕೊಂಡು
ನಿನ್ನ ಹಾಗೆ ಯಾರೊಬ್ಬರೂ ನೋಡಲು ಬರಲಿಲ್ಲ!

ನಾಳೆ ನಾನು ಮತ್ತೆ ನಿನ್ನ ನೋಡಲು ಬರುವನೆಂದು
ಹೇಳಿ ಸಂತಸದಿಂದ ನನ್ನನ್ನು ಬೀಳ್ಕೊಟ್ಟನು ಸೂರ್ಯ
ಹೇ ಕಾಂತೆ ಈ ಸಂತಸದಲ್ಲಿ ನಾವಿಬ್ಬರೂ ಜೊತೆ
ನಿಶೆಯ ಬಟ್ಟಲನ್ನು ಸೇವಿಸೋಣ

- ಶ್ರೀ ಹರಿ





www.sriharikhoday.com

22-07-2011

ಸೃಷ್ಟಿಕರ್ತನೆ ಜಗತ್ತಿನ ಮರ್ಮವನ್ನು
ಬಚ್ಚಿಟ್ಟುಕೊಂಡಿರುವಾಗ ನಾನೇಕೆ
ಜಗದ ಮರ್ಮಗಳನ್ನು ಹುಡುಕಲಿ ?
ಕಣ್ಣೆದುರಿಗೆ ಎಲ್ಲವೂ ಬೆಳೆದು ಮಣ್ಣಾಗುತ್ತಿರುವಾಗ
ನಾನೇಕೆ ಜಗತ್ತಿಗೆ ಮಾದರಿಯಾಗಲಿ !

ಬುದ್ಧಿ ಬೆಳೆಸಿಕೊಂಡಿರುವ ಪ್ರಾಣಿಗಳು ಭೋಗಾಪೇಕ್ಷೆಗಳ
ಬೇಡವೆನ್ನದೆ ಭೋಗ ಅನುಭವಿಸುತ್ತಿರುವಾಗ
ನಾನೇಕೆ ಭೋಗಾಪೇಕ್ಷೆಗಳಿಲ್ಲದೆ ಇರಲಿ ?
ದೇವರ ಸೃಷ್ಟಿಯಲ್ಲಿ ಹೇ ಕಾಂತೆ,
ಎಲ್ಲವನ್ನೂ ಜೊತೆಗೂಡಿ ಅನುಭವಿಸೋಣ!

ಜಗತ್ತಿಗೆ ನಮ್ಮಿಬ್ಬರ ಉಲ್ಲಾಸ ನಿಶೆ ಎನ್ನೋಣ
ಜಗತ್ತಿಗೆ ನಮ್ಮಿಬ್ಬರ ಬಾಂಧವ್ಯದ ಸುಖ ನಿಶೆ ಎನ್ನೋಣ
ಜಗತ್ತಿಗೆ ದೇವರ ಜೊತೆಗಿರುವ ನಮ್ಮಿಬ್ಬರ ಅನುಭವ
ನಿಶೆ ಎನ್ನೋಣ, ದೇವರನ್ನು ನಾವು ಕುಡಿಯುತ್ತಿರುವುದೇ
ನಿಶೆಯ ಬಟ್ಟಲಿನ ನಿಶವೆನ್ನೋಣ

- ಶ್ರೀ ಹರಿ






25-07-2011

ಆಧ್ಯಾತ್ಮಿಕ ಎತ್ತರಕ್ಕೆ ಹತ್ತಬೇಕೆಂದು
ಹತ್ತ ತೊಡಗಿದೆ ಅರ್ಧದಲ್ಲೇ
ಎಡವಿ ಬಿದ್ದೆ, ಮತ್ತೆ ಹತ್ತುವ
ಪ್ರಯತ್ನದಲ್ಲಿ ಅರಿವಾಯಿತು
ಹತ್ತಬೇಡ ಅದು ಇಲ್ಲೇ ಇದೆ ಎಂದು

ಅಂತರಂಗದ ಅಡಿಗಳನ್ನು ಕಂಡು
ಹೊಸ ಭಾವನೆಗಳ ಕೃಷಿ ಮಾಡಿ
ಪ್ರೀತಿಯ ಪಾತ್ರೆಯಲ್ಲಿ ಹೊಸದನ್ನು
ಅಡುಗೆ ಮಾಡಿ, ನಾ ಮಾಡಿದ ಅಡುಗೆ
ನಾನೇ ಉಂಡಮೇಲೆ ಎತ್ತರಗಳು ಕಿರಿದಾಗಿವೆ !

ಹೇ ಪ್ರಿಯಳೆ, ಹಿಂದಿನ ದಿನಗಳ ಮರೆತು
ಕಿರಿದಾಗಿರುವ ಎತ್ತರಗಳ ಜೊತೆ ಬೆರೆತು
ಚಿಕ್ಕದಾಗಿದ್ದ ನಮ್ಮ ಪ್ರೀತಿಯನ್ನು ಬೆಳೆಸಿ
ನಮ್ಮಿಬ್ಬರ ಪ್ರೀತಿಯ ಅಡುಗೆ ಇಂದು
ಜಗಕ್ಕೆ ಉಣಬಡಿಸಿ ಮೆಚ್ಚಿಸೋಣ!

- ಶ್ರೀ ಹರಿ





www.sriharikhoday.com

25-07-2011

ಹೇ ಕಾಂತೆ, ಎಲ್ಲರೂ ನನಗೆ ಹುಚ್ಚ ಎನುವರು
ನಿನ್ನ ಮನಕ್ಕೆ ನನ್ನ ಕಂಡರೆ ಏನು ಅನಿಸುವುದು ?

ಪ್ರಿಯ, ಮನದ ಕನ್ನಡಿಯಲ್ಲಿ ಕಾಣುತ್ತಿರುವವ
ಬಿದ್ದಂತೆ ಹೊರ ತೋರಿಸುತ್ತಿದೆ, ಆದರೆ ಕನ್ನಡಿಯ
ಅನುಭವ ಯಾರಿಗೂ ಅರಿವಾಗಿಲ್ಲ!

ಸತ್ಯದ ಜೊತೆ ಅಸತ್ಯ ಇರುವಂತೆ
ನಮ್ಮ ಹಿಂದೆ ನೆರಳು ಹಿಂಬಾಲಿಸುತ್ತಿರುವಂತೆ
ಜೊತೆಗೆ ಕಾಲವು ಜೊತೆ ಜೊತೆ ಇರುವಂತೆ
ಸೂರ್ಯ ಚಂದ್ರರು ಜೊತೆ ಜೀವಿಸುತ್ತಿರುವಂತೆ

ದೇವರ ಜೊತೆಯಿದ್ದರೂ ಮನದ ಕನ್ನಡಿ
ಅನುಭವಿಸದೆ, ಹರುಷ ಸಂತಸಗಳ
ಅನುಭವಿಸುವ ವಿಧಾನ ಜನಗಳಿಗೆ ತಿಳಿದಿಲ್ಲ
ಅವರು ನಿನಗೆ ಹುಚ್ಚ ಎನ್ನುವರು !

ನಮ್ಮಿಬ್ಬರ ನಗ್ನ ಮನಗಳು ನಮ್ಮ ಮನಸ್ಸಿನ
ಕನ್ನಡಿಯನ್ನು ನೋಡಿ, ನಮ್ಮಿಬ್ಬರ ಸಂತಸ
ಸುಖಗಳ ಅನುಭವದಲ್ಲಿ ಕನ್ನಡಿ ಜೊತೆ ಸೇರಿ
ಜೊತೆಯಿರುವ ದೇವರಿಗೆ ತೋರಿಸುತ್ತಿದೆ !

- ಶ್ರೀ ಹರಿ





25-07-2011

ಜನುಮಗಳು ಸಾಕು ಎನ್ನದೆ
ಸಾವು ಬರುವವರೆಗೂ ಚೆನ್ನಾಗಿ
ಬದುಕಿ ಎಲ್ಲರ ಜೊತೆ
ಒಪ್ಪಿಗೆಯ ಜೀವನ ನಡೆಸೋಣ !

ಕಾಮದ ಜೊತೆಗೆ ಪ್ರೀತಿಯನ್ನು ಲೇಪಿಸಿಕೊಂಡು
ಸುಖದ ಅಪೇಕ್ಷೆ ನೀಡುವ ಪದರ ಪದರಗಳ
ಹೊಸತನವನ್ನು ನಾವಿಬ್ಬರೂ ದೇವರ
ಜೊತೆ ಸುಖ ಪಡೆಯೋಣ !

ಧರ್ಮ ಅಧರ್ಮಗಳಿಗೆ ರೂಪವಿಲ್ಲದಿದ್ದರೂ
ನಮ್ಮ ಸಹಜ ಗುಣ ಎಲ್ಲರ ಜೊತೆ
ಬೆರೆತು ಜೀವಿಸುವುದು ಧರ್ಮವಾದರೆ
ಕಷ್ಟ ನೀಡಿ ಅಸೂಯೆ ಬರುವ ವಿಚಾರಗಳು

ಅಧರ್ಮ ಎಂದು ಪರಿಗಣಿಸಿ
ಬರುವುದೆಲ್ಲ ಸಂತಸದಿ ಸ್ವೀಕರಿಸೋಣ !

- ಶ್ರೀ ಹರಿ





www.sriharikhoday.com

26-07-2011

ಆತ್ಮ ವಿಶ್ವಾಸವ ಬೆಳೆಸುವುದಕ್ಕೆ
ನಮ್ಮಲ್ಲಿ ಒಂದು ವೇದಿಕೆ ಬೆಳೆಸಿಕೊಳ್ಳಬೇಕು

ಸರಿ ತಪ್ಪುಗಳ ತಿಳಿದಿರುವ ನಮ್ಮ
ಮನಸ್ಸಿಗೆ ಸರಿ ಸರಿ ಎನ್ನಲು
ತಪ್ಪು ತಪ್ಪು ಎನ್ನುವ
ಧೈರ್ಯ ತುಂಬಬೇಕು !

ಸಂಬಂಧಗಳ ಕಟ್ಟುವುದು ಮುರಿಯುವುದು
ಒಂದಾದರೆ, ಸಂಬಂಧಗಳನ್ನು ಬೆಳೆಸಲು
ನಮ್ಮ ಮನಸ್ಸಿನಲ್ಲಿ ಪ್ರೀತಿಗೆ ಕರೆ ಇರಬೇಕು
ಪ್ರೀತಿಯೇ ಮಾನವನ ಏಳಿಗೆಗೆ ಪ್ರಾಣ !

ನಾವು ಜಗವ ಕಾಣುತ್ತಿರುವ ಕನ್ನಡಿಗೆ ಜಿವ ತುಂಬಿ
ಕನ್ನಡಿಯ ಮೇಲೆ ಬೇಡದ್ದನ್ನು ಮುದ್ದಿಸಲು ಬಿಡದೆ
ಕಣ್ಣುಗಳಿಗೆ ರೆಪ್ಪೆಗಳು ಕಾದು ನೋಡುತ್ತಿರುವಂತೆ
ಮನವನ್ನು ಪ್ರಜ್ಞೆಯ ರೆಪ್ಪೆಗಳಿಂದ ಕಾಪಾಡಿಕೊಳ್ಳೋಣ !

- ಶ್ರೀ ಹರಿ





www.sriharikhoday.com


28-07-2011

ತರ್ಕ ಬೋಧಿಸಿ ಯುಕ್ತಿಗಳ ತೋರಿಸಿದ
ತನಗೆಂದೂ ತಿಳಿಯದ ಮಾತುಗಳ ಕಲ್ಪಿಸಿ
ಬೋಧನೆಯ ರೀತಿಯಲ್ಲಿ ಬೋಧಿಸಿ
ತಮಗೆ ಯುಕ್ತಿ ತಿಳಿದಿದೆ ಎನ್ನುವರು !

ಏನೂ ಅರಿಯದವರಿಗೆ ನಾಳೆ ಪೂರ್ವದಲ್ಲಿ
ಸೂರ್ಯ ಹುಟ್ಟುವನೆಂದು ಹೇಳಿ
ಸೂರ್ಯನುದಯಿಸಿದ ಮೇಲೆ ನಾನು
ನುಡಿದಂತೆ ಜಗವು ನಡೆಯುವುದೆಂದು
ತಾವೇ ಜಗತ್ತಿನ ಗುರುಗಳೆನ್ನುವರು ಆದರ್ಶರು!

ನಾನು ಜಗತ್ತಿಗೆ ಒಳ್ಳೆಯ ಕೆಲಸ ಮಾಡುತ್ತಿರುವೆ
ನಾ ಜಗತ್ತಿನ ಉದ್ಧಾರಕ್ಕಾಗಿಯೇ ಹುಟ್ಟಿರುವೆನೆಂದು
ತನ್ನದೇ ಆದ ಧರ್ಮವನ್ನು ಸ್ಥಾಪಿಸುವೆನೆನ್ನುವವರು
ನಾಲ್ಕು ಎತ್ತುಗಳಿಗೆ ಹುಲ್ಲು ಹಾಕಿ ಹಾಲ ಕರೆದೆನೆಂಬ
ಸತ್ಯ, ಅಸತ್ಯದ ವಿಚಾರ ಎನ್ನುವರು !
ಇದನ್ನು ನಂಬುವವರು ನಂಬುವರು
ಕೆಲವರು ಹೇಳುವರು ಇದು ತಿಳಿಯಲಿಲ್ಲ ಎಂದು

- ಶ್ರೀ ಹರಿ



29-07-2011

ಭೋಗದ ಅಪೇಕ್ಷೆ ಸ್ವಾಭಾವಿಕವಾಗಿರುವಾಗ
ತ್ಯಾಗಬುದ್ಧಿ ಪ್ರಯತ್ನದಿಂದ ಸಂಪಾದಿಸಿ
ಸ್ವಾಭಾವಿಕವಾಗಿ ಬಂದಿರುವುದನ್ನು ಹೇಗೆ ತಿರುಗಿಸಬಹುದು
ಇದು ಪುರಾತನ ಪ್ರಯತ್ನಗಳು, ಪುರಾತನ ಪ್ರಶ್ನೆಗಳು !

ತಾನಾಗಿ ಮಾಗಿದ ಹಣ್ಣಿನ ರಸದಲ್ಲಿ
ಸ್ವಾರಸ್ಯವಿರುವಂತೆ, ಒಲಿದು ಬಂದ ಹೆಣ್ಣಿನ
ಭಾವನೆ ಅವಳ ಸೂಕ್ಷ್ಮ ನಯನಗಳಲ್ಲಿ
ವೈರಾಗ್ಯ ಭಾವನೆಗಳಿಗೆ ಸಿಡಿಮದ್ದು!

ವಿಷಯ ಅನುಭವವೇ ವೈರಾಗ್ಯಕ್ಕೆ ಅಡ್ಡವಾಗಿರಲು, ಏನೂ
ಸಹಾಯವಾಗದ ವೈರಾಗ್ಯದ ಬೇಡಿಕೆಯೇಕೆ ?
ದೇವರನ್ನನುಭವಿಸುವ ಸಮಯ ವೈರಾಗ್ಯವೇ ಎಂದು ಬಿಟ್ಟರು
ದೇವರನ್ನನುಭವಿಸುವ ಸಮಯವಿಲ್ಲದಿದ್ದರೆ ಅದೆಂತಹ ಜೀವನ

ಹೇ ಪ್ರಿಯೆ, ನಿಶೆಯ ಬಟ್ಟಲನ್ನು ತಾ
ನಿನಗೆ ಭೋಗದ ವೈರಾಗ್ಯ ಬೇಡ
ನನಗೂ ಭೋಗದ ವೈರಾಗ್ಯ ಬೇಡ
ನಮ್ಮಿಬ್ಬರ ಸುಖದಲ್ಲಿ ದೇವರನ್ನು ಅನುಭವಿಸೋಣ !

- ಶ್ರೀ ಹರಿ





01-08-2011


ಮನುಷ್ಯನು ಸಾವಿರಾರು ವರುಷಗಳಲ್ಲಿ
ಸಾವಿರಾರು ರೀತಿಗಳನ್ನು ಕಲಿತುಕೊಂಡಿದ್ದಾನೆ
ದೇವರನ್ನು ಅನುಭವಿಸುವ ಕಲೆ ಕಲಿಯದೆ ದೇವರಿಂದ
ದೂರವಾಗುವ ವಿಧಾನಗಳನ್ನು ಕಲಿಯುತ್ತಿದ್ದಾನೆ

ನಾನು ಅನುಭವಿಸಿದ ನನ್ನ ಅನುಭವ ನನ್ನೊಬ್ಬನ
ಅನುಭವವಾಗದೆ, ನನ್ನ ಕಾಂತೆಯ ಜೊತೆ
ದೇವರನ್ನು ಅನುಭವಿಸುವ ಸತ್ಯವಿರುವ ಹಾಗೆ
ನನ್ನ ಅನುಭವದಲ್ಲಿ ಸತ್ಯವನ್ನು ಅನುಭವಿಸಿದಾದ ಮೇಲೆ
ನಮ್ಮಿಬ್ಬರಿಗೇಕೆ ದೇವರ ಮೇಲೆ ಏಕೆ ಶಂಕೆ !

ಶರೀರದ ಬಯಕೆಯ ಜೊತೆಗೆ ದೇವರ ಬಯಕೆ
ಬೆರೆಸಿದ್ದಾದರೆ, ಕಲ್ಲಲ್ಲಿರುವ ದೇವರ ಬಂಡೆಗೆ
ಮುತ್ತಿಡುವಾಸೆ, ನಿನ್ನ ಮೃದು ತುಟಿಗಳ ಮುತ್ತಿಡುವಾಸೆ
ಬಾರಿ ಬಾರಿ ಗುಲಾಬಿಯನ್ನು ಮೂಸಿಸುವ ಆಸೆ
ತುಟಿಗೆ ನಿಶೆಯ ಬಟ್ಟಲ ನೆಕ್ಕುತ್ತ ಅಮಲು ಕುಡಿಯುವಾಸೆ !

ನಿನ್ನ ಅಪ್ಪಿನಲ್ಲಿ ವಿಶ್ವವನ್ನೇ ಅಪ್ಪಿಕೊಂಡಂತೆ
ಹೇ ಕಾಂತೆ, ನಮ್ಮಿಬ್ಬರ ಹರುಷದ ಕಣ್ಣೀರಿನಿಂದ
ದೇವರ ಪಾದಗಳನ್ನು ತೊಳೆದು ನಮಿಸೋಣ !

- ಶ್ರೀ ಹರಿ





www.sriharikhoday.com

01-08-2011

ಈ ಹಗರಣದ ದಿನಗಳಲ್ಲಿ ಕಿವಿ ತೆರೆದು ಕೇಳು
ಈ ನಂಬಿಕೆ ಇಲ್ಲದ ದಿನಗಳಲ್ಲಿ ಕಣ್ತೆರೆದು ನೋಡು
ದಿನವೂ ಬದಲಾಗುತ್ತಿರುವ ದಿನಗಳಲ್ಲಿ ನಾಲಿಗೆಗೆ ಬೀಗ ಹಾಕಿ
ಕೆಟ್ಟವಾಸನೆ ಬಂದರೂ ಸುವಾಸನೆ ಎಂದು ಹೇಳು !

ಜನಗಳಲ್ಲಿ ಸುಳ್ಳು ಕೇಳುವ ಬೇಡಿಕೆ ಇದ್ದಲ್ಲಿ ನೀ
ಮಾತಾಡದೆ ಮೂಕನಾಗಿಬಿಡು ಅಂಜಿಕೆಯಿಲ್ಲದೆ
ಪಾಪಗಳ ಮಾಡುತ್ತಿರುವ ದಿನಗಳಲ್ಲಿ ನೀ ಕುರುಡನಂತೆ,
ಕಂಡರೂ ಕಾಣಲಾಗದು ಎಂದುಬಿಡು !

ಚಾಡಿಗಳ ಸುರಿಮಳೆ ಬೀಳುತ್ತಿರುವ ದಿನಗಳಲ್ಲಿ
ನೀ ಕಿವುಡನಾಗಿ ಏನೂ ಕೇಳುತ್ತಿಲ್ಲವೆಂದು ಹೇಳು
ಗೊಂದಲಗಳು ಹೆಚ್ಚಾಗುತ್ತಿರುವ ದಿನಗಳಲ್ಲಿ
ಕಾಂತೆಯೊಡನೆ, ನಿಶೆಯ ಸೇವಿಸುತ್ತಾ ಗುಲಾಬಿಯ
ನೋಡುತ್ತ ಮೂಸುತ್ತ ಏಕಾಂತದಲ್ಲಿರುವುದೇ ಮೇಲು !

- ಶ್ರೀ ಹರಿ





03-08-2011


ಕೆತ್ತಿದ ಕೆತ್ತನೆಯಲ್ಲಿ ದೇವರು ಇಲ್ಲ
ಕೆತ್ತನೆಯ ದೇಗುಲಗಳಲ್ಲಿ ದೇವರಿಲ್ಲ
ಕಟ್ಟಿದ ಕಟ್ಟಡಗಳಲ್ಲಿ ದೇವರಿಲ್ಲ
ದೇವರನ್ನು ಕಟ್ಟಿ ಹಾಕುವ ಕಟ್ಟಡಗಳೇ ಇಲ್ಲ!

ನಿರಾಳ ಭಾವನೆಗಳಿಂದ ದೇವರಲ್ಲಿ
ಬೆರೆತು ಯಾವ ಪ್ರಯತ್ನಗಳೂ ಇಲ್ಲದೆ
ದೂರವಿರುವ ದೇವರನ್ನು ಹತ್ತಿರದಲ್ಲೇ
ಬೆರೆತುಕೊಂಡ ಮನವೇ ದೇಗುಲ !

ದೊರೆತ ದೇವರನ್ನು ಬಹಳ ಹೊತ್ತು ಜೊತೆ
ಬೆರಕೆಗೆ, ಜೊತೆಯಲ್ಲಿರುವ ದೇವರ ಸುಖ ಬಹಳ
ಹೊತ್ತು ಅನುಭವಿಸಲು, ವಿಶ್ವದ ಜೊತೆ
ಬೆರೆಸುವ ಮಹಾ ಶಕ್ತಿಯೊಡನೆ ಅನುಭವಿಸಲು

ನಿಶೆಯ ಕುಡಿಕೆ ದೀರ್ಘಕಾಲದ ಜೊತೆ ಸಂಬಂಧ
ಜೀವನದ ಕೊರತೆಗಳನ್ನು ಇಲ್ಲವಾಗಿಸುವುದು !

- ಶ್ರೀ ಹರಿ





www.sriharikhoday.com

04-08-2011

ಈ ಜಗದ ಶಾಶ್ವತ ನೆಲೆ, ತಿಳಿಯದ ಮನುಷ್ಯನ ಜನ್ಮ
ಈ ಜಗವು ಕೃತಕವೋ, ಆದಿಯಿಂದಲೇ ಇರುವುದೋ, ತಿಳಿಯದೆ,
ಈಗಿನ ಮನುಜ, ಮಾನವನು ಹಿಂದೆ ಇದ್ದನೋ, ಇಲ್ಲವೋ ತಿಳಿಯದೆ,
ಎಲ್ಲವೂ ಹೊಸ ಅನುಭವಗಳ ಹುಡುಕಾಟದಲ್ಲಿ,
ಕಂಡುಹಿಡಿದು, ತಿಳಿದಿದ್ದನ್ನು ನಮ್ಮದು ಎನ್ನುವನು !

ನಾವುಗಳು ತರ್ಕ ಮಾಡುತ್ತಿರುವ ದೇವರು ಹಳಬರೇ?
ನಮ್ಮ ಸಂಶಯದ ಮನಸ್ಸು ಚಿತ್ರಿಸುತ್ತಿರುವ ದೇವರು ಹಳಬರೇ?
ನಾನು ದೇವರನ್ನು ನೋಡಿದೆನೆಂದು ಹೇಳುವವನಿಗೆ
ದೊರೆತಿರುವುದು ಹೊಸ ದೇವರೇ ?
ಅದು ಅವರದೇ ಆದರೆ, ಆ ದೇವರು ನಮಗೆ ಸಿಗುವುದಿಲ್ಲವೇ ?

ದೊರೆತಿರುವ ಈ ದೇವರು, ನಮ್ಮ ಗುಂಪಿಗೆ ಸೇರಿದ್ದು
ಅದನ್ನು ಪೂಜಿಸುವ ಹಕ್ಕು ನಮಗಿಲ್ಲವೆಂಬ ಮಾತುಗಳು
ನಗುತ್ತಾ ನಗುತ್ತ ನನಗೆ ದುಃಖದ ಅಳು ತರಿಸುತ್ತಿದೆ !
ಕೋಟಿ ಜನಗಳಿಗೆ ಕೋಟಿ ದೇವರಿಲ್ಲ, ಆ ದೇವರು

ಗುಲಾಬಿಗೆ ದೇವರು, ನಿಶೆಗೆ ದೇವರು, ಕಲ್ಲಿಗೆ ದೇವರು
ನೀರಿಗೆ ದೇವರು ಆಕಾಶಕ್ಕೆ ದೇವರು, ನಿಮ್ಮ ಬುದ್ಧಿಗೂ
ದೇವರು, ನಿಮ್ಮ ಎಲುಬು ಬುರುಡೆಗೂ ದೇವರು,
ತನ್ನದು ಎಂದು ಮರೆತು ಬೆರೆಯುವುದೇ ದೇವರು !

- ಶ್ರೀ ಹರಿ





www.sriharikhoday.com

05-08-2011


ಅತಿ ಎಚ್ಚರದ ಮನವು ಸುಖವನ್ನು ಅರಿಯದು
ಮಧುಪಾನ ಮಾಡಿದ ಮನಸ್ಸು
ನಿಶೆಯಿಂದ ಕಲಿಕೆಯಾಗಿದ್ದರೂ
ಸುಖದ ಜೊತೆ ಬೆರೆಯಲು ಅಡ್ಡ ಬರದು !

ಮಧುಪಾನ ಮಾಡಿ ನಾ ಕೆಟ್ಟೆಯೆನ್ನುವರು
ನನ್ನ ಮರು ಯೋಚನೆ ಹೇಳಿತು
ಮಧುಪಾನದ ರಹಸ್ಯ ತಿಳಿಯದವರು
ಸುಖ ಪಡೆಯದೆ ಕೆಟ್ಟರು !

ಋತುಮಾಸಗಳು ಬದಲಿದಂತೆ ಗುಲಾಬಿಯ
ಸುವಾಸನೆ ಯೌವ್ವನವನ್ನು ಅರಳಿಸಿ,
ಮಧುಪಾನದ ಸುಖ ನಮ್ಮಿಬ್ಬರ ಸುಖದಲ್ಲಿ ಬೆರೆತು
ದೇವರ ಜೊತೆ ಬೆರೆತಿರುವ ನಾವುಗಳು !

ನಮ್ಮ ಸುಖಕ್ಕೆ ಕೊರತೆಯಿಲ್ಲವೆಂಬ ಭಾವನೆ
ನಾವಿಬ್ಬರೂ ಸುಖದ ಅಮರತ್ವವನ್ನು ಪಡೆದು
ಅಮರನಾಗಿರುವ ಆ ದೇವನ ಜೊತೆ ನಾವು
ಜೀವಿಸುವವರೆಗೂ ನಮ್ಮ ಪ್ರೀತಿ ಅಮರ !

- ಶ್ರೀ ಹರಿ



05-08-2011

ಸಿದ್ಧಾಂತಗಳೇ ಬೇಧವನ್ನು ಅನುಭವಿಸುತ್ತಿರುವಾಗ
ಅನುಭವಗಳು ಒಬ್ಬೊಬ್ಬರ ಅನುಭವಗಳಾಗಿರುವಾಗ
ದೃಷ್ಟಿಕೋನಗಳು ಲೆಕ್ಕದ ಅರಿವಿಲ್ಲದಾದ ಕಾರಣ
ತಮ್ಮ ಇಂದಿನ ಸುಖದ ಅನುಭವ ಅವರದ್ದೇ ಆಗಿರುವಾಗ
ಶರೀರದ ಸುಖ ತರ್ಕಗಳನ್ನು ಮೀರಿಸಿದೆ !

ಸಂದೇಹಗಳು ಇಲ್ಲದ ಅನುಭವ, ಕಾಣುವ ಎದುರಲ್ಲಿ
ಬೆರೆಯುವ ಅನುಭವ ಕವಿದೀಪಗಳ ನಾನಾ
ವರ್ಣಕಾಂತಿಗಳ ಅನುಭವ ತರ್ಕವಿಲ್ಲದ ಸೂರ್ಯ
ಕಿರಣಗಳ ಪ್ರಭೆಯಂತೆ, ಉಮರನು ಎಲ್ಲವನ್ನು ಸ್ವೀಕರಿಸಿ
ಸುಖದಿಂದ ಅನುಭವಿಸಿದ ಎಲ್ಲ ಸನ್ನಿವೇಶಗಳು

ಈ ಜಗತ್ತಿಗೆ ಉಮರನ ಮನಸ್ಸಿನ ಕಾಲಿನ ಹೆಜ್ಜೆಗಳ ಗುರುತುಗಳು
ಕೆಲವರು ಇದು ಸರಿ ಅದು ತಪ್ಪು ಎನ್ನುವರು
ಕೆಲವರು ಹಳೆಯ ವಿಚಾರಗಳನ್ನು ಸಂಗ್ರಹಿಸಿ ಹೇಳುವರು
ಕೇಳಲಾಗದ ಪ್ರಶ್ನೆಗಳ ಸುಖದ ಅನುಭವ
ಹೂವಿನಿಂದ ಬಣ್ಣಗಳು ಅರಳುವಂತೆ

ಉಮರನು ತನ್ನ ಕಾಂತೆಯ ಜೊತೆ
ಸುಖಗಳನ್ನು ಅರಳಿಸಿ ಜಗತ್ತಿಗೆ ಫಲವಾಗಿ ನೀಡಿದ್ದಾನೆ!

- ಶ್ರೀ ಹರಿ





06-08-2011


ಪಶುಗಳಿಗೆ ದೇವರ ಮೇಲೆ ಸಂದೇಹವಿಲ್ಲ
ದೇವರೆಂಬ ಮಹಾನ್‌ಶಕ್ತಿ ವಿಶ್ವವನ್ನು ನಿರ್ಮಿಸಿದೆ
ಈ ಸೃಷ್ಟಿಕರ್ತನ ನಿರ್ಮಾಣದಲ್ಲಿ ಮಾನವನೂ ಒಬ್ಬ!

ಭೋಗಾನುಭವಗಳಲ್ಲಿ ಆಸಕ್ತನಾದ ಮಾನವ
ತೃಪ್ತಿಗಳ ಗಡಿಗಳನ್ನು ತಿಳಿಯದೆ ತನ್ನ ಬಯಕೆಗಳಲ್ಲಿ
ದೇವರನ್ನು ಮರೆತು, ದೇವರಲ್ಲಿ ಬೆರೆಯುವುದನ್ನು ಮರೆತು
ಕುಂಬಾರನ ಚಕ್ರ ಮಣ್ಣಿಲ್ಲದೆ ತಿರುಗುವಂತೆ ತಿರುಗಿ
ಆತ್ಮ ಶರೀರದ ಸಂಬಂಧಗಳನ್ನು ಬೆಳೆಸದೆ
ಹುಚ್ಚು ಹುಚ್ಚಾಗಿ ಅವನ ಆಯಸ್ಸು ಓಡುತ್ತಿದೆ !

ಇದನ್ನರಿತ ಉಮರನು ಭೋಗಾನುಭವದಲ್ಲಿ
ದೇವರನ್ನು ಅನುಭವಿಸಿ, ದೇವರನ್ನನುಭವಿಸಿದ
ಸುಖ ಆ ಸುಖದ ಜೊತೆಗೆ ಅಮಲಿನ ಬೆರಕೆ
ಆ ಬೆರಕೆಯಲ್ಲಿ ವಿಶ್ವ ಮಹಾಶಕ್ತಿಯ ಬೆರಕೆ

ಉಮರನು ದೇಹ ಸಂಬಂಧದ ಬೆರಕೆಯಲ್ಲಿ
ಮಹಾಶಕ್ತಿಯ ತನ್ನ ಶಕ್ತಿಯನ್ನು ಅನುಭವಿಸುತ್ತ
ಆನಂದದಿಂದ ಬ್ರಹ್ಮಾಂಡವನ್ನು ತಿರುಗಿಸುತ್ತಿದೆ !

- ಶ್ರೀ ಹರಿ





www.sriharikhoday.com

08-08-2011

ನನ್ನ ನಂಬಿಕೆಯಲ್ಲಿ ನನಗೆ ನಂಬಿಕೆ
ನನ್ನ ನಂಬಿಕೆಯಿಂದ ದೇವರಲ್ಲಿ ಬೆರೆತೆ
ನನ್ನ ಬೆರಕೆ ಕಂಡು ದೇವರು ನಮ್ಮಲ್ಲಿ ಬೆರೆತು
ವಿಶ್ವದ ಜೊತೆಗೆ ದೇವರು ಬೆರೆಸಿಹನು!

ನಂಬಿಕೆ ಬೇಡದ ವಿಚಾರಗಳನ್ನು ಬದಿಗೊತ್ತಿ
ಬೇಕಿರುವ ವಿಶ್ವದ ವಿಚಾರಗಳಲ್ಲಿ ಬೆರೆಸಿ
ನಮಗೆ ಸಲಿಸಲಿ ಬೆರೆಕೆಯಲ್ಲಿ ಹೊಸ ಹೊಸ
ಅದ್ಭುತ ಅನುಭವಗಳನ್ನು ನೀಡುತಿದೆ!

ಸೂರ್ಯನ ಬೆಳಕಿನಿಂದ ಬೆಳೆ ಬೆಳೆಯುತ್ತಿರುವುದು
ಸೂರ್ಯನಿಗೇ ತಿಳಿದಿಲ್ಲ ಅದು ಅದರಲ್ಲಿ ಬೆರೆತು ಹೋಗಿದೆ
ಸಮುದ್ರದ ಅಲೆಗಳ ಆಟ ಸಮುದ್ರಕ್ಕೇ ತಿಳಿಯದೆ
ಸಮುದ್ರ ಅದರಲ್ಲಿ ಬೆರೆತು ಹೋಗಿದೆ!

ನಾನು ನನ್ನ ಕಾಂತೆಯ ಜೊತೆ ಪ್ರೀತಿ
ಮಾಡುತ್ತಿರುವುದು ನಮಗೇ ತಿಳಿಯದೆ
ಹೊಸ ಹೊಸ ಇರುವಿಕೆಯಲ್ಲಿ
ಅದರಲ್ಲಿ ಬೆರೆತು ಹೋಗಿರುವೆವು

ನಮ್ಮಲ್ಲಿ ನಮ್ಮ ನಂಬಿಕೆಗಳು ಇಲ್ಲದ್ದಲ್ಲಿ
ಯಾವುದರ ಜೊತೆಗೆ ಬೆರೆಯದೆ ಒಬ್ಬನೇ ಆಗಿ
ಟೀಕೆ ದ್ವೇಷ ತರ್ಕಗಳಲ್ಲಿ ಶರೀರದ ಜೊತೆಗೆ
ತಾನು ಕೊಳೆತುಹೋಗುವನು

- ಶ್ರೀ ಹರಿ.



10-08-2011

ಮನದ ಸವಾಲಿಗೆ ಉತ್ತರ ಒಂದಲ್ಲ ಎರಡಲ್ಲ
ಮನವು ಉತ್ತರ ಕೇಳುವ ರೀತಿಯಲ್ಲಿದೆ
ನನಗೆ ಇರುವುದು ಒಂದೇ ಸವಾಲು
ದೇವರಲ್ಲಿ ಬೆರೆಯುವ ಒಂದೇ ಸವಾಲು!

ನಗ್ನ ಆಕಾಶದಲ್ಲಿ ನಗ್ನ ನಕ್ಷತ್ರಗಳು
ದೇವರಲ್ಲಿ ಬೆರೆತುಹೋಗಿರುವ ಕತ್ತಲು
ಜೊತೆಗಿರುವ ನನ್ನ ಒಂಟಿತನ
ಒಂಟಿತನಕ್ಕೆ ನನ್ನ ಕಾಂತೆಯೊಡನೆ ನಿಶೆಯ ಬಟ್ಟಲು

ಕಾಣುತ್ತಿರುವುದರಲ್ಲಿ ಬೆರೆತು ಹೋಗಿರುವ ನಾವುಗಳು
ಮನದ ಕತ್ತಲಿನ ನಿಶ್ಶಬ್ದದಲ್ಲಿ ಕರಗಿ ಹೋಗಿರುವೆವು
ಮುಪ್ಪಿಲ್ಲದ ಆಕಾಶದಲ್ಲಿ ಬೆರೆತು ನಮಗೆ ಮುಪ್ಪಿಲ್ಲದಂತೆ
ಮುಪ್ಪಿಲ್ಲದ ನಕ್ಷತ್ರಗಳ ಜೊತೆ ಬೆರೆತು

ನಮಗೆ ಮುಪ್ಪೇನೆಂದು ತಿಳಿಯದೆ
ನಮ್ಮಿಬ್ಬರ ಒಂಟಿತನಕ್ಕೆ ಜೊತೆ ಸೇರಿರುವ ದೇವರು
ಆ ದೇವರ ಜೊತೆಗಿನ ಅನುಭವಗಳು ನಕ್ಷತ್ರಗಳನ್ನು
ಮಿನುಗಿಸಿ ಕತ್ತಲಿಗೆ ಬೆಳಕಾಗುವ ಸ್ಫೂರ್ತಿ ನೀಡುತ್ತಿದೆ

- ಶ್ರೀ ಹರಿ



www.sriharikhoday.com

11-08-2011

ಮತ್ತನ್ನು ತರುವ ನಿನ್ನ ಮೃದು ತುಟಿಗಳು ಬೆರೆಯವ
ಕಣ್ಣಂಚುಗಳಿಗೆ ಅಡ್ಡವಾಗಿರುವ ನಿನ್ನ ಕೇಶರಾಶಿ

ಒಪ್ಪಿಗೆ ಹೇಳುತ್ತಿರುವ ನಿನ್ನ ದಂತಶ್ರೇಣಿ ನಾ ನಿನ್ನಲ್ಲಿ
ಬೆರೆಯುವೆನೆಂದು ಹೇಳುತ್ತಿರುವ ಅವಳ ಶರೀರ ಭಾವನೆ,
ನನಗೆ ಮುತ್ತಿಟ್ಟು ಜೊತೆ ಬೆರೆತುಕೊ ಎಂದು ಹೇಳುತ್ತಿರುವದು!

ನನ್ನ ಮೇಲಿನ ನಂಬಿಕೆ ಅವಳನ್ನು
ನನ್ನಲ್ಲಿ ಬೆರೆಸಿ, ದೇವರಲ್ಲಿ ಬೆರೆಯುವ
ರೀತಿ ಜೀವನದ ರಸಿಕತೆ ಕಲಿಸಿದೆ

ಒಪ್ಪಿಗೆ ಜೊತೆ ಸೇರಿರುವ ನಮ್ಮ ನಂಬಿಕೆ
ಸತ್ಯದ ಜೊತೆ ನಮಗೆ ಸತ್ಯದ ದರ್ಶನ
ಪಡೆದು ಮತ್ತನ್ನೇರಿಸುವ ತುಟಿ ಮುತ್ತುಗಳು

ಶರೀರ ಬೆರಕೆಯಲ್ಲಿ ನಮ್ಮನ್ನು ನಾವೇ
ಮರೆತಿರುವ ಸ್ಥಿತಿ ಪ್ರಯತ್ನವಿಲ್ಲದೆ
ದೇವರ ಜೊತೆ ಬೆರೆಸಿ

ವಿಶ್ವದ ಜೊತೆಗೆ ಸೇರಿಕೊಳ್ಳುವ
ಅವಕಾಶ ಎಂದೆಂದಿಗೂ
ನಮ್ಮ ಜೊತೆ ನಿಶೆಯೂ ಜೊತೆಗಿರಲಿ

- ಶ್ರೀ ಹರಿ





www.sriharikhoday.com

12-08-2011

ನೀರಿನ ಗುಳ್ಳೆಗೆ ಜಗದ ಒಡೆಯನಾಗುವ ಆಸೆ
ಸಾಗರದ ಅಲೆಗಳಿಗೆ ತಾನೇ ಸಮುದ್ರದ ಒಡೆಯನಾಗುವ ಆಸೆ
ಜಗದಲ್ಲಿ ಕಷ್ಟ ಪಡದೆ ಕೈಗೆ ಸಿಗುವುದು ಬರಿ ಗಾಳಿ
ನಾನು ಯಾವುದನ್ನು ಆಶಿಸಲಿ !

ಜಗದ ಅರಸನಾಗಲು ಆಶಿಸಿದರೆ ಅವನು ಮಣ್ಣನ್ನು ಸೇರುವನು
ಜಗತ್ತಿನ ಖಜಾನೆಯನ್ನು ಪಡೆಯಲು ಆಶಿಸಿದರೆ
ನಾನು ಮಡಿದ ಮೇಲೆ
ಅದು ನನ್ನದಾಗದೆ ಬೇರೆಯವರಿಗಾಗುವುದು
ನಾ ಆಸೆ ಪಡಲೋ ಬೇಡವೋ?

ದೇವರನ್ನು ಮನುಷ್ಯನಿಗೆ ಪರಿಚಯಿಸೋಣವೆಂದರೆ
ನಾನು ಒಬ್ಬ ಗುರುವಾಗಬೇಕು
ಅವನಿಗೂ ಜನಗಳು ಸಮಾಧಿ ಕಟ್ಟುವರು
ಅನೇಕರ ಜೊತೆಗೆ ಬೋಗ ಪಡೆದು ಸುಖ
ಪಡೆಯೋಣವೆಂದರೆ ಎಲ್ಲರ ಸುಖ ಒಂದೇ ಎನಿಸುತ್ತಿದೆ !

ನಾನು ವೀಣೆಯ ತಂತಿಯಿಂದ ಬಂದ ನಾದದಂತೆ
ತಂತಿಯಿಂದ ಹೊರಬಂದು ತಂತಿಯೊಳಗೇ ಸೇರಿಕೊಳ್ಳುವಂತೆ
ಕತ್ತಲು ಬೆಳಕಿನಲ್ಲಿ ಕರಗಿ ಹೋಗುವಂತೆ
ನಾನು ನನ್ನ ಕಾಂತೆಯ ಬೆರಕೆಯಲ್ಲಿ ಕರಗಿ ಹೋಗಿ

ಈ ನಿಶೆಯಲ್ಲಿ ನನ್ನ ಶರೀರವನ್ನು ಮರೆತು
ಯಾರಿಗೂ ತಿಳಿಯದೆ ಇಲ್ಲವಾಗುವ ಆಸೆ
ಆ ನಮ್ಮ ನಿಮ್ಮ ದೇವರಲ್ಲಿ
ಕರಗಿ ಹೋಗುವ ಆಸೆ

- ಶ್ರೀ ಹರಿ



12-08-2011

ನಾಳೆ ಬೆಳಕಾಗುವ ವೇಳೆ ನಾವುಗಳು ಇರುವ ಭರವಸೆಯಿಲ್ಲ
ಪ್ರೇಮವನ್ನು ತಣಿಸಿಕೊಳ್ಳಲು ನಾಳಿನ ಬೆಳಗಿನ ಉದಯ
ನಾವುಗಳು ಇರುವೆವೋ ಇಲ್ಲವೋ ತಿಳಿಯದು !

ಲೋಕದ ರಹಸ್ಯಗಳ ಪುಸ್ತಕದಿಂದ ಕಲಿತೆ
ಗೆಳೆಯರು ಶತ್ರುಗಳಾಗುವರು
ಎಚ್ಚರದ ನೋಟದಲ್ಲಿ ಮತ್ಸರ ತುಂಬಿಹುದು
ಜಗದ ಕೊರಗಾಟಕ್ಕೆ ಕೊನೆಯೇ ಇಲ್ಲ
ಮೃತ್ಯುವಿನ ಗಂಟೆ ಯಾರೂ ಕೇಳಿಸಿಕೊಂಡಿಲ್ಲ!

ಸೌಂದರ್ಯದ ಜೊತೆಗೆ ಮಧುಗಿಂತ ಮೇಲಿಲ್ಲ
ಭಾವನೆಗಳ ಶೂನ್ಯದಲ್ಲಿ ಚೆಲುವಿನ ನಿರೀಕ್ಷೆ
ಅವಳ ಸೊಬಗಿನ ಸುಖದ ಜೊತೆ
ಮಧುಪಾನದ ಸುಖದಲ್ಲಿ ದೇವರನ್ನೇ ಗೆದ್ದು
ಅವನ ಜೊತೆ ಪಡೆದಿರುವ ಸುಖ

ಈ ಜಗತ್ತಿನಲ್ಲಿ ಆ ಸುಖಕ್ಕೆ ಬೆಲೆಕಟ್ಟಲಾಗದೆ
ಶೂನ್ಯದಲ್ಲಿ ನಾ ಹೊಕ್ಕು
ನಾವುಗಳು ಬಂದು ಹೋಗುವ ಹೊಸ್ತಿಲಾಗೋಣ!

- ಶ್ರೀ ಹರಿ



13-08-2011

ಕಣ್ ಕಣ್ಗಳ ಮಿಲನದಲ್ಲಿ ಭಾವನೆಗಳ ಉದಯ
ಭಾವನೆಗಳು ಉದ್ದೇಶಗಳಾಗಿ ಜೊತೆ
ಬೆರೆಯುವ ಭರವಸೆ !

ಅಂತರಂಗದ ಕಣ್ಣುಗಳಿಂದ ಮನಸ್ಸಿನ
ಭಾವನೆಗಳಿಂದ ಜೊತೆ ಬೆರೆಯುವ
ಭಾವನೆಯ ಉದಯ, ದೇವರ ಜೊತೆ
ಬೆರೆಯುವ ಭರವಸೆ ದೇವರಲ್ಲಿ ಬೆರೆಸಿದೆ!

ನನ್ನ ಕಾಂತೆ ಉದಯಿಸಿದ ಭಾವನೆಗಳ
ಜೊತೆ ನಾ ಬೆರೆಯುವಂತೆ
ಏನೂ ಬೇಡದ ಅನುಭವದ ಬೇಡಿಕೆಯಂತೆ
ದೇವರಲ್ಲಿ ಬೆರೆಯುವ ಭಾವನೆ ಬಯಸಿದರೆ

ಏನೂ ಬಯಸದೆ ದೇವರು
ನನ್ನಲ್ಲಿ ಬೆರೆಯುತ್ತಿದ್ದನೆ !

- ಶ್ರೀ ಹರಿ



www.sriharikhoday.com

16-08-2011

ದೇವರು ಕೊಟ್ಟಿರುವ ಕಾಲದಲ್ಲಿ
ಕಾಲ ಕೆಟ್ಟಿದೆ ಎಂದು ಕುಗ್ಗಿ ಕುಳಿತವರಿಗೆ
ಜಗದ ಎದುರಿಗೆ ತಲೆ ತಗ್ಗಿಸುವ ದಿನ
ಹತ್ತಿರ ಇದೆ ಇದು ಖಾಯಂ!

ವಿಧಿಯ ಸಂಚೊಂದು ನಮ್ಮನ್ನು ಜೊತೆಗೂಡಿಸಿ
ಯೌವ್ವನಕ್ಕೆ ಪರಿಚಯಿಸಿದ ಗುಲಾಬಿ
ದಿನವೂ ಹಬ್ಬದ ದಿನಗಳಾಗಿ ದ್ರಾಕ್ಷಾರಸ
ನಮ್ಮ ಯೌವ್ವನದ ರೆಕ್ಕೆಗಳಿಗೆ ಬಲಪಡಿಸುತ್ತಿದೆ!

ಕದಗಳಿಲ್ಲದ ನಭೋಮಂಡಲದಲ್ಲಿ ವಿಧಿಯ ಸಂಚಿನ
ಪ್ರೇಮಿಗಳ ಬೆಸುಗೆ, ನಮ್ಮಿಬ್ಬರ ಪ್ರಾಣಗಳನ್ನು ಒಂದಾಗಿಸಿ
ನಮ್ಮನ್ನೇ ಮರೆತ ನಮ್ಮಿಬ್ಬರ ಬೆರಕೆ ದೇವರಲ್ಲಿ
ಬೆರೆಸುವ ರೀತಿ, ವಿಧಿ ಕಲಿಸುತ್ತಿದೆಯೆಂಬ ಶಂಕೆ ನಮಗೆ!

- ಶ್ರೀ ಹರಿ






16-08-2011

ಕೆಲವರಿಗೆ ಕೋಳಿ ಕೂಗು ಎಚ್ಚರಿಸುತ್ತಿದೆ
ದೊರೆತಷ್ಟು ಹಣವನ್ನು ದೋಚಿಕೊ
ದೊರೆತಷ್ಟು ಸಂಪತ್ತನ್ನು ತನ್ನದು ಎನಿಸಿಕೊ
ಲೆಕ್ಕದಲ್ಲಿದ್ದ ಹಣ ಲೆಕ್ಕದಿಂದ ಅಳಿದರೆ
ತನಗೇ ತಿಳಿಯದೆ ಸಾವಿನ ದಿನಗಳನ್ನು ಬರೆಸುವಂತೆ!

ಹೊಸ ಸನ್ನಿವೇಶಗಳು ಹಳೆಯ ಸನ್ನಿವೇಶಗಳಾಗುವುದು
ಹೊಸ ಅರಿವು ನಾಳೆ ಹಳೆಯದಾಗಿ ಹೋಗುವುದು
ಜಗದಲ್ಲಿ ನೋಡು ನೂರಾರು ಗುಲಾಬಿ
ನಗುತ್ತಾ ಕಾಯುತ್ತಿದೆ ಎಂದಿಗೂ ಈ ಜಗದಲ್ಲಿ
ಇರಬೇಕೆಂಬ ಆಸೆ ಬಿಟ್ಟುಬಿಡು!

ಇರುವ ಸಮಯದಲ್ಲಿ ಬಾ ತುಂಬಿಕೊ ಬಟ್ಟಲನ್ನ
ಸಾವಿರಾರು ನಿನ್ನ ಮನ ಪ್ರಶ್ನೆಗಳ ಜೊತೆ ಯುದ್ಧ ನಡೆಯುತ್ತಿದೆ
ಈ ಯುದ್ಧದಲ್ಲಿ ಗೆದ್ದರೂ ನೀನೆ, ಸೋತರೂ ನೀನೆ
ಸರಿಯಾದ ತರ್ಕದ ನೆರಳು ಸರಿಯಾದ ಸತ್ಯದ ನೆರಳು
ನೀ ಮಡಿದರೂ ಕಾಲ ಬೇಡಿದ್ದಲ್ಲಿ ಮತ್ತೆ ಚಿಗುರುವುದು!

- ಶ್ರೀ ಹರಿ





www.sriharikhoday.com

17-08-2011

ಹಸಿವಿಗಾಗಿ ಕವಳ, ಚಳಿಗಾಗಿ ಬಟ್ಟೆ
ಜೀವನಕ್ಕಾಗಿ ದುಡಿಮೆ, ಮಿಕ್ಕಿದ್ದೆಲ್ಲಾ
ಬೇಡದ ಪದಾರ್ಥಗಳು!

ಇದನ್ನು ದಯಪಾಲಿಸಿರುವ ಆ ದೈವ
ಅವನ ದಯೆ ಮರೆಯುವುದು ಕಷ್ಟಗಳಿಗೆ ಆಹ್ವಾನ
ದೇಹದ ಜೊತೆಗೆ ನೀಡಿಹನು ಕಾಂತೆಯನು
ದೇವರ ಜೊತೆ ಬೆರೆಸಲು ನಿಶೆಯ ಬಟ್ಟಲು
ಇತ್ಯಾದಿ ಇತ್ಯಾದಿಗಳು ದೇವರು ಕೊಟ್ಟಿರುವ
ಅನೇಕ ಉಡುಗೊರೆಗಳು!

ಮಾಡುವುದನ್ನು ಮರೆಯದೆ ಮಾಡಿ
ಜನಗಳು ಬೇಡದನ್ನು ಯೋಚಿಸಿ ಯೋಚಿಸಿ
ತಮ್ಮ ಗಮನವನ್ನು ದೇವರಿಂದ ದೂರ ಹರಿಸಿ
ಏನೂ ಸಿಗದ ಮರುಭೂಮಿಯಲ್ಲಿ
ಇದು ಬೇಕು ಅದು ಬೇಕು ಎಂಬ ಮನಸ್ಸಿನ
ಆಟಕ್ಕೆ ಮನುಜ ಬಲಿಯಾಗಿರುವನು !

- ಶ್ರೀ ಹರಿ





www.sriharikhoday.com

18-08-2011


ತರ್ಕಗಳಿಂದ ದೇವರ ನೆಲೆ ಅರಿಯಲಾಗದು
ನಾನು ನನ್ನ ಬುದ್ಧಿಯೆಂಬ ವಿಚಾರ ತುಂಬಿರುವ
ತರ್ಕ, ದೇವರ ನೆರಳು ಕೂಡ ಕಾಣಲಾರದು

ತಾನು ತನ್ನದೆಂದು ಮರೆಯದಿರುವ ಜೀವ
ಒಲೆಯ ಬೆಂಕಿಗೆ ನೀರು ಸುರಿಸಿ, ನಾನು ಒಲೆಯ
ಮೇಲೆ ಅಡುಗೆ ಮಾಡುವೆನೆಂಬ ರೀತಿ
ಎಲ್ಲವೂ ಅವನದೆ ನಾನು ತನ್ನದು ಉಳಿದಿಲ್ಲ

ಯಾವುದರ ಅಹಂಕಾರವ ತಿಳಿಯದ
ತಿಳಿಮನಸ್ಸು, ಅಂತಹ ತಿಳಿಮನಸ್ಸಿನ ಚಿತ್ತರಥ,
ದೇವರ ದಡಕ್ಕೆ ಕೊಂಡೊಯ್ದು
ದೇವರಲ್ಲಿ ಬೆರೆಸುತ್ತದೆ

ತಾನು ಎಲ್ಲವನ್ನೂ ಮರೆತು
ಕಾಂತೆಯೊಡನೆ ಬೆರೆಸಿರುವ ಆ ಚಿತ್ತರಥ
ದೇವರ ಜೊತೆಯಲ್ಲೂ ಕೂಡ ಬೆರೆಸುತ್ತಾ ಇದೆ

- ಶ್ರೀ ಹರಿ



18-08-2011

ವಾದಿಸುತ್ತಲೇ ಇರಲಿ ಬುದ್ಧಿವಂತರು, .. . ಬಿಡು
ಕಣ್ಣಿಲ್ಲದವರು ಕುಡಿದು ಜಗವ ವರ್ಣಿಸುವಂತೆ
ನನ್ನನ್ನು ದ್ವೇಶ ಮಾಡುತ್ತಲೇ ಇರಲಿ ಬಿಡು
ನಾನು ದ್ರಾಕ್ಷಾರಸವನ್ನು ಕುಡಿದು
ದೇವರಲ್ಲಿ ಬೆರೆತುಕೊಳ್ಳುವೆ

ಜ್ಞಾನದಿಂದ ಗಳಿಸುವ ಲಾಭವೊಂದಿಲ್ಲ
ಅವರ ಜ್ಞಾನದಿಂದಾದ ಸಂಪಾದನೆ
ದುರುಳರ ಬಾಯಿಗೆ ಹೋಗಲಿ ಬಿಡು

ಎರಡು ಹೆಜ್ಜೆ ಹಾಕದ ಲೋಕದ ಜನರು
ಪ್ರಪಂಚದ ವಿವೇಕವನ್ನು ವಾದಿಸುತ್ತಿರಲಿ ಬಿಡು
ಕತ್ತಲಲ್ಲಿ ಕಳ್ಳನಂತೆ ನಾ ದೇವರನ್ನು ಕದ್ದು

ನನ್ನ ಕಾಂತೆಯೊಡನೆ ಕದ್ದ ಚಿನ್ನದ ದೇವರನ್ನು
ನಾವಿಬ್ಬರೂ ಹಂಚಿಕೊಂಡು ಜಗದ
ಸಿರಿವಂತರಾಗುವೆವು, ನೀ ಸುಮ್ಮನಿದ್ದು ನೋಡು !

- ಶ್ರೀ ಹರಿ



19-08-2011

ಹೇ ಕಾಂತೆ ನೀ ನನ್ನವಳು ಎಂದರೆ
ನಾ ದೇವರಲ್ಲಿ ಅರ್ಧ ಬೆರೆತಂತೆ
ನೀ ನನ್ನನ್ನು ನನ್ನವನು ಅಂದರೆ
ನೀ ದೇವರಲ್ಲಿ ಅರ್ಧ ಬೆರೆತಂತೆ

ಕಾಂತೆ ದೇವರು ಕೊಟ್ಟಿರುವುದರಲ್ಲಿ
ಸುಖ ಹುಡುಕಿ ಅದನ್ನು ನೆನೆಸಿ ನೆನೆಸಿ
ಸುಖಪಟ್ಟರೆ, ದೇವರಿಗೆ ಪೂಜೆ ಮಾಡಿ
ದೇವರಲ್ಲಿ ಬೆರೆಯುವ ಸಿದ್ಧತೆಯಂತೆ

ನಮ್ಮಿಬ್ಬರ ಮನೋಸ್ಥಿತಿ ತಿಳಿದ ನೀನು
ನಮ್ಮ ಇರುವಿಕೆಯನ್ನು ಮರೆತು
ನಾವು ಕಂಡಿರುವ ಸುಖಗಳನ್ನು ನೆನೆಸುತ್ತ
ನೆನಪುಗಳೇನು ಎಂದು ಎಂಬುದ ಮರೆತು

ಕಾದಿರುವ ದೇವರ ಶಕ್ತಿಯಲ್ಲಿ ಬೆರೆತು ದೇವರಲ್ಲಿ
ಈ ಭೂಮಿಗೆ ಒಳ್ಳೆಯದನ್ನು ಬೇಡೋಣ

- ಶ್ರೀ ಹರಿ



www.sriharikhoday.com

20-08-2011

ನೋಡಿಕೊಳ್ಳುವವರು ಇದ್ದು
ಅರಮನೆಯಲ್ಲಿ ಇದ್ದರೆ ಅವನು ರಾಜಾಧಿರಾಜ
ಯಾರು ಇಲ್ಲದ ಮರುಭೂಮಿಯಲ್ಲಿ
ಒಬ್ಬನೇ ಇದ್ದಲ್ಲಿ ಅವನು ಗುಲಾಮ

ಹೇ ಕಾಂತೇ ನಡಿ ನಾವುಗಳು
ನಾಡಗಡಿಯ ಹುಲ್ಲುಗಾವಲಿನಲ್ಲಿ
ನಾವಿಬ್ಬರು ರೊಟ್ಟಿ ತಿಂದು
ಕುಡಿಕೆಯ ಮಧುವ ಸೇವಿಸೋಣ
ನಾ ನಿನ್ನ ನೋಡಿಕೊಂಡೆ ನೀ ರಾಣಿ
ನನ್ನ ನೀ ನೋಡಿಕೊಂಡೆ ನಾ ಅರಸ!

ಹುಲ್ಲುಗಾವಲಿನ ಚಿಕ್ಕ ನೆರಳ ಛಾವಣಿ
ನಮಗೆ ಅರಮನೆ, ನೋಡು ಆ ಗುಲಾಬಿಯು
ಅರಳುತ್ತಾ ಸಾರುತ್ತಿದೆ
ಜಗದಲ್ಲಿ ಬಂದು ನಗುತ್ತಾ ನಗುತ್ತಾ ನಿಂತಿಹನು
ಆಕಾಶದ ಹಂದರವೇ ನನಗೆ ಅರಮನೆ

ಗಾಳಿ ಬೆಳಕು, ನೀರು ಭೂಮಿ ನನ್ನನ್ನು ನೋಡಿಕೊಂಬರು
ನಾನೇ ರಾಜ ನನ್ನ ಜೊತೆಗಿರುವ ಬಣ್ಣಗಳೇ
ನನ್ನ ಜೊತೆ ರಾಣಿ ಹೇ ಕಾಂತೆ ಈ ಹುಲ್ಲುಗಾವಲಲ್ಲಿ
ನಾನೇ ರಾಜ, ನೀನೇ ರಾಣಿ
ನಮ್ಮ ಭಾವನೆಗಳೇ ನಮ್ಮ ಗುಲಾಮರು

- ಶ್ರೀ ಹರಿ






22-08-2011

ಉಲ್ಲಾಸದಿಂದ ಇರುವುದಕ್ಕೆ
ಯಾವ ಧರ್ಮವೂ ಬೇಕಿಲ್ಲ
ದೇವರಲ್ಲಿ ಬೆರೆಯುವುದಕ್ಕೆ
ಯಾವ ಮತವೂ ಬೇಕಿಲ್ಲ!

ತಾನಾಗಿ ಬೆಳೆಯುವ ದೇವರ ಬೆರಕೆ
ತಾನಾಗಿ ಬೆರೆಯುವ ದೇವರ ಬೆರಕೆಯ ಉಲ್ಲಾಸ
ಯಾವ ನಿಗ್ರಹವಿಲ್ಲದ ಬಯಲು ಅಲೆಯಾಗಿ
ಸಮುದ್ರದಿಂದ ಹೊರ ಬಂದು ಮತ್ತು
ಸಮುದ್ರದಲ್ಲಿ ಬೆರೆಯುವಂತೆ ತಿಳಿದರೆ
ನಾವು ದೇವರಲ್ಲಿ ಬೆರೆಯುವುದು ಸುಲಭ

ಸಾವು ಬರುವಾಗ ಬರಲಿ, ಬರುವವರೆಗೂ
ಉಲ್ಲಾಸದಿಂದ ಬದುಕೋಣ, ಸುಖ ವರ್ಣಿಸಲಾಗದ
ಬೆರಕೆ ದೇವರಿಗೂ ಮನವರಿಕೆ ಮಾಡಿಕೊಂಡಿರುವ
ಒಪ್ಪಿಗೆ ಸುಖದ ಅನುಭವ ಜೀವಿಸಿದ ಉಸಿರು ನಿಟ್ಟುಸಿರು!

- ಶ್ರೀ ಹರಿ





www.sriharikhoday.com

23-08-2011

ನಾವೆಲ್ಲರೂ  ಬಂದಿರುವುದು ಎಲ್ಲಿಂದ
ಹೋಗುವುದು ಎಲ್ಲಿಗೆಂದು ತಿಳಿಯದೆ
ಈ ಮುಖ್ಯ ವಿಷಯವನ್ನೇ ತಿಳಿಯಲು
ಅರಿಯದೆ, ಎಲ್ಲವನ್ನು ನಾ ತಿಳಿದಿರುವೆನೆಂಬ ಮೂರ್ಖತನದ ಜಂಭ !

ಬೆಳಗಿನ ವೇಳೆ ಕನ್ನಡಿಯನ್ನು ನೋಡುವಂತೆ
ಸುಮ್ಮನಿದ್ದ ರಾತ್ರಿಯಿಂದ ಬೆಳಗಿನವರೆಗೂ
ಏನು ಕಲಿತಿರುವೆವು?
ದಿನವೂ ಹಿಂದಿನ ಮುಖ ನೋಡುವಂತೆ
ನಿನ್ನೆ ನೆನೆಸಿದ ಜೀವನದ ಅರ್ಥಗಳನ್ನು
ಯೋಚಿಸುವವರು ಯಾರೂ ಇಲ್ಲ!

ಓ ದೇವ, ನೀ ನಿನ್ನೆ ದಿವಸ ಹೆಚ್ಚಿನ
ಮಧುಪಾನವನ್ನು ಸೇವಿಸಿ ನನಗೆ ನೀ
ನಿನ್ನ ಸಂತಸದ ಕದವನ್ನು ಮುಚ್ಚಿದ್ದೆ
ಕುಡಿದಿದ್ದು ನಾನು ಮತ್ತೇರಿದ್ದು ನಿನಗೆ
ದೇವಾ - ಎಚ್ಚೆತ್ತುಕೋ
ನನ್ನ ಸಂತಸದ ಕದವ ತೆಗೆ !

- ಶ್ರೀ ಹರಿ





www.sriharikhoday.com


23-08-2011

ಕವನಗಳ ಬರೆಯುವುದು ತನ್ನ ಯಶಸ್ಸಿಗೆ ಆಗದೆ
ಲೋಕದ ಬೋಧನೆಯಾಗದೆ ತನ್ನ ಎದೆಯ ಹೊರೆ
ಇಳಿಸಿದ ಪ್ರಜ್ಞೆಯು ಹಾಳೆಯ ಋತುಗಳು !

ಸರಳ ಅಂತರಂಗದ ವಿಚಾರ ಮಾಡುತ
ಮೋಹ ಪ್ರೀತಿ ವಿಚಾರಗಳನ್ನು ಮೆಲುಕುಹಾಕುತ್ತ
ತಾನೊಬ್ಬನೇ ಸಮುದ್ರದಿ ದೋಣಿಯನ್ನು ನಡೆಸುತ್ತ
ತನ್ನ ಆತ್ಮವಿಶ್ವಾಸಗಳು  ಕುಂದದೆ
ಆಹಾ!  ಆ ಮಹಾನ್‌ಶಕ್ತಿಯ ಜೊತೆಗೆ ಬೆರೆತು

ರಸಿಕತೆಯ ಹಿನ್ನಲೆಯಲ್ಲಿ ಅಡಗಿರುವ ರಹಸ್ಯಗಳನ್ನು
ಪ್ರಜ್ಞೆಯ ಕಣ್ಣಿನಿಂದ ವೀಕ್ಷಿಸುತ ತನ್ನ ಭಾವನೆಗಳನ್ನು
ತನ್ನ ಕಾಂತೆಯೊಡನೆ ಹಂಚಿಕೊಳ್ಳುತ್ತ ಕಷ್ಟವಿಲ್ಲದ ದೇವರ
ಬೆರಕೆಯ ವಿಧಾನಗಳನ್ನು ನಕ್ಷತ್ರದಂತೆ ಮಿನುಗಿಸಿದ
ಅಂಜಿಕೆ ಇಲ್ಲದ  ಸಿದ್ದಪುರುಷ ಉಮರ್ ಖಯ್ಯಾಂ

- ಶ್ರೀ ಹರಿ



24-08-2011

ಅಂತರಂಗದ ಸಮುದ್ರದಿಂದ ಒಂದೊಂದು
ಅಲೆಯ ಒಂದೊಂದು ಭಾವನೆ
ಒಂದೊಂದು ನಮ್ಮನ್ನು ಸರಿಪಡಿಸಿಕೊಳ್ಳುವ
ಕವನದ ಕನ್ನಡಿಗಳು

ತನ್ನಲ್ಲಿ ಆಳವಾದ ನಂಬಿಕೆಯಿದೆಯೇ
ತನ್ನಲ್ಲಿ ಅಂದರೆ ತನಗೇ ತಿಳಿಯದ ವಿಷಯಗಳೇ
ತನ್ನಲ್ಲಿ ಅಂದರೆ ತನ್ನ ಧರ್ಮದ ನೀತಿ ನಿಯಮಗಳೇ
ತನ್ನಲ್ಲಿ ಅಂದರೆ ತನ್ನ ಸಂಸಾರದ ಸುಖ ದುಃಖಗಳೇ
ತನ್ನಲ್ಲಿ ಅಂದರೆ ಸುಖ ದುಃಖಗಳ ನೆನಪುಗಳೇ

ತನ್ನಲ್ಲಿ ಅಂದರೆ ಜೊತೆಯಿರುವ ವಸ್ತುಗಳೇ
ತನ್ನಲ್ಲಿ ಅಂದರೆ ಜೊತೆ ಬರದಿರುವ ವಸ್ತಗಳೇ
ತನ್ನಲ್ಲಿ ಅಂದರೆ ಪ್ರಕೃತಿ ಪ್ರಚೋದಿತ ಭೋಗಗಳೇ
ತನ್ನಲ್ಲಿ ಅಂದರೆ ಸತ್ಯದ ಅರಿವಿನ ನಂಬಿಕೆಯೇ
ತನ್ನಲ್ಲಿ ಅಂದರೆ ಸತ್ಯದ ದರ್ಶನ ಪಡೆಯುವ ನಂಬಿಕೆ ಇದೆಯೇ

ತನ್ನಲ್ಲಿ ತಾನೇ ದೇವರಲ್ಲಿ ಬೆರೆಯುವ
ಅಲೆಗಳ ಹುಟ್ಟಿಸಿ ತನ್ನಲ್ಲೇ ಇರುವ
ಸಮುದ್ರದಲ್ಲಿ ನಾವು ಇಲ್ಲದ ನಾವುಗಳು
ಕಾಲ ಇಲ್ಲದ ದೇವರ ಬೆರಕೆ
ಸತ್ಯದ ಕನ್ನಡಿಗಳು ನುಡಿಯುವ ಕವನಗಳು !

- ಶ್ರೀ ಹರಿ



www.sriharikhoday.com

5-08-2011

ಆಸ್ತಿಕರು ನಾಸ್ತಿಕರು ಎಂಬ ವಾದ
ಮೇಲು ಕೀಳುಗಳೆಂಬ ದಿಕ್ಕುಗಳ ತೋರಿಸುತ್ತಿದೆ !

ನಾವು ಕಂಡ ದೇವರು ನಮ್ಮ ಮತದವರು
ನೀವು ಕಂಡ ದೇವರು ನಿಮ್ಮ ಮತದವರು
ದೇವರನ್ನು ಬೆಲೆ ಕಟ್ಟಿ ಮಾರಾಟ ಮಾಡುತಿಹರು
ದೇವರ ಬಾಗಿಲಿಗೆ ಬೀಗದ ಕೈ ಇರುವುದಿಲ್ಲ
ಹಿಂದೆ ಬಾಗಿಲಿಗೂ ಮುಂದೆ ಬಾಗಿಲಿಗೂ ಇರುವುದಿಲ್ಲ!

ಇದು ಬೀದಿಯ ಚಿಕ್ಕ ಮಕ್ಕಳಿಗೆ ತಿಳಿಯಪಡಿಸುವ ನನ್ನ ಪ್ರಯತ್ನ
ದೊಡ್ಡವರು ನನ್ನನ್ನು ಗೇಲಿ ಮಾಡಿ ನಗೆಯಾಡುತ್ತಿರುವ
ಮಾತುಗಳು ನನಗೆ ಮಧುಪಾನ ಕುಡಿಸುತ್ತಿದೆ
ವಿನೋದಪ್ರಿಯನಾದ ಅವನು ಧೈರ್ಯದಿಂದ
ದೇವರನ್ನು ಬಿಡದೆ ಸಲಿಗೆಯಿಂದ ಗೇಲಿಮಾಡುತ್ತ

ತನ್ನ ಭೋಗದಲ್ಲಿ ದೇವರನ್ನು ಬೆರೆಸುತ್ತ
ಯಾರೂ ಕಾಣದ ದೇವರಲ್ಲಿ ತಾನು ಬೆರೆತು
ಬೆರಕೆಯ ಸುಖಪಡುತ್ತ ಕಾಂತೆಯ ಭೋಗದಲ್ಲಿ
ದೇವರನ್ನು ಅನುಭವಿಸಿದ ಅನುಭವಿ ಮಹಾನ್
ಪುರುಷ ಉಮರ್ ಖಯ್ಯಾಂ!

- ಶ್ರೀ ಹರಿ

25-08-2011

ಸಂತೋಷ ಪಡಲು ತಿಳಿಯದವನಿಗೆ
ಉತ್ಸಾಹದ ಸಂತಸ ತಿಳಿಯದು
ಬೇರೆಯವರಿಗೆ ಸಂತೋಷಪಡಿಸಲು
ತಿಳಿದವನಿಗೆ ಕಷ್ಟಗಳು ಬಿಡದು

ಗಿಡ ಮರಗಳಂತೆ ಬೆಳೆದು
ತನ್ನ ಪಾಡಿಗೆ ತಾನು ಬೆಳೆಯುತ್ತ
ತನಗೆ ಬೇಕಾದ್ದನ್ನು ಪ್ರಕೃತಿಯಿಂದ
ಪಡೆದು ನಿತ್ಯ ಹಸಿರಾಗಿ ಸಂತಸದಿ ಗಿಡಗಳು ಬೆಳೆಯುವಂತೆ ನಮ್ಮ
ಬೇಡಿಕೆಗಳನ್ನು ನಾವು ಪ್ರಕೃತಿಗೆ ತಿಳಿಸೋಣ!

ಜಗದಲ್ಲಿ ಸುಖದ ಕೊರತೆಗಳಲ್ಲಿ ಇಲ್ಲದ್ದನ್ನು
ಯೋಚಿಸಿ ಯೋಚಿಸಿ ಕುರುಡಾಗಿರುವ ಮನಸ್ಸಿಗೆ
ಹತ್ತಿರದಲ್ಲಿರುವ ಸಂತಸ ಕಾಣದೆ,
ಕಾರಣಗಳಿಲ್ಲದ ದುಃಖಗಳನ್ನು ಅನುಭವ ಬೇಡಿ
ಪಡೆದು ಸಂತಸವ ನೀಡಿ
ದ್ವೇಷವಿಲ್ಲದೆ ಎಲ್ಲರ ಜೊತೆ ಜೀವಿಸೋಣ!

- ಶ್ರೀ ಹರಿ



www.sriharikhoday.com

27-08-2011

ನಮ್ಮ ಹೃದಯದಲ್ಲಿ ಒಂದೇ ಜೀವ ಇರಕೂಡದು
ಹತ್ತಾರು ಜೀವಿಗಳ ಜೊತೆ ಇರಬೇಕು
ನಮ್ಮ ಭಾವನೆಗಳಲ್ಲಿ ಊಹೆಗಳನ್ನು ಸೇರಿಸದೆ
ಹತ್ತಾರು ಭಾವನೆಗಳ ತಿಳಿ ಹೊರಚೆಲ್ಲಬೇಕು!

ಪ್ರಕೃತಿಯ ಹುಟ್ಟು ಸಾವುಗಳು
ಪ್ರಕೃತಿಯ ಉಸಿರು ನಿಟ್ಟುಸಿರುಗಳು
ಹುಟ್ಟು ಸಾವುಗಳೇ ಪ್ರಕೃತಿಯ ಜೀವ
ಹೊಸ ಗ್ರಹ ನಕ್ಷತ್ರಗಳು ದಿನವೂ ಹುಟ್ಟಿ
ನಾನಾ ಗ್ರಹಗಳು ಸಾವನ್ನು ದಿನವೂ ಅಪ್ಪಿಕೊಂಡಿರೆ
ಈ ಪ್ರಕೃತಿಯಲ್ಲಿ ಮಾನವ ಯಾವ
ದೊಡ್ಡ ಸಮಾಚಾರ !

ಅವನ ಸುಖ ಕಷ್ಟಗಳು ಪ್ರಕೃತಿಯಲ್ಲಿ
ಯಾವ ದೊಡ್ಡ ಲೆಕ್ಕ, ಚಿಕ್ಕದನ್ನು
ದೊಡ್ಡದಾಗಿ ಮಾಡದೆ, ದೊಡ್ಡದನ್ನು ಚಿಕ್ಕದಾಗಿಸಿ
ದೊಡ್ಡದಾದ ವಿಶ್ವಶಕ್ತಿಯಲ್ಲಿ
ಬೆರೆಯುವುದೇ ಹುಟ್ಟು ಸಾವಿನ ನಿಯಮ
ಆ ನಿಯಮವೇ ಪ್ರಕೃತಿಯ ರೀತಿ,ನೀತಿ
ಯಾವುದನ್ನು ಲೆಕ್ಕಿಸದ ಅದರ ಧರ್ಮ

ಇಷ್ಟೆಲ್ಲಾ ತಿಳಿದು ಈ ಸತ್ಯವನ್ನು ಅನುಭವಿಸಿ,
ದ್ರಾಕ್ಷಾರಸದ ಸೇವನೆ ಯಾವ ಲೆಕ್ಕ
ಕ್ಷಣಿಕ ಭೋಗಗಳು ಯಾವ ಲೆಕ್ಕ
ದೇವರಲ್ಲಿ ಬೆರೆಯುವುದಕ್ಕೆ
ಮನುಷ್ಯನಿಗೆ ಸಮಯದ ಅಭಾವ

- ಶ್ರೀ ಹರಿ

29-08-2011

ಅರ್ಥ ಅಪಾರ್ಥಗಳ ಜೋಡಣೆಯಲ್ಲಿ ಮಾನವ
ತನ್ನ ನಿಜ ಬಾಳಿನ ಅರ್ಥಗಳನ್ನು ತಿಳಿಯದೆ
ಕನ್ನಡಿಯ ಹಿಂದೆ ನಿಂತು ಮುಖ ಕಾಣುತ್ತಿಲ್ಲ
ಇದು ಕನ್ನಡಿಯಲ್ಲ ಎಂಬ ನಿರ್ಣಯಗಳು
ನಮ್ಮ ಜೀವನಕ್ಕೆ ಸಾವನ್ನು ತರಿಸುತ್ತಿದೆ !

ಸಂತಸ ತುಂಬಿಕೊಂಡು ಉಲ್ಲಾಸ ಸೇವನೆ ಮಾಡಿ
ಜೀವನ ರೀತಿಗಳಲ್ಲಿ ಹಂಚಿ ಹರಡಿಹೋಗಿರುವ
ಸತ್ಯಗಳನ್ನು ಮಾನವ ಅರಳಿಸಿ ಫಲವ ನೀಡು ಎಂಬ
ವಿಶ್ವದಲ್ಲಿ ಅಡಗಿರುವ ಉದ್ದೇಶಗಳನ್ನು ಮಾನವ
ಅರಿಯದೆ ಪ್ರಯತ್ನಗಳ ಮಾಡದೆ

ತಿಳಿಯದ ರೋಗದಿಂದ ಪೀಡಿತನಾಗಿ
ತನ್ನ ಮನೋರೋಗಕ್ಕೆ ಮದ್ದಿಲ್ಲದೆ ನರಳುತ್ತಿದ್ದಾನೆ
ಜಗತ್ತನ್ನು ಅರ್ಥಮಾಡಿಕೊಳ್ಳುವ ಬದಲು
ಅಪಾರ್ಥಮಾಡಿಕೊಳ್ಳುವ ಜನರು
ಮಾನವ ಜನಾಂಗಕ್ಕೆ ಪ್ರಕೃತಿಗೆ, ಅಡ್ಡಗೋಡೆಗಳು!

- ಶ್ರೀ ಹರಿ





www.sriharikhoday.com


29-08-2011

ಬೆಳಕು ಬೆಳಕಲ್ಲಿ ಬೆರೆಯುವಂತೆ
ಗಾಳಿ ಗಾಳಿಯಲ್ಲಿ ಬೆರೆಯುವಂತೆ
ನೀರು ನೀರಲ್ಲಿ ಬೆರೆಯುವಂತೆ
ಆಕಾಶ ಆಕಾಶದಲ್ಲಿ ಬೆರೆಯುವಂತೆ
ನಾನು ದೇವರಲ್ಲಿ ಬೆರೆತು
ಬೆರಕೆಯಲ್ಲಿ ಕಳೆದುಹೋಗಿರುವೆನು !

ಬೆಳಕಿನ ಕಿರಣವಾಗಿರುವ ನನ್ನ ಆತ್ಮ
ಶರೀರಧಾರಣೆ ಮಾಡಿ ಉಮರನ
ಹೆಸರು ಪಡೆದು ನಾನಾ ದೃಷ್ಟಿಕೋನದಿಂದ
ಜಗತ್ತನ್ನು ನೋಡುತ್ತಿದ್ದೇನೆ
ದೇಹಧಾರಣೆಯಾಗಿರುವ ಈ ದೇಹದಿಂದ
ದೇಹದ ಬಯಕೆಗಳನ್ನು ತೃಪ್ತಿ ಪಡಿಸುತ್ತಿದ್ದೇನೆ !

ಸೃಷ್ಟಿ ನೀಡಿರುವ ಕಾಲದಲ್ಲಿ ಸೃಷ್ಟಿಗೆ ಬೇಕಾದ್ದನ್ನು
ನೀಡಿರುವ ಕಾಲದಲ್ಲಿ
ಮುಪ್ಪನ್ನು ಅಪ್ಪಿಕೊಳ್ಳುವ ಸಿದ್ಧತೆ
ಹಗರಣಗಳನ್ನು ಮರೆಯಲು ದೇವರನ್ನು
ಜೊತೆ ಬೆರೆಯಲು ನಿಶೆ !
ಪ್ರಕೃತಿಯ ಸಂತೈಸಲು ಕಾಂತೆ!

- ಶ್ರೀ ಹರಿ



30-08-2011

ಪ್ರೇಮ ತುಂಬಿರುವ ಪ್ರೀತಿ
ಜೀವನದ ಸುಖದ ಖಜಾನೆ
ದ್ವೇಷ ತುಂಬಿರುವ ಅಸೂಯೆ
ಜೀವನದ ನರಕ ಯಾತನೆ!

ಹುಡುಕಿದರೂ ಸಿಗದ ದೇವರು
ಶ್ರಮದಿಂದ ಮನದಲ್ಲಿ ಬೆರೆಯುವ ದೇವರು
ಅದರ ಸುಖ ವರ್ಣಿಸಲಾಗದೆ, ಪದಗಳ ಅಭಾವ
ಅದು ಕೊನೆಯಿರದ ತುಂಬು ಅನುಭವ

ಕಾಲದ ಮೆಟ್ಟಿಲನ್ನು ಹತ್ತುತ್ತಿರುವ
ನಮ್ಮ ಜೋಡಿಗೆ, ಕೊನೆಯಿರದೇ ಇರುವ
ಮೆಟ್ಟಿಲುಗಳು, ಹತ್ತಲಾರದೆ ಮುಪ್ಪನ್ನು
ಬೇಡಿದ ನಮ್ಮ ಜೋಡಿ

ದೇವರು ತನ್ನ ಜೊತೆಗೆ ಸೇರಿಸಿಕೊಂಡು
ಅವನಿಗೆ ಬೇಕಾದ ಸಮಯಕ್ಕೆ
ಮತ್ತೆ ಈ ಜಗವ ನೋಡಲು ನಾವು ಬರುತ್ತೇವೆ

- ಶ್ರೀ ಹರಿ





www.sriharikhoday.com

02-09-2011


ಮೆಚ್ಚಬೇಕಾಗಿದೆ ಆ ದಿಗಂತದ ದೀಪ
ದಿನವೂ ಉದಯಿಸಿ ಲೋಕದ ಎಲ್ಲವ ಬೆಳಸಿ
ತಾನೇನೆಂದು ತಿಳಿಯದೆ ಹಿರಿಮೆ -ಕಿರಿಮೆ ತಿಳಿಯದ ದೀಪ
ಮೆಚ್ಚಬೇಕಾಗಿದೆ ಆ ದಿಗಂತದ ದೀಪವ

ಕಲ್ಪನೆಯು ಹರಿವ ತನಕ ಕಾಲದಿಂದ ಬೆಳಗುತ್ತಿರುವ ದೀಪ
ನಮ್ಮ ದೇಹ ನರನಾಡಿಗಳ ಬೆಳೆಸುತ್ತಿರುವ ದೀಪ
ಲೆಕ್ಕಗಳಿಲ್ಲದ ಜನನ-ಮರಣಗಳ ವೀಕ್ಷಿಸಿದ ದೀಪ
ತನ್ನ ಮೆಚ್ಚಿನ ಹಸಿರು ಬೆಳೆಸುತ್ತಿರುವ ದೀಪ
ಮೆಚ್ಚಬೇಕಾಗಿದೆ ಆ ದಿಗಂತದ ದೀಪವ

ಕೋಟಿ ಕೋಟಿ ಯೋನಿಗಳಲ್ಲಿ
ತಾಯಿ ರೂಪ ಧರಿಸಿಕೊಂಡ ದೀಪ
ಎಲ್ಲಾ ಚಲನೆಗೆ ಚೇತನವಾಗಿರುವ ದೀಪ
ಉದಯಾಸ್ತಮಗಳ ಗುಟ್ಟು

ಹುಟ್ಟು ಸಾವುಗಳಿಗೆ ಹೋಲಿಸಿದ ದೀಪ
ಸಮಾನ ದೃಷ್ಟಿಕೋನದಿಂದ ನೋಡಿದ ಆ ದೀಪ
ಉಮರನಲ್ಲಿ ಜ್ಞಾನ ದೀಪ ಬೆಳಗಿಸಿದ ಆ ದೀಪ
ಮೆಚ್ಚಬೇಕಾಗಿದೆ ಆ ದಿಗಂತದ ದೀಪವ

- ಶ್ರೀ ಹರಿ



02-09-2011

ರಸ ರೋಮಾಂಚನೆಯ ಗೋಳು ಯಾತನೆಪಟ್ಟ ಉಮರನ ಮನ
ರೂಪುಗಳನ್ನು ದಾಟಿರುವ ದೇವರ ರೂಪದ ಜೊತೆ ಬೆರೆತಿರುವ ಆ ಉಮರ
ನೂರು ಮತಗಳ ಜೊತೆ ಸೇರಿ ಆದರ ರಸವನ್ನು ಹಿಂಡಿದ ಉಮರ

ಅಂತರಂಗದಲ್ಲಿ ಅನಂತವನ್ನು ಅನುಭವಿಸಿದ ರೀತಿ
ಜನಸಾಮಾನ್ಯರಿಗೆ ಹಂಚಲು ಮಾಡಿದ ಯತ್ನ
ಉಮರನಿಗೆ ಅಮರನಾಗಿ ಕಾಲದಿಂದ ಜಾರಿಹೋಗಿದ್ದಾರೆ

ಹುಟ್ಟಿನಿಂದಲೇ ಕೊನೆ ಏನೆಂದು ಅರಿತ ಆತನು
ತನ್ನ ಚೇತನವನ್ನು ಹಗಲು ರಾತ್ರಿಗಳಲ್ಲಿ ಮಿನುಗಿಸಿ
ಅನಂತದ ಜೊತೆ ತಾನು ಅನಂತವಾಗಿ
ಎಲ್ಲರಿಗೂ ತನ್ನಂತೆ ಆಗಿ, ತನ್ನಂತೆ ಆಗಿ ಎಂದು ಸಾರುತ್ತ

ಪ್ರಕೃತಿಯ ಕೊಡುಗೆಯಲ್ಲಿ ಅಡಗಿರುವ ದೇವರ ಬೆರಕೆ ಅನುಭವಿಸಿ
ಸಮಾಜ ಕಟ್ಟಿರುವ ಕೋಟೆಗಳ ಬಾಗಿಲನ್ನು ಕಾಲಕ್ಕೆ ತೆರೆದು
ಚಿಲಕಗಳನ್ನು ಕದ್ದುಕೊಂಡು ಹೋಗಿರುವನು

- ಶ್ರೀ ಹರಿ






ಪ್ರೀತಿ ಪ್ರೇಮಗಳ ಬೆಳೆಸಿದ ಗೆಳೆತನ
ಕಾಲ ಮರೆಯಲಾಗದ ಗೆಳೆತನ
ಈ ಗೆಳೆತನ ನಡೆಸಿದ ನಮ್ಮ ಜೀವನ
ಸೂರ್ಯ ಚಂದ್ರರು ಎಂದಿಗೂ ಮರೆಯಲಾರರು

ಕಷ್ಟ ಸುಖಗಳಲ್ಲಿ ಜೊತೆ ಜಾರಿಸಿದ ಕಾಲ
ನಿನ್ನ ಅಗಲಿಕೆ ಕಾಲ ನನ್ನ ಜೊತೆ ಕಣ್ಣೀರು
ಸುರಿಸುತ್ತ ಮುಗಿಸಿದ ಜೀವನ ಗ್ರಂಥವನ್ನು
ಮುಂಬರುವ ಕಾಲದಲ್ಲಿ ಜೊತೆ ಓದೋಣ

ನೀ ಮಾಡಿರುವ ಜೀವನ ಸಾಧನೆಗಳು
ನೀ ನನಗೆ ನೀಡಿರುವ ಜೀವನದ
ಆದರ್ಶಗಳನ್ನು ಈ ಭೂಮಿಯಲ್ಲಿ
ತರ್ಜುಮೆ ಮಾಡುವೆನೆಂಬ

ಫಲ ತುಂಬಿತ ಭರವಸೆ ನೀಡುತ್ತ
ಕಳೆದುಹೋಗಿರುವ ನಿನ್ನ ರೂಪವನ್ನು
ಮನದಲ್ಲಿ ಅಚ್ಚಾಗಿಸಿ ಜೊತೆ ಜೀವಿಸಿ
ಸಾಧನೆ ದೆಸೆಯಲ್ಲಿ ನಡೆಯುತ್ತಿರುವೆ

- ಶ್ರೀ ಹರಿ





www.sriharikhoday.com

06-09-11

ಜನರ ಕಣ್ಣಿಗೆ ಬೀಳದೆಯೆ
ಜಗದ ಸೊಗಸ ನೋಡು
ಅಂತರ್ಮುಖಿಯಾಗಿ ಅಂತರಾಳದ
ಒಳಗಿರುವ ಸೊಬಗನ್ನು ನೋಡು !

ಒಳ್ಳೆಯ ಗುಣಗಳ ಮೇಲೆ ತೇಲಿಸು
ಜನರ ಕಷ್ಟಗಳಿಗೆ ಸ್ಪಂದಿಸಿ
ಬೇಕಾದ ಗುಣಗಳನ್ನು ಅರಿತುಕೊಂಡು
ಸತ್ಯಶಕ್ತಿಯ ಗುಣಗಳನ್ನು ಬೆಳೆಸಿಕೊ !

ಸಮಾಜ ಬೇಡದ್ದನ್ನು ಮಾಡದೆ
ಮುಖ ಪ್ರಕೃತಿಯ ಮಾತುಗಳ ಆಲಿಸಿ
ಸದಾ ಸಂತೋಷಚಿತ್ತನಾಗಿ ಹತ್ತಿರವಿರುವುದರಲ್ಲಿ
ದೇವರನ್ನು ಕಂಡು ಅದರಲ್ಲಿ ಬೆರೆತುಬಿಡು !

- ಶ್ರೀ ಹರಿ



07-09-11

ಸಾಹಿತ್ಯ ಕಾಲದ ಕೊಡುಗೆ
ಬೇಕಾದ ಕಾಲದಲಿ ಬೇರೆ ಬೇರೆ ಅರ್ಥಗಳನ್ನು ಬರೆಸುತ್ತದೆ
ಕವಿಯ ಮನಸ್ಸಿನಲ್ಲಿ ಬಣ್ಣಗಳನ್ನು ತುಂಬಿ ತನ್ನ
ಮೂಕ ಕುಂಚದಿಂದ ಕಾಲವು ಚಿತ್ರಿಸುತ್ತಾ ಇದೆ !

ಕೊನೆಯಿರದ ಕಾಲಕ್ಕೆ ಆಳದ ಅರ್ಥಗಳ ಸಾಹಿತ್ಯ ಬರೆಸಿ
ಸಾಹಿತ್ಯ ಬೇಕಾದ್ದನ್ನು ಚಿಗುರಿಸಿ ಉಣಲು ಹಣ್ಣಾಗಿ
ಮಾಗಿಸಿ ಜಗತ್ತಿಗೇ ನೀಡುತ್ತಿದೆ !

ಕನಸುಗಳನ್ನು ಜಗದ ಕಣ್ಣುಗಳಿಗೆ ತೋರಿಸಿ
ಆಸೆಗಳ ಮನೋತರಂಗಗಳನ್ನು ಹುಟ್ಟಿಸಿ
ಎಲ್ಲರ ಬಣ್ಣ ಬಣ್ಣದ ಬೇಡಿಕೆಗಳ ತಣಿಸಲು

ಎಲ್ಲರ ಮನದಲ್ಲಿ ಕಾಲವು ಕುಳಿತು
ಬೇಕಾದ ಕೊಡುಗೆಗಳನ್ನು ಬೇಡದೆ
ಧಾರೆ ಎರೆದುಕೊಡುತ್ತಿದೆ !

- ಶ್ರೀ ಹರಿ



www.srisharikhoday.com

08-09-11

ದೊರೆತನದ ಅಪೇಕ್ಷೆ ಪಡುವವರು ಅನೇಕರು
ದೊರೆತನ-ಸಿರಿತನ ಅರ್ಥ ತಿಳಿಯರು ಎಲ್ಲರೂ
ದೊರೆತನ ಒಂದು ಜವಾಬ್ದಾರಿಯ ಪೀಠ
ದೊರೆತನ ವ್ಯಾಪಾರ ಮಳಿಗೆ ಮಾಡಿರುವವರು
ದೊಡ್ಡತನ ಅರಿಯದ ದೊಡ್ಡವರು !

ದೊಡ್ಡವರೆಲ್ಲ ಸೇರಿ ಪ್ರಜೆಗಳಿಗೆ ದಡ್ಡರಾಗಿಸಿ
ತಾವು ಹೇಳುವಂತೆ ಕುಣಿಸುತ್ತಿರುವರು
ದೆಸೆಗಳು ತಿಳಿಯದೆ ,ನಡೆಯಲು ಪ್ರಾಮಾಣಿಕ
ರಸ್ತೆಗಳಿಲ್ಲದೆ ಜನಗಳ ಗೊಂದಲ ನೋಡಿ
ರಸ್ತೆಗಳು ದಿಕ್ಕು -ದೆಸೆ ತಿಳಿಯದೆ ಓಡುತ್ತಿರುವುದು

ಸತ್ಯದ ಜೊತೆಗೆ ಇರುವುದೇ ದೊಡ್ಡತನ
ಸತ್ಯದ ಅರ್ಥಗಳ ತಿಳಿಯುವುದೇ ಮಾನವ
ಜನ್ಮದ ಹಿರಿತನ, ಮುದುಡಿಹೋಗಿರುವ
ದೊಡ್ಡವರ ಹಿತನುಡಿಗಳ ಮತ್ತೆ ನೆನಪಿಸಿ
ಸಾಗಬೇಕಾಗಿದೆ ಜನಜೀವನ !

- ಶ್ರೀ ಹರಿ






12-09-2011

ಗುರಿಯಿಲ್ಲದೆ ಬಿಟ್ಟ ಬಾಣದಂತೆ
ಹರಿದಂತೆ ಓಡುತ್ತಿದೆ ಮನಸ್ಸು
ಹಿಡಿದು ಗುರಿ ತೋರಿಸಲಾಗದೆ
ಗುರಿಯೇನೆಂದು ತಿಳಿಯದೆ ಹುಡುಕುತ್ತಿದೆ ಮನಸ್ಸು

ಮನಸ್ಸೆಂಬ ಬಿಲ್ಲು ಹೊಂದಿರುವ ನಾವು
ನಿರಾಳ ಭಾವನೆಯ ಇಚ್ಚೆಗಳ ತಿಳಿಯದೆ
ಬೇಕು ಬೇಡಗಳ ನಿರ್ಣಯಗಳ ಮೇಲೆ
ಗುರಿಯತ್ತ ಓಡಿಸಬೇಕು ಬಾಣಗಳ ಓಟವ

ಅವಶ್ಯಕತೆ ತೇಲಿಸಿದ ಗುರಿಸಾಧನೆ
ಭಯ ಸಂಕೋಚಗಳಿಲ್ಲದ ಸಂಕಲ್ಪ
ಸತ್ಯದ ಸಮುದ್ರದಲ್ಲಿ ನೆನೆದಿರುವ ಶುದ್ಧ ಸಂಕಲ್ಪ
ಆ ಶುದ್ಧವಾದ ಶಕ್ತಿಯಿಂದಲೇ ಸಂಕಲ್ಪ ಸಾಧನೆ

- ಶ್ರೀ ಹರಿ





www.sriharikhoday.com

12-09-2011

ಜೊತೆ ಜೊತೆಗಿರುವ ನನ್ನದಾಗಿರುವ ಪ್ರಾಣವೇ
ನನ್ನ ಜಗದ ಸಾಧನೆಗಳಿಗೆ ನೆರವು ನೀಡಲಿ
ನಿನ್ನಿಂದಿರುವ ಈ ಶರೀರದಿಂದ ಜಗಕ್ಕೆ
ಹೊಸದನ್ನು ತೋರುವಂತೆ ಮಾಡು !

ಜಗತ್ತಿನಲ್ಲಿ ಒಂದನ್ನೊಂದು ಒಪ್ಪಿ ಬದುಕುತ್ತಿರುವಂತೆ
ಬಣ್ಣಗಳ ಒಪ್ಪಿಗೆಯ ಮೇಲೆ ಕಾಮನಬಿಲ್ಲಾಗಿರುವಂತೆ
ಸೂರ್ಯ ಚಂದ್ರರ ಒಪ್ಪಿಗೆಯಿಂದ ದಿಗಂತಗಳು
ಬೆಳೆಯುತ್ತಿರುವಂತೆ
ಹೇ ಪ್ರಾಣವೇ ನೀ ಒಲಿದು ನನ್ನಲ್ಲಿ ಶಕ್ತಿಯ ತುಂಬು

ಗುಲಾಬಿಯ ಒಪ್ಪಿಗೆಯಿಂದ ಸ್ವಾದ ಹೊರಹೊಮ್ಮುವಂತೆ
ಉಸಿರು - ನಿಟ್ಟುಸಿರು ನಿನ್ನಿಂದ ಚಲಿಸಿ
ಸುಖಗಳಿಗೆ ಬರಗಾಲ ಬಂದಿರುವ ಈ ಜಗತ್ತಿಗೆ
ಸಮೃದ್ಧಿಯಿಂದ ಆಕಾಶದಿಂದ ಎಲ್ಲರಿಗೂ ಸುಖ ಸಿಗುವಂತೆ ಮಾಡು
ಓ ಪ್ರಾಣವೇ ವಿಶ್ವದ ಶಕ್ತಿಯೇ

- ಶ್ರೀ ಹರಿ





14-09-2011

ಮನುಷ್ಯನ ಭಾವನೆಗಳು ಅನೇಕವಾದರೆ
ಪ್ರೀತಿಯಲ್ಲಿ ಒಂದೇ ಒಂದು ಭಾವನೆ
ಅದು ಬೆರೆಯುವ ಭಾವನೆ
ಬೆರೆತು ಒಂದಾಗಿ ಹೋಗುವ ಭಾವನೆ !


ಪ್ರೀತಿಯು ಪ್ರಿಯತಮೆಯ ಜೊತೆ
ಜೊತೆ ಭಾವನೆಯಿಂದ ದೇವರಲ್ಲಿ
ಬೆರೆಯುವ ಶಕ್ತಿಗೆ ಪ್ರೀತಿ ಒಂದೇ ಸಲಕರಣೆ !

ಹಣ್ಣಾಗಿ ಮಾಗಿರುವ ಉಮರನು ದೇವರಲ್ಲಿ
ಬೆರೆತು ಲೋಕದ ಜಂಜಾಟಕ್ಕೆ ಇಳಿದಾಗಲೆಲ್ಲಾ
ಪ್ರಿಯತಮೆಯ ಪ್ರೀತಿಯ ಜೊತೆ ನಿಶೆ ಸೇವಿಸಿ

ಪ್ರೀತಿಯೆಂಬ ತನ್ನ ಎರಡು ದಡಗಳಿಗೆ ತಾನು
ಸೇತುವೆಯಾಗಿ ಸಂತಸದಿಂದ ಕೊರತೆಯಿಲ್ಲದ
ಜೀವನದ ರಹಸ್ಯದ ಹೆದ್ದಾರಿಯಲ್ಲಿ ನಡೆದು

ಪ್ರೀತಿಯಿಂದ ಪ್ರಿಯತಮೆಯ ಜೊತೆ ಬೆರೆಯುವ
ರೀತಿಯಲ್ಲಿ, ದೇವರಲ್ಲಿ ಬೆರೆಯುವ ರೀತಿಯ
ತಾನು ತಿಳಿದು ಅನುಭವಿಸಿ ಆ ಮಹಾನ್ ಅನುಭವವನ್ನು
ಜಗತ್ತಿಗೆ ಉಡುಗೊರೆಯಾಗಿ ನೀಡಿದ್ದಾನೆ

- ಶ್ರೀ ಹರಿ





www.sriharikhoday.com

15-09-2011

ಜೀವನ ಜೀವನದ ತತ್ವಗಳನ್ನು
ತತ್ವದ ವಿಮರ್ಶೆಗಳು ಮಾಡುತ್ತ
ಭಗವತ್ ವಿಚಾರಗಳನ್ನು ಅರಳಿಸಲು

ಭೋಗ ಪ್ರಶಂಸೆಗಳು ಅಡ್ಡವಾಗಿ
ಅಡ್ಡವಾಗಿರುವುದರಲ್ಲಿ ಆಳದ ವಿಮರ್ಶೆ
ಮಾಡುತ್ತ ಉಮರನು ದೇವರ
ಅನುಭವವನ್ನು ಪಡೆದನು !

ದಿಕ್ಕುಗಳ ತಿಳಿಯದೆ ಓಡುತ್ತಿರುವ ಈ ಮನಸ್ಸು
ಹದದ ಸುಳಿಗೆ ಸಿಲುಕಿಸಿದರೆ ತಾನಾಗಿ ಸತ್ಯದ
ವಿಮರ್ಶೆಗಳ ಅರಿವು ಪ್ರಕಟವಾಗಿ
ಪ್ರಕೃತಿಯ ಎಲ್ಲಾ ಕ್ರಿಯೆಗಳು ದೈವ ಸಂಕಲ್ಪವೆಂದು

ದಿನಚರಿಯ ಜೀವನದಲ್ಲಿ ಜೀವಿಸುತ್ತ
ಹಂತ ಹಂತದಲ್ಲಿ ದೇವರನ್ನು ಅನುಭವಿಸಿ
ಜೀವನ ಸಾರ್ಥಗೊಳಿಸುವುದೇ ನಮ್ಮ ಹುಟ್ಟಿನ ಅರ್ಥ
ಹುಟ್ಟಿದಾದ ಮೇಲೆ ನಮ್ಮ ಜೀವನವೆಲ್ಲ ಬದುಕಿನ ಸೊಬಗು!

- ಶ್ರೀ ಹರಿ





www.sriharikhoday.com

16-09-2011


ರೂಪುರೇಖೆಗಳನ್ನು ಮೀರಿರುವ
ಎತ್ತರ ತಗ್ಗು ಅಂತಸ್ತುಗಳ ಮೀರಿರುವ
ಬಣ್ಣ ರೂಪುರೇಖೆಗಳ ಮೀರಿರುವ
ಸಮಾಜದ ದೃಷ್ಟಿ ಕೋನಗಳನ್ನು ಮೀರಿರುವ
ಕಾಲ ಸಮಯಗಳು ಇರುವಿಕೆಯ ಮೀರಿಪ

ಸಿಡಿಲಿನಂತೆ ಹೊರಬಂದು ಪ್ರಜ್ವಲಿಸಿ
ಹಗಲು ರಾತ್ರಿ ಇರುವಿಕೆಯ
ಸಂಬಂಧಗಳು ತಿಳಿಯದ, ಹತ್ತಿರ ದೂರದ
ಕಷ್ಟ ನಷ್ಟಗಳು ತಿಳಿಯದ
ಯಾವ ಬೇಡಿಕೆ ಇಲ್ಲದ ಪ್ರೀತಿಯ ಸಂಬಂಧ

ನಮ್ಮ ಜೊತೆ ಬೆಸುಗೆಯತ್ತ ಹರಿದು
ನಾನು ನೀನು ಬೇಕು ಬೇಡಗಳ ಅರಿವಿಲ್ಲದೆ
ನಿರಾಳ ಕತ್ತಲಿನ ಬೆಳಕಲ್ಲಿ
ಪ್ರೀತಿ ಶರೀರ ಭಾವನೆಗಳನ್ನು ಮರೆಸಿ
ಬೆರೆತಿರುವ ರೋಮಾಂಚನ ಭಾವನೆಗಳು

ಕಣ್ತೆರೆದು ರೂಪ ನೋಡಿ ಬೆರೆತರೆ
ಅದು ನನ್ನ ನಿನ್ನ ಜೊತೆ
ಕಣ್ಮುಚ್ಚಿ ರೂಪು ರೇಖೆಗಳಿಲ್ಲದೆ ಬೆರೆತಂದಾದರೆ
ಅದು ದೇವರ ಜೊತೆ!

- ಶ್ರೀ ಹರಿ.



17-09-2011

ನನ್ನ ಕಣ್ಣಲ್ಲಿ ತೂಗಿ ಆಡುತ್ತಿರುವ ನಿನ್ನ ರೂಪ
ನನ್ನ ಹೃದಯದಲ್ಲಿ ಆವರಿಗಿರುವ ನಿನ್ನ ಪ್ರೀತಿ
ನನ್ನದು ಮರೆಸುವ ನಿನ್ನ ಶರೀರ ಸ್ಪರ್ಶ
ನಾ ಲವಲೇಶವಿಲ್ಲದೆ ನಿನ್ನ ಬೆರೆತುಹೋಗಿರುವೆ!

ಹಗಲು ಇರುಳಲ್ಲಿ ನೀ ನನ್ನ ಜೊತೆ ಇರುವಂತೆ
ಉಸಿರು - ನಿಟ್ಟುಸಿರು ನಿನ್ನದಾಗಿರುವಾಗ
ಪೂರ್ಣತೆಯಲ್ಲಿ ಜೊತೆ ಮರೆತಿರಲು
ಇದೇ ರೀತಿ ದೇವರಲ್ಲಿ ನಾ ಬೆರೆತಿಹ ಅನುಭವ

ಈ ನಮ್ಮ ಅನುಭವ ಜಗತ್ತಿಗೆ ತಿಳಿಸುವುದು ಕಷ್ಟ
ನಮಗೆ ಬೇಕಿರುವ ಅನುಭವದ ಸುಖ
ಬೇರೆಯವರಿಗೆ ಹೇಳುವ ಪ್ರಯತ್ನ
ವಿಫಲವಾಗಿರುವುದು ನಿನಗೆ ತಿಳಿದಿದೆ

ನಮ್ಮ ಅನುಭವದ ಜೊತೆಗೆ ಮತ್ತೆ ಮತ್ತೆ ದೇವರ ಬೆರೆಸೋಣ
ಕೊನೆ ಬರದ ಆಕಾಶದಂತಿರುವ ನಮ್ಮ ಅನುಭವ
ಜನ್ಮ ಜನ್ಮದಲ್ಲಿ ಪಡೆಯುವ ಭಾಗ್ಯ ಸಿಗಲಿ ಎಂದು
ಜೊತೆ ಬೆರೆಯುತ ದೇವರಲ್ಲಿ ಬೇಡೋಣ!

- ಶ್ರೀ ಹರಿ.






19-09-2011

ಭೋಗಗಳನ್ನು ಮಾನವ ರಹಸ್ಯವಾಗಿ ಮನದ ಆಳದಲ್ಲಿ
ಅಂಟಿಸಿಕೊಂಡಿರುವಾಗ ವೈರಾಗ್ಯದ ಮಾತುಗಳ ಬರಿ
ಉಚ್ಚಾರಣೆಯ ಪದಗಳು ತಮ್ಮಲ್ಲೇ ನಂಬಿಕೆಯಿಲ್ಲದ
ಮನೋಪದಗಳ ಜೋಡಣೆ !

ಬ್ರಹ್ಮಾಂಡದಲ್ಲಿ ಕ್ಷಣ ಕ್ಷಣದಲ್ಲಿಯೂ ಗ್ರಹ ನಕ್ಷತ್ರ
ತಮ್ಮ ದೃಷ್ಟಿಕೋನಗಳನ್ನು ಬದಲಿಸುತ್ತಿರುವಾಗ
ಚಂಚಲಮನಸ್ಸಿನ ಕ್ರಿಯೆ ಒಂದೆಡೆ ಇರಲು ಸಾಧ್ಯವಾಗದೆ
ಮಾತು ಮಾತಿನ ಉತ್ತರಗಳು ಗ್ರಂಥಗಳಾಗಿ ಬೆಳೆದಿವೆ !

ಕವಿಯಾದ ಉಮರನು ತನ್ನ ನಿಜ ಮನಸ್ಸನ್ನು
ಓದುಗರಿಗೆ ತನ್ನ ಮನದಲ್ಲಿ ಹರಿದು ಹೋದ ಸತ್ಯವನ್ನು
ಅಂಜಿಕೆಯಿಲ್ಲದೆ ವ್ಯಕ್ತ ಪಡಿಸುವುದರಲ್ಲಿ ಹಿಂಜರಿಯದೆ
ತನ್ನ ಇರುವಿಕೆಯ ಅಮಲಲ್ಲಿ ತನ್ನದೇ ಆದ
ದಷ್ಟಿಕೋನಗಳನ್ನು ಬದಲಾಯಿಸುತ್ತ
ಕಾಣುವ ಎದುರಲ್ಲಿ ಬೆರತ ಅನುಭವಗಳನ್ನು
ಮನೋವಂಚನೆಯಿಲ್ಲದೆ ಪ್ರತಿಬಿಂಬಿಸಿದ್ದಾನೆ!

- ಶ್ರೀ ಹರಿ





www.sriharikhoday.com

20-09-2011

ಸಂಬಂಧಗಳು ನಾವು ಹುಡುಕಿ ಮಾಡಿರುವುದೋ
ಸಂಬಂಧಗಳು ದೇವರು ಮಾಡಿರುವುದೋ
ಸಂಬಂಧಗಳು ಏಕೆ ಬೇಕು ?
ಸಂಬಂಧಗಳು ನಮ್ಮ ಜೀವನದ ಶಿಲ್ಪಿ?

ಸಂಬಂಧಗಳು ಬರಿ ಜೊತೆಯಿರುವುದಿಲ್ಲ
ಸಂಬಂಧಗಳು ಜೊತೆ ಬೆರೆತು ಬೆರೆಯುವ ಕಲೆ ಕಲಿಸುತ್ತಿದೆ
ಸಂಬಂಧಗಳು ಇಲ್ಲದ್ದಲ್ಲಿ ವಿಶ್ವವೇ ಇಲ್ಲವಾಗುವುದು

ಸಂಬಂಧಗಳು ಕುಡಿಯುವುದ ಕಲಿಸಿದರೆ
ಸಂಬಂಧಗಳು ಪ್ರಿಯತಮೆಯನ್ನು ದೊರಕಿಸಿದರೆ
ಪ್ರಿಯತಮೆ ಬೆರೆಯುವುದನ್ನು ಕಲಿಸಿದರೆ

ಆ ಕಲೆತ ಬೆರೆಯುವ ಕಲೆ ದೇವರಲ್ಲಿ ಬೆರೆಸಿದರೆ
ವಿಶ್ವದ ಸಂಬಂಧದಲ್ಲಿ ಬೆರೆತು
ಕಾಲಾತೀತ ಸಂಬಂಧ ಹೆಚ್ಚಾಗುತ್ತ

ಜೀವನದಲ್ಲಿ ಎಲ್ಲವನ್ನು ಮೆಚ್ಚುತ್ತಾ ಇರುವುದುದೇ
ದೇವರನ್ನು ಶ್ಲಾಘಿಸಿ ಪೂಜಿಸುವಂತೆ !

- ಶ್ರೀ ಹರಿ



28-09-2011

ಸಾಧ್ಯ ಅಸಾಧ್ಯ ಮನಸ್ಸಿನ ದ್ವಂದ್ವಗಳು
ಅಸಾಧ್ಯ ಮನಸ್ಸಿನ ಕೆಟ್ಟ ಸ್ವಪ್ನಗಳಾದರೆ
ಸಾಧ್ಯತೆಗಳು ಮಾನವನಿಗೆ
ದೇವರು ಕೊಟ್ಟಿರುವ ಕೊಡುಗೆಗಳು !

ಅಸಾಧ್ಯ ಪ್ರಕೃತಿಗೆ ತಿಳಿಯದೆ ಇರುವಾಗ
ನಾವೇಕೆ ಮನಸ್ಸಿನಲ್ಲಿ ಸೃಷ್ಟಿಸಬೇಕು ?
ಅಸಾಧ್ಯವೆನ್ನುತ ಮಾಯೆಯ ಸುಳಿಗೆ
ಸಿಲುಕಿದೆ ಈ ಮನಸ್ಸು ಸಾಧ್ಯತೆಗಳು
ಅಸಾಧ್ಯದ ಒಂದು ಮನೋ ವೇದಿಕೆ
ಮಾನವನಿಗೆ ಸೋಲನ್ನು ನೀಡುತ್ತಿದೆ !

ತನ್ನನ್ನು ತಾನೇ ಮರೆತು ಗುರಿಯ ಜೊತೆ ಬೆರೆತರೆ
ಸಾಧ್ಯತೆಯ ಬೆಳಕು ಹೆಚ್ಚಾಗಿ, ಎಚ್ಚರದ ಮನಸ್ಸಿನಲ್ಲಿ
ಅಸಾಧ್ಯತೆಯ ಕನಸುಗಳು ಬರದೆ
ಸಾಧ್ಯತೆಯ ಗೆಲುವು ಹೆಚ್ಚುತ್ತಾ
ಹೆದರಿಕೆಗಳಿಲ್ಲದೆ ಸಾಧ್ಯವಾಗದ ದೇವರ ಜೊತೆ
ನಾ ಹೆದರಿಕೆಯಿಲ್ಲದೆ ದೇವರನ್ನು ಪಡೆದಿದ್ದೇನೆ !

- ಶ್ರೀ ಹರಿ



www.sriharikhoday.com

29-09-2011

ಸದ್ದಿಲ್ಲದೆ ಬೆಳೆಯುತ್ತಿದೆ ಹಸಿರು
ಸದ್ದಿಲ್ಲದೆ ಬೆಳೆಯುತ್ತಿದೆ ಗಿಡ ಮರಗಳು
ಸದ್ದಿಲ್ಲದೆ ಚಿಗುರುತ್ತಿದೆ ಕೋಟಿ
ಕೋಟಿ ಜೋಳದ ಬೀಜಗಳು
ಸದ್ದಿಲ್ಲದೆ ಎತ್ತರವಾಗಿ ಬೆಳೆದು ನಿಂತಿದೆ
ತುಂಬಿದ ಬೆಳೆಯಿಂದ ತೆಂಗು, ಬಾಳೆ, ಮರ, ಗಿಡಗಳು!

ಮಾನವನೊಬ್ಬನೆ ಸದ್ದು ಮಾಡುತ್ತ
ಮಾನವನೊಬ್ಬನೆ ಕೆಲಸ ಮಾಡುವ
ಮುನ್ನ ಬೊಬ್ಬೆ ಹಾಕುತ್ತ
ಮಾನವನೊಬ್ಬನೆ ಕೆಲಸ ಮಾಡದೆ
ಮಾಡಿದೆನೆಂದು ನುಡಿಯುತ್ತಾ
ಮಾನವನೊಬ್ಬನೇ ಈ ಜಗದ ಸೃಷ್ಟಿಯಲ್ಲಿ
ಸದಾ ಕೂಗುತ್ತಲೇ ನಾನಾ ಭಾಷೆಗಳಲ್ಲಿ
ಅರಚಿ ಕೂಗಾಡುತ್ತಿರುವರು

ಸೂರ್ಯ ಚಂದ್ರರಿಗೆ ತಿಳಿದು ಬೇಸತ್ತು
ಎಲ್ಲರೂ ಮಲಗಿರುವ ಸಮಯದಲ್ಲಿ
ಚಂದಿರನು ಬಂದು, ಸದ್ದು ಕೇಳಿ ಬೇಸತ್ತು
ಸೂರ್ಯನು ಸಮಾಧಾನವನ್ನು ಪಡೆಯಲು
ದಿಗಂತದಲ್ಲಿ ಅಸ್ತಂಗತನಾಗುತ್ತಿರುವುದ ಕಂಡು
ಈ ಹುಚ್ಚು ಮಾನವ ಎಂದು ಸಮಾಧಾನ
ಪಡೆದುಕೊಳ್ಳುವನೋ, ಎಂದು ಬೊಬ್ಬೆ ಹೊಡೆಯುವುದ
ನಿಲ್ಲಿಸುವನೋ ? ಇದು ಒಂದು ವಿಶ್ವದ ಪ್ರಶ್ನೆ !

- ಶ್ರೀ ಹರಿ





www.sriharikhoday.com


30-09-2011

ಹಬ್ಬದ ಸಡಗರದಲ್ಲಿ
ಮುಖದ ಮೇಲೆ ಮುಗುಳ್ನಗೆ
ಚಿಗುರಿಸಿಕೊಂಡು ಹಳತನ್ನು ಮರೆತು
ಹೊಸತಾದ ಸುಖವ ಸುಖವಾಗಿ ತುಂಬಿಕೊ !

ಕಾಡುತ್ತಿರುವ ಕಷ್ಟಗಳ ಮೇಲೆ
ಬುದ್ಧಿ ಎಂಬ ಕತ್ತಿಯಿಂದ
ಕಷ್ಟ-ತೊಂದರೆಗಳ ಸದೆ ಬಡಿದು
ಅಂಬೆಗಾಲಿಗೆ ಭಕುತಿಯಿಂದ ಎರಗಿ
ಎಲ್ಲರ ಜೊತೆ ಪ್ರೀತಿಯಿಂದ ಬೆರೆತು
ಸಂತಸದ ಜೇನಹೊಳೆಯನ್ನು ಹರಿಸುತ
ನಾನು ನನ್ನದೆಂಬುದನ್ನು
ಮನದಲ್ಲಿ ಮರೆಮಾಚಿಕೊ!

ಕೊನೆಯಿರದ ವರಗಳ ದೇವರಲ್ಲಿ ಬೇಡಿಕೊ
ಬೇಡದ್ದು ಮನದಲ್ಲಿ ಬೆರಸದೆ ಕೋಟೆಯ ಕಟ್ಟಿಕೊ
ತನ್ನ ಮನದ ಕೋಟೆಯಲ್ಲಿ ಒಳ್ಳೆಯದನ್ನು ಬೆರಸಿ
ಹಣತೆಯಲ್ಲಿ ಒಳ್ಳೆ ಎಣ್ಣೆ ಉರಿದು ಬೆಳಕ ಕೊಡುವಂತೆ
ಯೋಗ್ಯ ಮನಸ್ಸಿನಿಂದ ಸಂತಸದ ದೀಪ ಬೆಳಗಿಸಿ
ಅಂಬೆಯನ್ನು ಪೂಜಿಸುತ್ತ ಹಬ್ಬದ ಸಡಗರದಲ್ಲಿ
ಸಂತಸದ ಸಂತೆಯಲ್ಲಿ ಕಳೆದುಹೋಗಿ
ಮತ್ತೆ ಮತ್ತೆ ದೇವರಲ್ಲಿ ವರಗಳ ಬೇಡಿಕೋ

- ಶ್ರೀ ಹರಿ



01-10-2011

ತಾಯಿಯ ಮನೆಯಲ್ಲಿ ಆಡಿ ಬೆಳೆದು
ನನ್ನ ಮನೆಯನ್ನು ನನ್ನನ್ನು ಬೆಳೆಸಲು
ತ್ಯಾಗ ಮಾಡಿ ಬಂದ ಮಹಾಲಕ್ಷ್ಮಿಯೇ
ನಿನ್ನ ತ್ಯಾಗದ ಮನೋವೇದಿಕೆಗೆ
ನನ್ನ ಮನದಾಳದಿ ನಮೋ ನಮಃ

ಖಾಲಿಯಾಗಿದ್ದ ನನ್ನ ಮನಸ್ಸಿನಲ್ಲಿ
ತುಂಬುತನದಿ ನನ್ನ ಜೊತೆ ಬೆರೆತು
ನಾನು ನೀನು ಜೊತೆ ಆಡಲು
ಮಕ್ಕಳ ಹಡೆದು ನೀನು ಬೆಳೆಸಿ
ಸಹನೆಯ ಪಾಠ ಕಲಿಸಿದ ನನ್ನ
ಪ್ರಿಯತಮೆಗೆ ಪ್ರೀತಿಯ ನಮೋ ನಮಃ

ನನ್ನ ಮನೆಯ ಹಿರಿಯರಿಗೆ
ನಿನ್ನ ಮನೆಯ ದೊಡ್ಡವರಿಗಿಂತ ಹೆಚ್ಚಾಗಿ
ನಾ ನಿಮ್ಮವಳು ಈ ಮನ ನಿಮ್ಮದು
ಬೆಳೆಸಿ ಹೆಸರು ಗಳಿಸಬೇಕೆಂಬ ನಿನ್ನ
ಹೊಸ ಹೊಸ ಮನೋಬಣ್ಣಗಳಿಗೆ
ರಾಜಗಾಂಭೀರ್ಯತೆಯಿಂದ ಶೋಭಿಸುತ

ನನ್ನ ಅರ್ಧಾಂಗಿಯಾಗಿರುವ ರಾಜಲಕ್ಷ್ಮಿಗೆ
ನನಗಿಂತ ಕಿರಿಯವಳಾಗಿದ್ದರೂ ಸಹ
ನನ್ನ ಒಲುಮೆಯ ನಲ್ಮೆಗೆ ನಮೋ ನಮಃ

- ಶ್ರೀ ಹರಿ



03-10-2011

ದೇವ, ನೀನು ಇರುವುದು ಜನಗಳಿಗೆ ತಿಳಿಯದು
ಸ್ವಾದ ಇರುವುದು ಪುಷ್ಪಗಳಿಗೆ ತಿಳಯದಂತೆ
ಹೂವುಗಳಿಗೆ ತನಗೆ ಬಣ್ಣವಿರುವುದೆಂದರೆ
ಪುಷ್ಪಗಳಿಗೆ ನನ್ನ ಮಾತಲ್ಲಿ ನಂಬಿಕೆ ಇಲ್ಲದಂತೆ

ಎಲ್ಲರ ಜೊತೆ ಇರುವ ನಿನ್ನ ಜೊತೆ ಬೆರೆತಿದ್ದೇನೆಂದರೆ
ಅರ್ಥ ಅರಿಯದ ಜನಗಳಿಗೆ ಕಲ್ಲಿಗೆ ನೀರು ಕುಡಿಸುವಂತೆ
ನಿನ್ನಲ್ಲಿ ಬೆರೆತ ಆನಂದ ಎಲ್ಲಾ ಬೇಡಿಕೆಗಳ ಮರೆಸಿದೆ
ನನ್ನ ಪ್ರೇಯಸಿ ಕೇಳಿದಳು ದೇವರಲ್ಲಿ ಬೆರೆಯುವ ರೀತಿಯ

www.sriharikhoday.com

ದೂರದಲ್ಲಿರುವ ದೇವರನ್ನು ಬಾವಿಯ
ಆಳದಲ್ಲಿರುವ ನೀರನ್ನು ಸೇದಿದಂತೆ
ಮರುಭೂಮಿಯಲ್ಲಿ ಬಾಯಾರಿದ ಬಾಯಿಗೆ
ನೀರು ಕುಡಿಸಿದರೆ ಸಿಗುವ ಆನಂದದಂತೆ

ಬೇಕು ಎಂಬ ಬಿಂದಿಗೆ ಬಾವಿಯ ಆಳಕ್ಕೆ
ಬಯಕೆಯೆಂಬ ಹಗ್ಗ ಸಡಿಲಬಿಟ್ಟರೆ, ಕರುಣಾಮಯಿಯಾದ
ದೇವರು ಬಿಂದಿಗೆಯನ್ನು ತೇಲಿಸಿ ಹತ್ತಿರ ಬೆರೆತು
ಬಿಂದಿಗೆಯಲ್ಲಿ ಸ್ವಲ್ಪ ಸ್ವಲ್ಪ ನೀರು ಸೇರುವಂತೆ

ತುಂಬಿದ ಗಡಿಗೆಯಲ್ಲಿ ಆನಂದದ ಬಿಂದುವನ್ನು ಕೂಡ ಬೆರೆಸಿ
ಆನಂದದಿಂದ ತುಂಬಿರುವ ನೀರನ್ನು ಕುಡಿದು ಆನಂದಿಸುವಂತೆ
ನೀ ನಿನ್ನನ್ನು ಮರೆತು ದೇವರ ಆಳದಲ್ಲಿಳಿದು ಜೊತೆ ತೇಲಾಡಿದರೆ
ಬಿಂದಿಗೆ ತುಂಬಿದಂತೆ ದೇವರು ನಿನ್ನ ಜೊತೆ ಬೆರೆಯುವನು!

- ಶ್ರೀ ಹರಿ

04-10-2011

ಪ್ರೀತಿ ತುಂಬಿದ ಮೌನವು
ಶಾಂತಿ ಮತ್ತು ತೃಪ್ತಿಯನ್ನು ನೀಡಿ
ಅಸೂಯೆ ದ್ವೇಷಗಳ ನಮ್ಮಿಂದ ದೂರ ಮಾಡಿ
ಆನಂದದ ಪ್ರಜ್ಞೆ ದೇವರಲ್ಲಿ ಬೆರೆಸುವುದು

ದೇವರು ನಮಗೆ ಏಕೆ ಬೇಕು
ವರಗಳ ಬೇಡುವುದಕ್ಕೆಂದೋ ?
ಕಷ್ಟಗಳ ಎಣಿಸಿ ಹೇಳುವುದಕ್ಕೆಂದೋ?
ಏನೂ ಹೇಳದ ಎಲ್ಲವನ್ನು ತಿಳಿದಿರುವ ಅವನಿಗೆ
ನಮ್ಮ ಪ್ರೀತಿ ಮತ್ತು ತೃಪ್ತಿ ದೇವರಿಗೆ ನೀಡಿದರೆ
ವರಗಳು ಕೇಳದೆ ಕೆಳಗೆ ಉರುಳಿ ಬೀಳುವುದು !

ಪ್ರಕೃತಿ ಎಲ್ಲವನ್ನೂ ತೃಪ್ತಿಯಿಂದ ಮರೆಯುತ್ತಿದ್ದರೆ
ದ್ವೇಷ ಅಸೂಯೆಗಳಿಲ್ಲದೆ ಗಿಡ-ಮರಗಳು ಜೊತೆ
ಬೆಳೆಯುತ್ತಿದ್ದರೆ, ಎಲ್ಲರ ಎದುರು ರಾಜಕಳೆಯಿಂದ
ಹೆದರಿಕೆಯಿಲ್ಲದೆ ಬೆಳೆ ಮೈದುಂಬಿ ಬೆಳೆದು ನಿಂತಿದ್ದರೆ
ಪ್ರೀತಿ ಮತ್ತು ಮೌನ ತುಂಬಿಕೊಂಡಿರುವ
ಮರ ಗಿಡಗಳು ದೇವರಲ್ಲೇ ಬೆರೆತುಹೋಗಿವೆ !

ನಮಗೇಕೆ ಪ್ರೀತಿ ತುಂಬಿಕೊಡಲು ಸಾಧ್ಯವಾಗದು
ನಮಗೇಕೆ ಮೌನದಲ್ಲಿರಲಾಗದು
ಹಬ್ಬದ ದಿನವಾದ ಇಂದಿನಿಂದ
ಪ್ರೀತಿ ಮೌನವನ್ನು ಮನದಲ್ಲೇ ಬೆಳೆಸುತ್ತ
ಬೆಳೆದ ಮನೋಪ್ರಭೆಯನ್ನು ಪ್ರತಿಬಿಂಬಿಸೋಣ!

- ಶ್ರೀ ಹರಿ



08-10-2011

ಹಬ್ಬಗಳು ಬಂದಿದೆ
ಮತ್ತೆ ಮತ್ತೆ ಹಬ್ಬಗಳು ಬರುತ್ತಲಿವೆ
ಕಳೆದುಹೋಗಿ ಸಂತಸವನ್ನು ಬಿಟ್ಟು ಹೋಗಿವೆ
ಎಲ್ಲರ ಜೊತೆ ಬೆರೆತು ತಾನೂ ಬೆರೆತು
ತಾನು ತನ್ನದು ಎಂಬುದ ಮರೆತು
ಕೈ ಕುಲುಕುವುದೇ ಹಬ್ಬ
ಮನಸ್ಸುಗಳು ತನು ಮನ

ದಿನವೂ ಹಬ್ಬ ಕ್ಷಣ ಕ್ಷಣದಲ್ಲಿ ಹಬ್ಬ
ಆಚರಿಸಿದರೆ ಸಂತಸವೋ ಸಂತಸ
ಮನಸ್ಸುಗಳು ಬೆರೆತು ತನುಗಳು
ಒಬ್ಬರನ್ನೊಬ್ಬರು ಕುಲಕಿಕೊಂಡರೆ
ಮನಗಳ ಬೆರೆತು ಬರುವ ಎದುರಲ್ಲಿ
ಬಣ್ಣ ಬಣ್ಣಗಳ ಸಂತಸ ಚಿಗುರಿ ನಗೆ
ಉಲ್ಲಾಸಗಳು ತೋರಣಗಳಾಗಿ ತೂರಾಡುತ್ತವೆ

ನಾನು ತಾನು ಎಂಬ ತೂಕವ ಕಳೆದುಕೊಂಡು
ಸಂತೃಪ್ತನಾಗಿ ಹಗುರಾಗಿ ಇಂದು ನಾಳೆಗಳೆಂಬ
ರೆಕ್ಕೆಗಳಿಂದ ದ್ವಂದ್ವರಹಿತ ಗಾಳಿಯಲ್ಲಿ
ಹಕ್ಕಿಯಾಗಿ ಹಾರೋಣ !

-ಶ್ರೀ ಹರಿ



www.sriharikhoday.com

08-10-2011

ವಾದ್ಯದ ಸುರಿಮಳೆಯಲ್ಲಿ
ಗುಡುಗಿನ ಮಿಂಚು ಮೊಳಗುತ್ತಿರಲು
ನನ್ನ ವಾತ್ಸಲ್ಯದ ಹೊಲದಲ್ಲಿ
ಸಂತಸದ ಬೆಳೆ ಜೊತೆಗೆ
ನಾನು ನೆನೆದು ಹೋಗುತ್ತಿರುವೆನು!

ಭವಿಷ್ಯ ಬರುವ ಮುನ್ನ ಸಂತಸದ
ತಾಳ-ಮೇಳಗಳು ಮೊಳಗುತ್ತಿವೆ
ತಾಳಗಳಿಂದ ಜವಾಬ್ದಾರಿಯ ಹೆಜ್ಜೆಗಳ ಸದ್ದು
ಕೇಳುತ್ತ ಕೇಳುತ್ತ ಮುಂದೆ ಸರಿದುಹೋಗಿರುವ
ಕಾಲ ನಮ್ಮ ಜೊತೆ ಬರಲು ಇಚ್ಛಿಸಿ

ಹಿಂತಿರುಗಿ ನಮ್ಮ ಜೊತೆ ಹಿಂದೆ ಹಿಂದೆ
ಜಾರುವೆನೆನ್ನುತ ಮುಂದೆ ಹೋಗಿದ್ದ ಕಾಲಕ್ಕೆ
ಜೊಳ್ಳಾಗಿರುವ ದೇಶದ ಶ್ರೇಯಸ್ಸಿಗೆ
ತಕ್ಕ ವಿಜೃಂಭಣೆ ಸಂತಸ ದೊರಕದೆ
ಕಾಲವು ನಮ್ಮ ಜೊತೆ ಓಡೋಡಿ ಹಿಂದೆ ಬರುತ್ತಿದೆ!

- ಶ್ರೀ ಹರಿ



www.sriharikhoday.com

13-10-2011

ಎಂದೂ ಕಡಿಮೆಯಾಗದ ಭೂತಾಯಿ ಮಮತೆ
ಕಷ್ಟ ತೋರಿಸದೆ ಜಗತ್ತಿನಲ್ಲಿ ನಮ್ಮನ್ನು
ಹೊತ್ತುಕೊಂಡಿರುವ ಭೂಭಾರ

ಹಸಿವ ನೀಗಿಸಲು ಬೆಳೆದುಕೊಡುತ್ತಿರುವ
ದವಸ ಧಾನ್ಯಗಳ ಪ್ರೀತಿಯು ತಾಯ್ತನವ
ಮಿನುಗಿಸುತ್ತಿದ್ದರೆ, ಮಕ್ಕಳಾದ
ನಾವುಗಳು ತಾಯಿಯನ್ನು ಮರೆತಿದ್ದೇವೆ!

ಏನೂ ಬಯಸದೆ ಸುರಿಸುತ್ತಿರುವ
ಅವಳ ಪ್ರೀತಿ ಮಮತೆಗೆ ಮನುಜಕುಲವು
ಅವಳ ಮೇಲೆ ಪ್ರೀತಿ ತೋರಿಸದೆ
ತಾಯಿಯೆಂಬ ಮಮಕಾರ ಭಾವನೆಯಿಂದ ನೋಡದೆ

ತಾಯಿಯನ್ನೇ ಮಾರಾಟಕ್ಕಿಟ್ಟಿರುವವರು
ಪ್ರೀತಿಯನ್ನರಿಯದ ಕಠೋರ ಮನಸ್ಸಿನ
ಮನೋ ರಾಕ್ಷಸರು, ಮಮತೆಯ
ಮೌಲ್ಯಗಳ ಅರಿಯದ ಕಾಲ ಕಳ್ಳರು!

- ಶ್ರೀ ಹರಿ

13-10-2011

ಮನಸ್ಸಿನಲ್ಲಿರುವ ಸೂರ್ಯನಿಗೆ
ಪ್ರತಿದಿನವೂ ನಮಸ್ಕರಿಸು

ಕೆಟ್ಟ ನೆರಳುಗಳು ಮನಸ್ಸಿಗೆ ಬರದೆ
ಎಲ್ಲರ ಜೊತೆ ಹೊಂದಾಣಿಕೆಯ
ಬಲೆಯು ನೆರಳಾಗಿ ಬೀಳಲಿ ಎಂದು
ಮನಸ್ಸಿನ ಸೂರ್ಯನಿಗೆ ಬೇಡಿಕೋ!

ಕತ್ತಲಿನಲ್ಲಿರುವ ನಮ್ಮ ಮನಸ್ಸಿಗೆ
ದಾರಿ ಕಾಣದೆ ಕಷ್ಟ ಪಡುತ್ತಿರುವ
ನಮ್ಮ ಇಚ್ಛೆಗಳಿಗೆ, ಸದಾ ಬೆಳಗುತ್ತಿರುವ
ಮನೋ ಸೂರ್ಯನ ಬೆಳಕಿನಲ್ಲಿ

ರಾಜರಸ್ತೆಯ ಹಾದಿ ತೋರಿಸಿ
ಹೊಸ ಸಾಧನೆಗಳಿಗೆ ನೆರವಾಗುವಂತೆ
ಬೇಡುತ್ತ ನಮ್ಮ ಬೇಡಿಕೆಗಳನ್ನು
ಅವನ ಎದುರು ಮಂಡಿಸೋಣ!

- ಶ್ರೀ ಹರಿ





14-10-2011

ಏನೂ ಇಲ್ಲದ ಮನೋ
ನಭೋಮಂಡಲದಲ್ಲಿ ಹಗಲು ರಾತ್ರಿ ಇಲ್ಲದ
ಕೊನೆಯಿರದ ಮನದ ಆಕಾಶದಲ್ಲಿ


ಸದ್ದಿಲ್ಲದ ನಿಶ್ಶಬ್ದದ ಪರಿಸರದಲ್ಲಿ ನನ್ನದು ನಿನ್ನದು
ಎಂದು ಹೇಳಲು ಪದಗಳಿಲ್ಲದ ಆಳದಲ್ಲಿ
ನಾನು ಇಲ್ಲದ ನಾನು ಎಚ್ಚರವಾಗಿಹೆನು!

ಜನ್ಮ ಪಡೆದಿರುವ ಈ ಇರುವಿಕೆ ಆಗುತ್ತಿರುವ
ಅನುಭವಗಳ ವೀಕ್ಷಿಸಿ ಸುಮ್ಮನೇ ಇರುವ
ಶೂನ್ಯ ಬ್ರಹ್ಮಾಂಡಗಳನ್ನು ಕಟ್ಟಲು ಇಚ್ಛಿಸಿ

ಪ್ರಯತ್ನಗಳು ಇಲ್ಲದೆ ರೂಪುಗೊಳ್ಳುತ್ತಿರುವ
ಗ್ರಹ ನಕ್ಷತ್ರಗಳು ಕಟ್ಟುತ್ತಿರುವ ಆ ಮಹಾನ್ ಶಕ್ತಿ
ಸುಲಭದಲ್ಲೇ ದೊರಕುವ ಆ ಮಹಾನ್ ಶಕ್ತಿ

ಪ್ರೇಮ ಬುದ್ಧಿ ಅರಿಯಲಾಗದೆ ಸತ್ಯದ ಹಾದಿ ಬಿಟ್ಟು
ಕಾಲದ ಹಳ್ಳದಲ್ಲಿ ಬಿದ್ದು ಮಾನವ ತನ್ನಲ್ಲಿರುವ
ಶಕ್ತಿಯನ್ನು ಕಳೆದುಕೊಂಡಿದ್ದಾನೆ

- ಶ್ರೀ ಹರಿ





www.sriharikhoday.com

17-10-2011

ಕಷ್ಟಗಳನ್ನು ನನ್ನ ನೋಟ ಗುರುತಿಸಿದೆ
ಹುಟ್ಟುತ್ತ ಸುಖ ಬಯಸುವ ಎಲ್ಲಾ
ಜೀವಿಗಳಿಗೆ ಕಾಲದ ಪಕ್ಷಪಾತ !

ಕಷ್ಟಗಳು ಕಾಡುವುದು ಸಮಯದ ನಿರ್ಧಾರವೋ
ಕಷ್ಟಗಳು ಕಾಡುವುದು ಸ್ಥಳದ ನಿರ್ಧಾರವೋ
ಕಷ್ಟಗಳು ಕಾಡುವುದು ಯೋನಿಗಳ ನಿರ್ಧಾರವೋ
ಏನೂ ಅರಿಯದ ಜೀವಕ್ಕೆ ಅದೇನು ಶಾಪಗಳ ಕಾಯೋ!

ಭೂಮಿಯಲ್ಲಿ ಚಿನ್ನ ಬೆಳೆದಿದೆ ಬೆಳೆದು ನಿಂತಿದೆ
ಕಲ್ಲು ಬೆಳೆದಿದೆ ಬೆಳೆದು ನಿಂತಿದೆ
ಬೆಟ್ಟ ಪರ್ವತಗಳು ಬೆಳೆದಿದೆ ಬೆಳೆದು ನಿಂತಿವೆ
ಸಮುದ್ರಗಳು ಬೆಳೆದಿದೆ ಬೆಳೆದು ಜೀವಿಸುತ್ತಿದೆ

ಕಷ್ಟಗಳನ್ನೇ ಕಾಣದ ಇವುಗಳಿಗೆ ಕಾರಣಗಳೇನು ?
ನಾನು ನನ್ನದು ಎಂದು ತಿಳಿಯದ ಇವುಗಳಿಗೆ
ಕಷ್ಟಗಳೇನು ಎಂದು ತಿಳಿಯದ ಇವುಗಳಿಗೆ
ಕಷ್ಟಗಳ ಕೊಡಲು ಕಾಲ ಹೆದರುತ್ತಿದೆ

ಸಮಾಜದ ಹಿನ್ನೆಲೆಯಲ್ಲಿ ಹುಟ್ಟಿರುವ ನಾವುಗಳು
ನನ್ನದು ನಮ್ಮದು ನಾನು ಹಿರಿಯ ನಾನು ಕಿರಿಯನೆಂದು
ಬೆಳೆಗಳ ಸಮಾಜ ಬೆಳೆಸಿರುವ ಕಾರಣ ಕಾಲ ನಮ್ಮ ಜೊತೆಗೆ
ಹುಟ್ಟಿನಿಂದ ಬೆಳೆ ಇದ್ದರೂ ದೋಚಿಕೊಂಡು ಹೋಗುತ್ತಿದೆ

ಅದು ಯೋಗ್ಯರಿಗೆ ಸುಖ ನೀಡುತ್ತಿರುವುದು ನಾವು
ಕಾಣುತ್ತಿರುವೆವು ಸುಖದ ತಿರುವುಗಳಿಗೆ ನಾವೇ ಕಾರಣ
ಸುಖ ದುಃಖಗಳಿಗೆ ಹಿರಿಯರಿಂದ ಪಡೆದಿರುವ ದ್ವೇಷ
ಅಸೂಯೆಗಳು ಜೀವನದ ನಡೆ ನಡಿಗೆಗಳು ಕಾರಣ!

- ಶ್ರೀ ಹರಿ





www.sriharikhoday.com

20-10-2011

ಇಂದಿನ ಕನಸುಗಳಿಗೆ
ನಾಳೆಯ ಕನಸುಗಳು ಕಾದು ನಿಂತಿವೆ!

ಇಂದಿನ ಕಷ್ಟಗಳು
ನಾಳೆಯ ಕಷ್ಟಗಳಿಗೆ ಕಾದು ನಿಂತಿವೆ!


ಇಂದಿನ ಸುಖಗಳು
ನಾಳೆಯ ಸುಖಗಳಿಗೆ ಕಾತುರದಿಂದ ಕಾದು ನಿಂತಿವೆ!

ಕಷ್ಟಗಳಿಗೆ ಯಾವ ರೀತಿ ಅಪೇಕ್ಷೆಪಡುವುದಿಲ್ಲವೋ
ಸುಖಗಳಿಗೂ ಅಪೇಕ್ಷೆಪಡದೆ
ನಿರಾಳ ಭಾವನೆಯಿಂದ

ಧ್ವಜವು ಗಾಳಿ ಬಂದಾಗ ಉಲ್ಲಾಸದಿಂದ
ಹಾರುವಂತೆ ಹಾರಿ ಗಾಳಿ ಇಲ್ಲದಾಗ
ಸುಮ್ಮನೆ ಗಾಳಿಯನ್ನು ನಿರೀಕ್ಷಿಸುವಂತೆ

ಕನಸು-ನನಸುಗಳ ಮಿಶ್ರಜೀವನವೇ
ಭಾರವಾಗಿರುವ ಜೀವನಕ್ಕೆ
ಹಗುರ ಮಾಡುವುದು

- ಶ್ರೀ ಹರಿ



21-10-2011

ಏಳು ಸಮುದ್ರಗಳ ಆಚೆ ಇರುವ ಕಿರಣಗಳು
ದೀಪಗಳನ್ನು ಹುಡುಕುತ್ತ ಹಿಂದೆ ಬರುವಂತೆ
ಏಳು ಜನುಮಗಳಿಂದ ಜನಿಸಿ ಹಿಂದೆ ಹಿಂದೆ
ಹಿಂಬಾಲಿಸುತ್ತ ನಾವುಗಳು ಸೇರುತ್ತಿದ್ದೇವೆ!

ನಾನು ನೀನು ನಮ್ಮವರು ಆಗಿರುವ ಈ ದಿನ
ಹಿಂದಿನ ಕಷ್ಟ-ಸುಖಗಳನ್ನು ಮರೆತು
ಇಂದಿನ ಜೀವನದ ದೀಪವ ಹಚ್ಚಿ ಪ್ರಜ್ವಲಿಸಲು
ಕಾಲದ ಹಳ್ಳ ಎತ್ತರಗಳ ದಾಟಿ ಸೇರುತ್ತಿರುವೆವು !

ಗ್ರಹ ನಕ್ಷತ್ರಗಳು ಬ್ರಹ್ಮಾಂಡದಲ್ಲಿ ಹುಟ್ಟುತ್ತಿರುವಂತೆ
ಹೊಸ ಹೊಸ ಭಾವನೆಗಳನ್ನು ಮನದಲ್ಲಿ ಜನ್ಮಿಸುತ್ತ
ಜೊತೆ ಸೇರಿದ ಸಮಾಜದ ದೀಪ ಬೆಳಗಿಸಿ
ದೀಪದ ಬೆಳಕಿನ ಸುಖವನ್ನು ನಾವೆಲ್ಲರೂ ಜೊತೆ ಅನುಭವಿಸುತ್ತ!

ದೀಪಾವಳಿಯ ದೀಪದ ಬೆಳಕನ್ನು ಎಲ್ಲೆಡೆ ಹಚ್ಚುತ್ತ
ಸುಖದ ಅಲೆಯಲ್ಲಿ ನಮ್ಮ ಕಷ್ಟಗಳನ್ನು ಮರೆಯೋಣ !

- ಶ್ರೀ ಹರಿ



www.sriharikhoday.com

25-10-2011

ಮಳೆಯ ಹನಿಗಳು ಮೋಡಗಳ ಸಂಬಂಧವನ್ನು ಮರೆಯುವಂತೆ
ಗಿಡ-ಮರಗಳು ತಮ್ಮ ಫಲದ ಬೆಳೆಯನ್ನು ಮರೆಯುವಂತೆ
ಭೂತಾಯಿ ಬೆಳೆದ ಬೆಳೆಯ ಜೊತೆ ಸಂಬಂಧ ಇಲ್ಲವೆನ್ನುವಂತೆ
ನಮ್ಮದು ಎಂಬ ಸಂಬಂಧವಿಲ್ಲದೆ ಜೀವಿಸುತ್ತ
ಪ್ರೀತಿ-ಪ್ರೇಮದ ಜೊತೆಗೆ ಜೀವನವ ಬೆಳಗಿಸಬೇಕು!

ಎದುರು ಬರುತ್ತಿರುವ ಕಾಲದ ಜೊತೆಗೆ ಬೆರೆತು
ಸಂಬಂಧಗಳು ತಿಳಿಯದ ಎಳೆಕೂಸಿನ ಮನಸ್ಸಿನಂತೆ
ಅತಿ ತೇಜವುಳ್ಳ ಮನೋಭಾವನೆಯಿಂದ
ಯಾರೂ ಮಾಡದೆ ಬಿಟ್ಟಿದ ಕೆಲಸಗಳಲ್ಲಿ ನಿರತರಾಗಿ
ಸಂಬಂಧಗಳು ಇಲ್ಲದೆ ಕೆಲಸಗಳನ್ನು ಸಾಧಿಸೋಣ!

ಪ್ರಕೃತಿಯ ರೀತಿಯ ಕೆಲಸಗಳಂತೆ
ಪ್ರೀತಿಯಿಂದ ಕೆಲಸ ಮಾಡಿ ಹೊಸ ವರುಷದಲ್ಲಿ
ಸಂಬಂಧಗಳ ಹೊಸ ಹೊಸ ಸಂಬಂಧಗಳು
ಇಲ್ಲದೆ ಕೆಲಸಗಳ ಮಾಡೋಣ !

- ಶ್ರೀ ಹರಿ

29-10-2011

ಬೇಡ ಎನ್ನುವುದು ಮತ್ತೆ ಹಿಂದೆ ಬರುತ್ತದೆ
ಬೇಕು ಬೇಕು ಎನ್ನುವುದು ದೂರ ದೂರ ಹೋಗುವುದು
ಬೇಕು-ಬೇಡಗಳಿಲ್ಲದ ಸಮಾಧಾನದ ಬಯಕೆ
ಎಂದಿಗೂ ಜೊತೆ ಜೊತೆ ಬೆರೆತು ಜೀವಿಸುತ್ತದೆ!

ಬೇಡ ಎನ್ನುವುದಕ್ಕೆ ಕಾರಣಗಳಿರಬೇಕು
ಬೇಕು ಎನ್ನುವುದಕ್ಕೆ ಕಾರಣಗಳಿರಬೇಕು
ಕಾರಣಗಳಿಲ್ಲದೆ ಬೇಕು ಬೇಡಗಳ ಭಿಕ್ಷೆ
ಸುಖಗಳಿದ್ದರೂ ಬಿಕಾರಿಯಾಗಿ ಮನ ಬಿಕ್ಷೆಗೆ ಅಲೆಯುತ್ತದೆ!

ನಿರಾಳ ಭಾವನೆಗಳನ್ನು ಬೆಳೆಸಿಕೊಂಡು
ಮಹಾನ್ ಶಕ್ತಿಗೆ ಮನದಲ್ಲೇ ನಮಿಸುತ್ತ
ಬೇಡದೆ ನೀಡುವ ವರಗಳ ಸುಖ ಅನುಭವಿಸುತ್ತ
ನಮ್ಮ ಸುಖದ ಅನುಭವಗಳಲ್ಲಿ ಬೇರೆಯವರಿಗೂ

ಸುಖ ನೀಡುತ್ತ ಕಾದುಕೊಂಡಿರುವ ಸುಖದ ಜೊತೆಗೆ
ಕಾಲದ ಹೊಳೆಯಲ್ಲಿ ಜೊತೆ ಈಜುತ್ತ ಹರಿದು ಹೋಗೋಣ!

- ಶ್ರೀ ಹರಿ






29-10-2011

ಜಾರಿ ಜಾರಿ ಜಾರಿ ಜೊತೆಯಾಗುವ ಸಂಬಂಧಗಳು
ಜಾರಿ ಜಾರಿ ದೂರವಾಗುವ ಸಂಬಂಧಗಳು

ಸಂಬಂಧವೆನ್ನುವ ಮೌಲ್ಯಗಳಲ್ಲಿರುವ
ಅನುಭವ ತಿಳಿಯದ ಮಾನವನು
ಜಾರಿ ಜಾರಿ ಹೋಗುತ್ತ ತನ್ನನ್ನು ತಾನೇ
ಕಳೆದುಕೊಂಡು ಅನಾಥನಾಗುತ್ತಿದ್ದಾನೆ!

ಪ್ರಕೃತಿಯ ಬೆಳೆಯಾದ ನಾವುಗಳು
ಬೆಳೆ ಬೆಳೆದು ಕೊಳೆತು ಹೋಗದಂತೆ
ಕಾಪಾಡಿಕೊಳ್ಳುವುದು ನಮ್ಮ ಧರ್ಮವಾಗಿ
ಮುಂಬರುವ ಪೀಳಿಗೆಯ ಜೊತೆ
ಬಾಳುವೆ ಅನುಭವಿಸೋಣ!

- ಶ್ರೀ ಹರಿ





www.sriharikhoday.com

31-10-2011

ನಾವುಗಳು ನಮ್ಮ ಮನಸ್ಸನ್ನು ಓಡಿಸುತ್ತಿಲ್ಲ
ಮನಸ್ಸು ನಮ್ಮನ್ನು ಓಡಿಸುತ್ತಿದೆ
ಜಗತ್ತಿನಲ್ಲಿ ಎಲ್ಲವೂ ದೇವರು ಓಡಿಸಿದಂತೆ ನಡೆಯುತ್ತಿದ್ದರೆ
ನಾವುಗಳು ನಮ್ಮನ್ನೇ ಮರೆತು ಮನಸ್ಸು ಓಡಿಸಿದರೆ
ಓಡುತ್ತಾ ಓಡುತ್ತಾ ಸತ್ಯದ ಶಕ್ತಿಯಿಂದ ದೂರಾಗುತ್ತಿದ್ದೇವೆ

ಯಾವ ಬೆಳೆಯೂ ಜಗತ್ತಿನಲ್ಲಿ ಚಂಚಲ ತೋರದು
ನಾವು ಜಗತ್ತಿನ ಬೆಳೆಯಾಗಿರುವ ನಾವುಗಳು
ಅಚಲವಾಗಿ ಚಂಚಲದ ಮನಸ್ಸಿನ ತೂಗಾಟದಲ್ಲಿ
ಸತ್ಯವ ಅರಿಯಲು ಕಾಲವಿಲ್ಲದೆ ಗುರಿಯಿಲ್ಲದ
ಮನಸ್ಸಿನ ಜೊತೆಕಟ್ಟಿಕೊಂಡು ಓಡುತ್ತಿದ್ದೇವೆ

ಸಾಧನೆ ಮಾಡಲು ಸಮಯವಿಲ್ಲದೆ ಗುರಿಮುಟ್ಟಲು
ಗುರಿ ತೋಚದೆ , ದೇವರನ್ನು ಅನುಭವಿಸಲು ತಿಳಿದೂ ತಿಳಿಯದ ಹಾಗೆ
ನೀರುಗುಳ್ಳೆಗಳ ಹಾಗೆ ಬೆಳೆದು ಮಾಯವಾಗುವಂತೆ
ಸಾಧನೆಗೆ ಜನ್ಮಪಡೆದು ಏನೂ ಸಾಧಿಸದೆ
ನಮ್ಮ ಜೊತೆಗಿರುವ ಜೀವ ಮಾಯವಾಗುತ್ತಿದೆ

-
ಶ್ರೀ ಹರಿ



01-11-2011

ದ್ವಂದ್ವವಿಲ್ಲದ ನಾನು ನನ್ನದು ಇಲ್ಲದ
ಉಸಿರು ನಿಟ್ಟುಸಿರು ತಿಳಿಯದ
ತುಂಬು ಇರುವಿಕೆಯ ಭಾವನೆಗಳಿಂದ

ಮನಸ್ಸು ಮನೋನಿಶಬ್ದದಲ್ಲಿ ಕಳೆದುಹೋಗಿರುವಾಗ
ಹಗಲು ರಾತ್ರಿಯ ಕಲ್ಪನೆಯಿಲ್ಲದ
ಆ ಮಹಾನ್ ಶಕ್ತಿಯ ದೇವರಲ್ಲಿ ಬೆರೆತು
ಆಕಾಶದಲ್ಲಿ ಬೆರೆತಿರುವೆ

ಜಗತ್ತಿನ ವಿಶ್ವದ ಕಷ್ಟಗಳನ್ನು ನಿವಾರಿಸಿ
ಕ್ಷಣ  ಕ್ಷಣದಲ್ಲಿ ಬದಲಿಸುತ್ತಿರುವ ಬ್ರಹ್ಮಾಂಡಕ್ಕೆ
ಭವಿಷ್ಯದ ಹಾದಿಯ ತೋರಿಸಿ
ಹೊಸ ಸೃಷ್ಟಿ-ಲಯಗಳಿಗೆ ಸೂಚನೆ ನೀಡುತ್ತ

ಭೂತ ಭವಿಷ್ಯ ವರ್ತಮಾನಗಳಲ್ಲಿ ಇದ್ದೂ ಇಲ್ಲದ
ಈ ಲೋಕದಲ್ಲೇ ಜನ್ಮಿಸಿ ತಮ್ಮ ನೆರಳನ್ನು
ಈ ಭೂಮಿಯ ಮೇಲೆ ನೆರಳು ಅಚ್ಚುಹಾಕಿರುವರೆ
ಹೆಸರು ಬೇಡದ ಆ ಅವಧೂತರು!

- ಶ್ರೀ ಹರಿ



www.sriharikhoday.com

02-11-2011

ನನ್ನ ಶುದ್ಧ ಅಂತರಾಳದ ಆಳದಲ್ಲಿ ಇಳಿದರೆ
ತನ್ನದೇ ಆಗಿಹೋಗುವ ಆಕಾಶದಲ್ಲಿ ಬೆರೆತರೆ

ಅಂತರಾಳದ ಗಂಟೆಯ ಕೂಗಿಗೆ
ವಿಶ್ವವು ತಲೆಬಾಗಿಸಿ ಗಂಟೆಯ ಇಚ್ಛೆಗಳನ್ನು
ಕಾರ್ಯರೂಪಕ್ಕೆ ತರಿಸುವುದು

ಕಾರ್ಯವು ರೂಪಿಸಿಕೊಂಡಾದ ಮೇಲೆ
ತಾನು ತನ್ನದು ಮರೆತಿರುವ ಶುದ್ಧ ಭಾವನೆಗೆ
ತುಟಿ ಮಾತ್ರದಿಂದ ನಗೆ ಚೆಲ್ಲಿ

ತೃಪ್ತಿಯ ಕಣ್ಣೀರಿನಿಂದ
ಹರ್ಷದ ಕಣ್ಣೀರಿನ ತೊಟ್ಟುಗಳು
ಭೂಮಿಗೆ ಜಾರಿ ಬೀಳುತ್ತಿದೆ!

- ಶ್ರೀ ಹರಿ





www.sriharikhoday.com


04-11-2011

ಹೂತೋಟದಲ್ಲಿ ಸಾವಿರಾರು ಹೂವುಗಳ ಜೊತೆ
ನಾನೊಂದು ಹೂವೇ ಎನ್ನುವಂತೆ
ಭೂಮಿಯಲ್ಲಿ ಕೋಟಿ ಕೋಟಿ ಜಂತುಗಳ ಜೊತೆ
ನಾನೊಂದು ಜಂತು ಜೊತೆಯಿರುವಂತೆ !

ಭೂಮಿಯ ಮೇಲೆ ಕೋಟಿ ಕೋಟಿ ಜೀವರಾಶಿಗಳಲ್ಲಿ
ನಾನೊಂದು ಜೀವ ಎನ್ನುವಂತೆ
ಬ್ರಹ್ಮಾಂಡದಲ್ಲಿ ಕೋಟಿ ಕೋಟಿ ನಕ್ಷತ್ರಗಳಲ್ಲಿ
ನಾನೊಂದು ನಕ್ಷತ್ರ ಎನ್ನುತ್ತ
ಜಗತ್ತಿನಲ್ಲಿ ನಾನೊಬ್ಬನೇ ಎನ್ನುವ ಭಾವನೆ
ಮನದಿಂದ ಕಳಚಿ ಬಿಸಾಡಬೇಕು !

ನಾನು ಅಪೇಕ್ಷೆಪಡದೆ ಜೀವಿಸುತ್ತ
ದಕ್ಕದೆ ಇರುವ ವಸ್ತುವ ಆಸೆಯಪಡದೆ
ಕಾರಣಗಳಿಲ್ಲದೆ ಆಸೆಯಪಡದೆ
ಕಾರಣಗಳಿಲ್ಲದೆ ಆಸೆಯಪಡದೆ
ಮನಸ್ಸಿನ ಆಸೆ ಅಪೇಕ್ಷೆಗಳಿಗೆ ಕಾರಣ ಇದ್ದಲ್ಲಿ
ಕಾಣದೇ ಇರುವ ಆ ಮಹಾನ್‌ಶಕ್ತಿ
ಕೇಳದೆ ಬೇಡದೆ ವರವ ನೀಡುವುದು !

- ಶ್ರೀ ಹರಿ



05-11-2011

ರೂಪವಿಲ್ಲದ ನಿರಾಕಾರ ನಿರ್ವಿಕಲ್ಪ ಇರುವಿಕೆಯೋ
ಜೊತೆ ಜೊತೆ ಇದ್ದು ಸಲಹುತ್ತಿರುವ ಮಿತ್ರ ಶಕ್ತಿಯೋ
ಕಾಲದ ಜೊತೆಗಿದ್ದರೂ ಕಾಲವೇ ನಿನ್ನನ್ನ ರೂಪಿಸಲಾಗದೆ
ಈ ಮಾನವನಿಗೆ ನಿನ್ನ ರೂಪಿಸಲು ವರ ನೀಡಿರುವ
ವಿಶ್ವ ಬೆಳಕ ಸ್ವೀಕರಿಸು
ನನ್ನ ನಮೋ ನಮಃಗಳ ಅರ್ಪಣೆಯ !

- ಶ್ರೀ ಹರಿ





07-11-2011


ವಿಶ್ವದಲ್ಲಿ ಮಾನವನೊಬ್ಬನೇ ಮನೋಗೋಡೆಗಳನ್ನು ಕಟ್ಟಿಕೊಂಡು
ಅತಿಯಾದ ಗಟ್ಟಿಯಾದ ಗೋಡೆ , ಬಾಗಿಲು ಕಿಟಕಿಗಳು ಇಲ್ಲದ ಗೋಡೆ
ತಾನು ತನ್ನದು ಎಂಬ ಸಿರಿತನ ಕಳೆದುಕೊಂಡು ಹೋಗುವ ಹೆದರಿಕೆ

ಗೋಡೆ ಹೊರಗೆ ಇರುವವರಿಗೆ ತನ್ನ ಸಿರಿತನವ ತಿಳಿಪಡಿಸುವ ಗೋಡೆ
ಬೇರೆಯವರ ಸುಖ ದು:ಖಗಳ ತಿಳಿಯದೆ ಜೀವಿಸಲು ಇಷ್ಟ
ಪ್ರೀತಿ ಪ್ರೇಮಗಳ ಅಕ್ಕರೆಯ ಗಾಳಿ ಹರಿದಾಡಲು ಕಿಟಕಿ
ಬಾಗಿಲುಗಳಿಲ್ಲದ ಗೋಡೆ , ಆತ್ಮೀಯತೆಯ ಬೆಳಕು ಕೂಡ
ಅರಿಯಲಾಗದೆ ಗೋಡೆ ತಾನೊಬ್ಬನೇ ಜೀವಿಸಿ

ನನಗೆ ಪ್ರೀತಿಸುವವರಿಲ್ಲ ನನಗೆ ಸಿರಿತನವಿಲ್ಲ
ತಾನು ಇಂತವನೋ ತಾನು ಅಂತವನೋ
ಎಂಬ ಜಂಬದಿಂದ ಕೊಳೆಯುತ್ತ
ದುರ್ಗಂಧ ಎಲ್ಲರ ಜೊತೆಯಾಗದೆ ತಾನು ಒಂಟಿಯಾಗಿ
ಸಮಾಜದಿಂದ ದೂರವಾಗಿ ವಿಶ್ವಕ್ಕೆ ನಿಷ್ಪ್ರಯೋಜಕನಾಗಿದ್ದಾನೆ

ಮನೋ ಗೋಡೆಗಳ ಕಟ್ಟಡದ ಕೆಲಸ ನಿಲ್ಲಿಸಿ ಕಟ್ಟಿಕೊಂಡಿರುವ
ಗೋಡೆಯನ್ನು ಒಡೆದು , ಪ್ರೀತಿ ಮಮತೆ ಅಕ್ಕರೆಯ ಗಾಳಿ ಹರಿದಾಡಲು
ಅಡ್ಡಗೋಡೆಗಳಿಲ್ಲದೆ ಜೀವಿಸಲು ಪ್ರಯತ್ನಿಸೋಣ

- ಶ್ರೀ ಹರಿ





www.sriharikhoday.com

07-11-2011

ನಿಮ್ಮ ಪ್ರೀತಿಯ ಈ ಹಂದರದಲ್ಲಿ
ಹಾಡಲು ಕಲಿಸಿದಿರಿ
ನಿಮ್ಮ ಮೆಚ್ಚಿನ ಚಪ್ಪಾಳೆಗಳು

ನನ್ನ ಕಂಠಕ್ಕೆ ತಾಳಗಳಾಗಿ
ನಿಮ್ಮ ಪ್ರೀತಿಯ ಸುರಿಮಳೆ
ನನ್ನ ಧ್ವನಿಗೆ ಮಾದರಿಯ ನೀಡಿದೆ
ನಿಮ್ಮ ಜೊತೆ ಕಳೆದಿರುವ ಅನೇಕ ಸಂಜೆಗಳು

ನಿಮ್ಮ ಮಗನ ಮೇಲೆ ತೋರಿಸಿರುವ ತಾಯಿಯ ಭಾವನೆ
ನಾ ಎಂದಿಗೂ ತಬ್ಬಲಿಯಾಗದೆ
ನಿಮ್ಮ ಪ್ರೀತಿಯ ತೊಟ್ಟಿಲಲ್ಲಿ ಬೆಳೆದು
ನಾನಾ ದೇಶಗಳಲ್ಲಿ ಹೆಸರು ಪಡೆದು

ಪೋಷಿಸುತ್ತಿರುವ ತಂದೆ ತಾಯಿಗಳಾದ ತಾವು
ಪ್ರೀತಿಯ ಅಣ್ಣ-ತಮ್ಮಂದಿರುಗಳು
ಸ್ನೇಹಿತ ಸಹೋದರರ ಜೊತೆ
ನನ್ನ ಜೊತೆ ಜೊತೆಗಿರುವ
ಸ ರಿ ಗ ಮ ಪ ದ ನಿ ಸ
ಜೀವನದ ಮೈತ್ರಿಯ ಫಲಕಗಳಾಗಿವೆ
ನಿಮ್ಮ ಪ್ರೀತಿಯ ಸುರಿಮಳೆ
ನನ್ನ ಧ್ವನಿಗೆ ಮಾಧುರ್ಯವನ್ನು ತುಂಬಿದೆ

- ಶ್ರೀ ಹರಿ





www.sriharikhoday.com

08-11-2011

ಮೌನದಲ್ಲಿ ಇರಲಿ ನನ್ನ ಪ್ರೀತಿ
ನಿನ್ನ ದಿನವೂ ಒಂದು ಬಾರಿ ನನ್ನ ಮನಸ್ಸು
ನಿನ್ನ ಜೊತೆ ಮಾತನಾಡುತ್ತದೆ


ಕಾಲ ನಮ್ಮನ್ನು ದೂರ ಪಡಿಸಿದರೂ
ನೀ ನನ್ನಿಂದ ದೂರ ಹೋಗಿದ್ದರೂ
ಹಗಲು ರಾತ್ರಿ ನನ್ನ ಜೊತೆ ನೀ ಇರುವೆ

ತೋಟದ ಗಿಡ ಕೇಳಿತು ನೀ ಎಲ್ಲಿ ಎಂದು
ಬದಲು ಹೇಳಲು ಬರದೆ ನನ್ನ ಎದೆ ತೋರಿಸಿ
ಎದೆಯಾಳದಲ್ಲಿ ರುವೆ ಎಂದೆ

ಈ ಜನ್ಮ ನಮ್ಮನ್ನು ದೂರ ಮಾಡಿದ್ದರೂ
ಬರುವ ಜನ್ಮದಲ್ಲಿ ನಾವುಗಳು ಸೇರಿ
ನಮ್ಮ ಕನಸುಗಳನ್ನು ನನಸು ಮಾಡೋಣ

ಮೌನದಲ್ಲಿ ಇರಲಿ ನಮ್ಮ ಪ್ರೀತಿ
ದಿನವೂ ಒಂದು ಬಾರಿ
ಮನಸ್ಸು ನಿನ್ನ ಜೊತೆಗೆ ಮಾತನಾಡುತ್ತಿದೆ

- ಶ್ರೀ ಹರಿ



10-11-2011

ಮದುವೆಯ ವಾದ್ಯಗೋಷ್ಠಿಯಿಂದ
ಮದುವೆಯ ಮಂಟಪಕ್ಕೆ ಕರೆತಂದ ಹಿರಿಯರು
ನನ್ನವಳಿಗೆ ಎದುರು ನಿಲ್ಲಿಸಿ
ಅಡ್ಡವಾಗಿದ್ದ ತೆರೆ ತೆಗೆದಾಗ
ಅವಳಲ್ಲಿ ನೋಡಿದ ಕಣ್ಣಿನ ನೋಟ
ಪ್ರೀತಿಯ ಕವನ ಬರೆಯಿತು !

ಎಂದೂ ಮನದಲ್ಲಿ ಹಾಡುತ್ತಲೇ ಇದೆ
ನಮ್ಮನ್ನು ನಾವು ಮರೆತು ಬೆರೆತಾಗ
ಪ್ರೀತಿಯ ಕವನ ನಮ್ಮಿಬ್ಬರ ಕಣ್ಣಲ್ಲಿ
ಬಿಂಬಿಸುತ್ತ ಪ್ರತಿಸಲವೂ ಹೊಸ ಬಣ್ಣಗಳಿಂದ
ಮಿನುಗಿ ಬಿಂಬಿಸುತ್ತಿದೆ

ಮಕ್ಕಳು ಮರಿ ಮಕ್ಕಳು ಹುಟ್ಟಿದರೂ
ನಮ್ಮಿಬ್ಬರ ಪ್ರೀತಿಯ ಕವನ
ಯೌವ್ವನವನ್ನು ಕಳೆದುಕೊಳ್ಳದೆ
ಗಂಡ-ಹೆಂಡತಿಯೆಂಬ ಹೆಸರಿನ ಜೊತೆಗೆ
ತಾತ ಅಜ್ಜಿಗಳ ಹೆಸರಿನ ಶಬ್ಧಗಳು

ಪ್ರೀತಿಯ ಕವನಕ್ಕೆ
ಶಬ್ಧಗಳ ಮೆರುಗು ನೀಡುತ್ತಿದೆ !

- ಶ್ರೀ ಹರಿ.






11-11-2011

ಅನುಭವದಿಂದ ಪ್ರಗತಿ
ಪ್ರಗತಿಯಿಂದ ಹೊಸ ಅನುಭವ
ವಿಶ್ವದಲ್ಲೇ ಎಲ್ಲವೂ ಅನುಭವದಿಂದ
ಬದಲಿಸಿ ಹೊಸ ಅನುಭವಗಳ ಪ್ರವೇಶ !

ಸೂರ್ಯ ಚಂದ್ರರು ತಮ್ಮ ಅನುಭವದಿಂದ
ಗ್ರಹ ನಕ್ಷತ್ರಗಳು ತಮ್ಮ ಅನುಭವದಿಂದ
ಹೊಸ ಹೊಸ ಅನುಭವಗಳಿಗೆ ಅಪೇಕ್ಷಿಸಿ
ಬೆಳೆದು ಲಯವಾಗಿ ಕಾಲದ ಎದುರಿಗೆ ಕಳೆದುಹೋದವು
ಹೊಸ ಹುಟ್ಟಿನ ಗುಟ್ಟು ನೆಟ್ಟನೆ ಬಂದು ನಿಲ್ಲುವುದು !

ಹಾದುಹೋಗುವ ಸತ್ಯಗಳಿಗೆ
ಹೊಸ ಅನುಭವದ ಅಪೇಕ್ಷೆ
ಕಾಣದೇ ಇರುವ ಮಹಾನ್ ಶಕ್ತಿ
ಅನುಭವಗಳಿಗೆ ಕಷ್ಟಗಳನ್ನು ಎದುರಿಗೆ ನಿಲ್ಲಿಸಿ
ಅದನ್ನು ದಾಟಲು ಕೂಡ ಮಾತಾಡದೇ ಕಲಿಸುತ್ತಿದೆ !

- ಶ್ರೀ ಹರಿ





www.sriharikhoday.com

14-11-2011

ಒಂದೇ ಶಿಲ್ಪಿಯ ಏಟಿನಲ್ಲಿ ಕಲ್ಲಿನ ವಿಗ್ರಹವಾಗುವುದಿಲ್ಲವೋ
ಒಂದೇ ಕ್ಷಣದಲ್ಲಿ ಗಿಡ ಬೆಳೆದು ಫಲ ಕೊಡುವುದಿಲ್ಲವೋ
ಒಂದೇ ಹೆಜ್ಜೆಯಲ್ಲಿ ಊರು ಸಿಗುವುದಿಲ್ಲವೋ
ಒಂದೇ ನೆನಪಿನಿಂದ ದೇವರು ಸಿಗುವುದಿಲ್ಲ!

ಒಂದೇ ದಿನದಲ್ಲಿ ಗರ್ಭಬೆಳೆದು ಕೂಸು ಆಗುವುದಿಲ್ಲವೋ
ಒಂದೇ ಅಲೆಯಿಂದ ಸಮುದ್ರ ಆಗುವುದಿಲ್ಲವೋ
ಒಂದೇ ದಿನದಿಂದ ಜಿವನ ಅನಿಸಿಕೊಳ್ಳುವುದಿಲ್ಲವೋ
ದೇವರಲ್ಲಿ ಬೆರೆಯುವ ಪ್ರಯತ್ನಗಳು ಅನೇಕ ಪ್ರಯತ್ನಗಳಾಗದೆ
ದೇವರ ಜೊತೆ ಬೆರೆಯಲಾಗದು!

ಒಂದೇ ತೊಟ್ಟಿನಿಂದ ನದಿ ಆಗಲಾಗದು
ಒಂದೇ ಕಿರಣಗಳಿಂದ ಸೂರ್ಯನೆನೆಸಿಕೊಳ್ಳಲಾಗದೋ
ಒಂದೇ ಅಕ್ಷರದಿಂದ ಪದಗಳಾಗದೋ
ಒಂದೇ ಪದದಿಂದ ಕವಿತೆ ಆಗಲಾಗದೋ
ಒಂದೇ ಕ್ಷಣದಲ್ಲಿ ದೇವರು ಸಿಗುವುದಿಲ್ಲ!

ಅನೇಕ ಪ್ರಯತ್ನಗಳ ಹಿಂದೆ ಫಲ ಬಚ್ಚಿಟ್ಟುಕೊಂಡಿದೆ
ಒಂದನ್ನ ಬಿಟ್ಟು ಅನೇಕ ಜೊತೆ ಬೆರೆತರೆ
ದಿನಚರಿಯಲ್ಲಿ ವಿಶ್ವದ ಜೊತೆ ಬೆರೆತರೆ
ದೇವರಲ್ಲಿ ಬೆರೆಯಬಹುದು!

-ಶ್ರೀ ಹರಿ



15-11-2011

ಕಣ್ಣೀರಿನ ಮಳೆ ಸುರಿಸಿದೆ
ಅತ್ತು ಅತ್ತು ದಿಕ್ಕುಗಳ ಕಳೆದುಕೊಂಡೆ
ನೆಮ್ಮದಿ ಸಿಗದೆ ಸುಖ ಏನೆಂದು ಮರೆತು ಹೋಗಿದೆ
ನನ್ನ ಮನಸ್ಸು ಸುಡದೆ ಚಿತೆಯ ಮೇಲೆ ಕೊಳೆಯುತ್ತಿದೆ!

ಈ ಜಗವೇ ಬೇಡ ಎಂದರೆ ಸಾವು ಬರಲಿಲ್ಲ
ನಾಲ್ಕು ಗೋಡೆಗಳ ಮಧ್ಯೆ ಸಮಾಜ ಕಳೆದುಹೋಗಿ
ನೆಂಟರಿಷ್ಟರುಗಳು ಮಾತಾಡದ ಮನೆಯ ಛಾವಣಿ ನೆಲೆಗಳಾಗಿವೆ
ಕಣ್ಣೀರಿನ ಕೋಪ ಸಮಾಜದ ಬಿಂಕ ನನಗಿರುವ ಆಸ್ತಿ ಕಣ್ಣೀರು ಮಾತ್ರ!

ನನ್ನ ಮನಸ್ಸಿನ ಜೊತೆಗೆ ಕಣ್ಣೀರು ಕೆಂಡಗಳಾಗಿ
ನನ್ನ ಚಿತೆಗೆ ದುಃಖದ ಕಣ್ಣೀರು ಕೆಂಡವಾಗಿ
ಬೆಂಕಿಯಿಡುತ್ತ ನೊಂದ ಜೀವನದಲ್ಲಿ ಸೋತುಹೋಗಿ
ಜಗತ್ತಿನಲ್ಲಿ ಕಳೆದುಹೋಗಿರುವ ದಿಕ್ಕುಗಳಿಲ್ಲದ ಹೆಣ್ಣು ನಾನು!

- ಶ್ರೀ ಹರಿ

www.sriharikhoday.com

16-11-2011

ಸುಖನಿದ್ರೆ ಪಡೆದು
ಸ್ವಪ್ನಗಳಿಲ್ಲದ ನಿರಾಳ ನಿದ್ರೆಯಿಂದ
ಹಗುರವಾದ ಮನಸ್ಸಿನಿಂದ
ದ್ವೇಷ-ಕ್ಲೇಷಗಳಿಲ್ಲದ ಕನ್ನಡಿಯಂತೆ
ಇರುವ ಮನಸ್ಸಿನಿಂದ
ದಿನಚರಿಯ ಭಾವನೆಗಳು

ಮನದ ಕನ್ನಡಿಯಲ್ಲಿ ನೋಡಿಕೊಂಡು
ಕಾಣದ ಮಹಾನ್‌ಶಕ್ತಿಯ ನೆನೆಸಿ ನಮಿಸಿ
ದಿನಚರಿಯ ಕಾರ್ಯಕ್ರಮಗಳನ್ನು ಮಾಡುತ್ತ
ಶಕ್ತಿ ತುಂಬುವ ಸೂರ್ಯನನ್ನು ನೋಡಿ
ಅದರ ಗುಣ ಮನದಲಿ ಶ್ಲಾಘಿಸುತ್ತ

ಮಾನವನಿಗೆ ಪವಿತ್ರವಾದ ಸಿದ್ಧರಸವಾದ ನೀರಲ್ಲಿ
ಮೈಯ್ಯನ್ನು ತೊಳೆದುಕೊಂಡು
ಉಡುಪು ಧಾರಣೆಯಲ್ಲಿ ಹಿರಿಯರ ನಮಿಸುತ್ತ
ಜೊತೆ ಕಾಪಾಡಿಕೊಂಡಿರುವ
ಇಷ್ಟದೇವರನ್ನು ನೆನೆಸುತ್ತ

ಜೊತೆ ಜೊತೆ ಜೀವಿಸುತ್ತಿರುವ
ಅರ್ಧಾಂಗಿಯನ್ನು ನಗಿಸಿ
ಅವಳ ಮನಸ್ಸಲ್ಲಿ ಸಂತಸವ ತುಂಬುತ್ತ
ಹಸಿದಿರುವ ಹೊಟ್ಟೆಗೆ ತಣಿಸಿ
ಕಾದಿರುವ ಕರ್ತವ್ಯಗಳ ನೀಗಿಸಲು

ಕೊನೆಯಿರದ ಆಕಾಶವ ನೆನೆಸಿ ನಮಿಸತ್ತ
ಮನೆಯ ಹೊಸ್ತಿಲನ್ನು ದಾಟೋಣ

- ಶ್ರೀ ಹರಿ 



17-11-2011

ಮನೆಯ ಹೊಸ್ತಿಲನ್ನು ದಾಟುತ್ತ
ನನ್ನವಳ ಕೈ ಸನ್ನೆಯಲ್ಲಿ
ನನ್ನ ಯಶಸ್ಸಿನ ಕೋರಿಕೆಗಳು
ಅವಳ ಕಣ್ಣಲ್ಲಿ ತೇಲಿಸಿ ಕಳುಹಿಸಿದ ಮನೋತರಂಗಗಳು
ನನ್ನ ತೋಳಿಗೆ ಬಲಕೊಟ್ಟು

ಕೊರತೆಯಿಲ್ಲದ ಭಾವನೆಗಳಿಂದ
ನನ್ನ ಪ್ರೀತಿಯ ನಾಯಿಯ ಬಾಲದ
ಆಟ ನೋಡುತ್ತ ಬೀಳ್ಕೊಡುತ್ತಿರುವುದು
ನನ್ನ ದಿನಚರಿಯ ಆಟಕ್ಕೆ
ಭಯಗಳಿಲ್ಲದೆ ಬೀಳ್ಕೊಡುತ್ತಿದೆ !

ನನ್ನ ಸಾರಿಗೆಯ ರಥದಲ್ಲಿ ಕುಳಿತು
ರಸ್ತೆಯಲ್ಲಿ ನಾ ಕಾಣುವ ಸಮಾಜದ
ನಾನಾ ಪದರಗಳನ್ನು ನೋಡುತ್ತ
ಸುಖದಲ್ಲಿರುವವರನ್ನು ಕಂಡು
ಕಷ್ಟದಲ್ಲಿರುವವರನ್ನು ಕಂಡು

ಕಷ್ಟದಲ್ಲಿರುವ ನನ್ನ ಭೂಮಿಯ ಜೊತೆವಾಸಿಗಳು
ದುಃಖದಿಂದ ಹುಟ್ಟಿದ ಭಾವನೆಗಳಿಂದ
ನನ್ನ ಮನೋ ಖಜಾನೆಯಿಂದ
ಅವರಿಗೆ ಶಕ್ತಿಯನ್ನು ಹಂಚುತ್ತ
ತಾಯಿ ಅಂಬೆಯ ಪಾದಗಳಿಗೆ

ಸಮಾಜ ಕಷ್ಟಗಳನ್ನು ಅರ್ಪಿಸುತ್ತ
ನನ್ನ ದಿನಚರಿಯ ವ್ಯಾಪಾರದ ಕೃಷಿಕ್ಷೇತ್ರಕ್ಕೆ ತೆರಳುತ್ತ
ನನ್ನ ಕಷ್ಟಗಳ ಕೃಷಿ ಮಾಡಲು
ನನ್ನ ಕ್ಷೇತ್ರದ ಹೊಸ್ತಿಲನ್ನು ದಾಟುತ್ತ ಮುನ್ನಡೆಯುತ್ತಿದ್ದೇನೆ !



- ಶ್ರೀ ಹರಿ



www.sriharikhoday.com

18-11-2011

ಪ್ರತಿಯೊಬ್ಬರಿಗೆ ಕೆಲಸ ಕ್ಷೇತ್ರ ನೀಡಿರುವ ದೇವರು
ತಮ್ಮ ತಮ್ಮ ಕ್ಷೇತ್ರದಲ್ಲಿ ತಾವುಗಳು ಕೆಲಸದಲ್ಲಿ ತೊಡಗಿ
ಸುಖ ನೀಡುವ ಕೆಲಸಗಳ ಮಾಡಿ

ತೃಪ್ತಿ ಪಡೆಯುತ್ತ ಮತ್ತೆ ಹೊಸ ಸಾಧನೆಗೆ ಯೋಚಿಸುವಂತೆ
ನಾ ಜೊತೆ ಇರುವ ಕೆಲಸಗಳನ್ನು ಮಾಡಲು
ಮಾಡಿ ಮುಗಿಸಲು ಯತ್ನಿಸಿ

ಸೂರ್ಯ ಮೇಲೇರಿ ಕೆಳಗೆ ಇಳಿಮುಖವಾಗುವ ಸಮಯದಲ್ಲಿ
ಹೊಸ ಚಿಂತೆಯನ್ನು ಮಾಡಲಾರಂಭಿಸಿ
ಯೋಚನೆಗಳು ತನಗೆ ಮಾತ್ರವಲ್ಲದೆ

ಜೊತೆಯಿರುವ ಜೊತೆಗಾರರ ಹಿತವನ್ನು ನೆನೆಸುತ್ತ
ಸಮಾಜದ ಕೆಲಸಗಳಲ್ಲಿ ನಿರತನಾಗುವ ಭಾವನೆ
ನನಗೆ ಮತ್ತು ನನ್ನ ಮನಕ್ಕೆ ಯೌವ್ವನವನ್ನು ಪ್ರಕೃತಿ ನೀಡುತ್ತಿದೆ!

ಕೊನೆಬರದ ಕೊನೆಗಾಣದ ಬ್ರಹ್ಮಾಂಡದಲ್ಲಿ
ಕೊನೆಯೇ ಬರದ ಕೆಲಸಗಳಲ್ಲಿ ನಿರತರಾಗಿ
ಜನುಮ ನೀಡಿರುವ ಭೂಮಿ ತಾಯಿಯ ಸೇವೆ ಮಾಡೋಣ!

- ಶ್ರೀ ಹರಿ





www.sriharikhoday.com

22-11-2011


ಬಂಡವಾಳವಿಲ್ಲದ ವ್ಯಾಪಾರ
ಬಡ್ಡಿಯಿಲ್ಲದ ವ್ಯಾಪಾರ
ಸರುಕುಗಳೇ ಇಲ್ಲದ ವ್ಯಾಪಾರ
ಹಣ ಇಲ್ಲದೆ ಪ್ರೀತಿಯ ಮಾರಿ
ಪ್ರೀತಿಯ ಕೊಂಡು
ಪ್ರೀತಿಯಿಂದ ಶ್ರೀಮಂತರಾಗುವ ವ್ಯಾಪಾರ!

ಕಣ್ಣಿಗೆ ಕಾಣದ ಸರಕು

ಸರಬರಾಜಿಲ್ಲದೆ ರವಾನಿಸಿ
ಅದನ್ನು ಅವರು ಸ್ವೀಕರಿಸಿ
ಕೊಂಡ ಪ್ರೀತಿಯ ಸರಕನ್ನು
ಬಂದಿದೆ ಎಂದು ತಿಳಿಯಪಡಿಸಿ
ಕೇಳಿದ ಮೌಲ್ಯದಿಂದ ಎರಡರಷ್ಟು

ಪಾವತಿ ಮಾಡುವ ವ್ಯಾಪಾರ
ಪ್ರೀತಿಯ ಶ್ರೀಮಂತಿಕೆ ವ್ಯಾಪಾರ!

- ಶ್ರೀ ಹರಿ



23-11-2011

ಸಮಾಜದ ಏಳಿಗೆಗೆ ದೇವರು ಮಾಡಿರುವ
ಯಂತ್ರ ಅಂದರೆ ಅದು ಪ್ರೀತಿಯ ಯಂತ್ರ
ಏಳಿಗೆಯನ್ನು ನೇಯುವ ಮಗ್ಗ
ಮಗ್ಗದಲ್ಲಿ ಓಡಾಡುತ್ತಿರುವ ಪ್ರೀತಿಯ ಲಾಳಿ

ಒಂದೆಡೆಯಿಂದ ಮತ್ತೊಂದು ಕಡೆ
ನಿಲ್ಲದ ಓಡುವ ಲಾಳಿಯಂತೆ
ಒಂದು ಮನದಿಂದ ಮತ್ತೊಂದು ಮನಕ್ಕೆ
ನಿಲ್ಲದೆ ಓಡುತ್ತಿದೆ ಪ್ರೀತಿಯ ಲಾಳಿ!

ಸಮಾಜಕ್ಕೆ ಲಾಭವಾಗಿ ಬೆಳೆಯುತ್ತಿರುವ ನೇಯ್ಗೆ
ಸಮಾಜದ ಹೊದಿಕೆಯಾಗಿ ಎಲ್ಲರನ್ನು
ಬೆಚ್ಚಗೆ ಇಡಲು ಕಂಬಳಿ ಹೊದಿಸುವಂತೆ
ಕಷ್ಟಗಳ ಚಳಿಗೆ ಪ್ರೀತಿಯ ಯಂತ್ರದ ಕೊಡುಗೆ!

ಪ್ರೀತಿಯಿಂದ ಬಡಿಸಿದ ಊಟ ಶರೀರ ಬೆಳೆಸುವಂತೆ
ಪ್ರೀತಿಯಿಂದ ನೋಡಿದ ಕಣ್ಣುಗಳು ಸಂಸಾರವನ್ನು ನಡೆಸುವಂತೆ
ಪ್ರೀತಿಯಿಂದ ಗುರುವು ಕಲಿಸಿದ ವಿದ್ಯೆ ಒಳ್ಳೆ ಶಿಷ್ಯನಾಗಿಸುವಂತೆ
ಪ್ರೀತಿಯಿಂದ ಆಧ್ಯಾತ್ಮಿಕ ಬುದ್ಧಿ ಬೆಳೆಯುವಂತೆ

ಪ್ರೀತಿಯ ಯಂತ್ರ ನಮ್ಮನ್ನು
ದೇವರ ಜೊತೆ ಕೂಡ ಬೆರೆಸುತ್ತದೆ!

- ಶ್ರೀ ಹರಿ





24-11-2011


ಜನುಮದಿಂದ ದೇವರು ಕೊಟ್ಟಿರುವ ಕೊಡುಗೆಗಳು
ಶರೀರ, ಶರೀರದಲ್ಲಿರುವ ಪ್ರೀತಿ ಈ ಎರಡ ನೋಡಲು
ಜೊತೆ ಜೊತೆಗಿರುವ ಸದಾ ಕಾಲ
ಬೆಳೆಯುತ್ತಾ ಬೆಳೆಯುತ್ತ ಬೆಳೆಯುತ್ತಿರುವ ಸಂಬಂಧಗಳು
ಬೇಡದೆಯೇ ಅಪೇಕ್ಷೆಗಳಿಲ್ಲದೆ ಅಂಟಿಕೊಳ್ಳುತ್ತವೆ!

ಸಂಬಂಧಗಳಲ್ಲಿ ಪ್ರೀತಿಯನ್ನು ಹೆಚ್ಚಿಸುತ್ತ
ಶರೀರದ ಆರೋಗ್ಯವನ್ನು ಕಾಪಾಡುತ್ತ
ಕಾಲಕ್ಕೆ ಬೇಸರವಾಗದಂತೆ
ತನ್ನ ದಿನಚರಿಯ ಕಾರ್ಯವನ್ನು ಮಾಡುತ್ತ
ಶೇಷವಾಗಿರುವ ಕಾಲದಲ್ಲಿ ಸಮಾಜ ಸೇವೆ ಮಾಡೋಣ!

ಅಂಟಿಕೊಂಡಿರುವ ಸಂಬಂಧಗಳನ್ನು ಬಲಪಡಿಸಿ
ಯೋಗ್ಯ ಉದ್ದೇಶಗಳನ್ನು ಪ್ರೀತಿಯ ಜೊತೆ ರೂಢಿಸಿ
ಭೂತ ಭವಿಷ್ಯ ವರ್ತಮಾನದಲ್ಲಿ
ಜೊತೆ ಜೊತೆಗಿರುವ ಕಾಲವನ್ನು ನಮಿಸಿ
ಹೊಸ ಸಂಕಲ್ಪಗಳನ್ನು ಸಾಧಿಸಲು ಇಚ್ಛಿಸಿ

ದೇವರು ಕೊಟ್ಟಿರುವ ಶರೀರಕ್ಕೆ
ಒಳ್ಳೆಯ ಹೆಸರು ತರಿಸೋಣ!

- ಶ್ರೀ ಹರಿ





www.sriharikhoday.com

26-11-2011

ಭಾಗಿಯಾಗಿ ಭಾಗ್ಯ ಪಡೆದು
ಕಷ್ಟಸುಖಗಳಲ್ಲಿ ಜೊತೆ ಜೊತೆಗಿದ್ದು
ಗಾಳಿ ಬೆಳಕು ನೀರು ಭೂಮಿಗೆ ನೆರವಾಗುವಂತೆ
ನೀನು ಭೂಮಿಗೆ ನೆರವಾಗುವ ಸಮಯ ಸನ್ನಿವೇಶಗಳ
ಜೊತೆ ಭಾಗಿಯಾಗು!

ಎಲ್ಲವೂ ಕುಳಿತಲ್ಲೇ ಬರುವುದಿಲ್ಲ
ಹೊಸ್ತಿಲ ದಾಟಿ ಹುಡುಕಿ ಕಾಣುವ
ಎದುರಲ್ಲೇ ಬೆರೆತು ಸಾಧಿಸಿ ಸಂತಸಪಡು
ಜೀವನವನ್ನು ಹಗುರಾಗಿಸಿಕೊಂಡು
ಹೊಗಳಿಕೆಗಳನ್ನು ಬಯಸದೆ
ನಿನ್ನ ಬೆನ್ನನ್ನು ನೀನೇ ತಟ್ಟಿಕೊ!

ಮನಸ್ಸಿದ್ದರೆ ಮಹದೇವ
ಕನಸಿದ್ದರೆ ಕಾಲ ಜೊತೆ ಬೆರೆಯುವಂತೆ
ಬಯಸುತ್ತಲೇ ಇದ್ದರೆ ಕಾರ್ಯ ರೂಪುಗೊಳ್ಳುವಂತೆ
ಆಯಸ್ಸು ಇರುವವರೆಗೆ ದುಡಿಯುವ ಮನೋಭಾವನೆ ಇದ್ದರೆ
ಯಶಸ್ಸು ನೆರಳಾಗಿ ಹಿಂದೆ ಬಂದು ಕಾಯುತ್ತದೆ!

- ಶ್ರೀ ಹರಿ






28-11-2011

ದುಃಖ ತಡಿಯಲಾರದೆ
ದುಃಖ ಕುದಿಯುತ್ತಲೇ ಇರುವಾಗ
ನಾನು ಲೇಖನಿಯಿಂದ ಬರೆಯಲು ಯತ್ನಿಸಿದರೆ
ನನ್ನ ಲೇಖನಿ ರಕ್ತವ ಕಾರುತ್ತ
ದುಃಖದಿಂದ ಕಾಗದ ಒದ್ದೆಯಾಗುತ್ತಿದೆ!

ಮೂರು ಅಕ್ಷರಗಳ ಅರ್ಥ ತಿಳಿದುಕೊಳ್ಳದೆ
ಮಹಾನ್ ವ್ಯಕ್ತಿಗಳು ಪರಕೀಯರನ್ನು ಓಡಿಸಿದ್ದರೂ
ಓಡಿಸಿ ದೊರಕಿಸಿದ ಸುಖ
ಸ್ವರಾಜ್ಯ ಎಂಬ ಮೂರು ಪದಗಳು ಅರ್ಥ ಏನೆಂದು ಅರಿಯದೆ
ನಮ್ಮ ರಾಜಕೀಯ ವ್ಯವಸ್ಥೆ ನಮ್ಮನ್ನು ಗುಲಾಮರನ್ನಾಗಿಸುತ್ತಿದೆ!

ಕೆಲವರದೇ ಅಧಿಕಾರ
ಅಧಿಕಾರ ಚಲಾಯಿಸುತ್ತ ದಬ್ಬಾಳಿಕೆ
ದಬ್ಬಾಳಿಕೆಯಿಂದ ಕೈಕಾಲುಗಳಿಗೆ ಕಾಣದ ಸಂಕೋಲೆ
ಮುಂಬರುವ ಸಂತತಿಗೆ ಬೆಳಕು ಕತ್ತಲಾಗುತ್ತಿದೆ
ದುಃಖ ತಡೆಯದೆ ನನ ರಕ್ತ ಕುದಿಯುತ್ತಿದೆ!

- ಶ್ರೀ ಹರಿ





www.sriharikhoday.com

02-12-2011

ಏನು ಬೇಕು ಎಂದು ತಿಳಿಯದ ಸಮಾಜ
ಹೇಗೆ ಬಯಸಬೇಕೆಂದು ತಿಳಿಯದ ಸಮಾಜ
ಸುಖ ಹೇಗೆ ಪಡೆಯಬೇಕೆಂದು ತಿಳಿಯದ ಸಮಾಜ
ಸುಖದ ಆಕಾಶದ ಹೂವನ್ನು ಬಯಸುತ್ತಿದೆ !

ನಾನಾ ದಿಕ್ಕುಗಳಲ್ಲಿ ಓಡುತ್ತಿರುವ ನಾಯಕರು
ನಾನಾ ಆಸೆಗಳ ತೋರಿಸುತ್ತಿರುವ ರಾಜಕೀಯ ವ್ಯವಸ್ಥೆ
ಹಂಚಿ ಹರಿದು ಹೋಗಿರುವ ನಂಬಿಕೆಗಳು
ಸಮಾಜದ ಬೆಳಕಾಗಿರುವ ಯುವಕರಿಗೆ
ಮುಂಗಾಲು ಹಾಕಲು ಗುರಿಕಾಣಿಸದಾಗಿದೆ!

ವರದಾನವಾಗಿ ದೇವರು ನೀಡಿರುವ ಸ್ವರಾಜ್ಯ
ಒಬ್ಬೊಬ್ಬರ ಜೊತೆ ಸೇರಿದರೆ ಮಾತ್ರ
ಸಾಧನೆಯೆಂದು ತೋರಿಸಿಕೊಟ್ಟ ಸ್ವರಾಜ್ಯ
ದೇಶಕ್ಕೆ ಫಲವಾಗಿ ಆ ಫಲ ನೀಡಿದ
ನಾಯಕರ ಅಂತರಾಳದಲ್ಲಿದ್ದ

ಸತ್ಯವನ್ನೇ ಹಿಂಬಾಲಿಸಿದರೆ ಮಾತ್ರ
ಸಮಾಜಸುಖವೆಂಬ ಆಕಾಶದ ಪುಷ್ಪ
ಪುಷ್ಪದ ಜೊತೆಗೆ ಸುಖದ ಬೆಳಕನ್ನು
ಸಮಾಜಬಾಂಧವರು ನೋಡ ಬಹುದು !

- ಶ್ರೀ ಹರಿ






03-12-2011

ಸತ್ಯವನ್ನು ಮುಚ್ಚಿಡುವುದೇ ಮನಸ್ಸಿನ ಕೆಲಸವಾದರೆ
ಸತ್ಯವನ್ನು ಹೊರತೋರಿಸುವುದು ಪ್ರಕೃತಿಯ ಕೆಲಸವಾದರೆ
ಸತ್ಯವನ್ನು ಅಸತ್ಯ ಎಂದು ವಾದಿಸುವುದು ಮನುಷ್ಯನ ಮನವಾದರೆ
ಸತ್ಯ ತಾನಾಗಿ ಬೆಳೆದು ಎದುರು ನಿಂತಾಗ
ಸತ್ಯ ತನ್ನ ಶಕ್ತಿಯನ್ನು ಪ್ರದರ್ಶನ ಮಾಡುವುದು !

ನಾನು ಸತ್ಯವನ್ನೇ ಹೇಳುವೆನೆಂದು ಶಪಥ ಮಾಡುವರು
ಹೆದರಿಕೆಯೆಂಬ ಬೀಜ ಮನದಲ್ಲಿ ಬೆಳೆಯುತ್ತಿರಲು
ಸತ್ಯವೇ ತನ್ನ ನಿಯಮಗಳನ್ನು ಮುಂದುವರಿಸಿಕೊಳ್ಳುತ್ತ
ಹಿಂದೆ ಕಾಲುಹಾಕಲು ತಿಳಿಯದ ಕಾಲಕ್ಕೆ
ಹಂತ ಹಂತದಲ್ಲಿ ಸತ್ಯದ ಪ್ರದರ್ಶನಕ್ಕೆ ಕಾಲವು ಸಹಪಾಠಿಯಾಗಿದೆ !

ಕನ್ನಡಿಯ ಮುಂದೆ ನಾವು ನಿಂತು ನಾನು ಕಪ್ಪಗಿದ್ದರೂ
ನಾನು ಕೆಂಪಗಿದ್ದೇನೆ ಎಂಬ ಮಾತು ಅಸತ್ಯವೋ
ದಿನಚರಿಯಲ್ಲಿ ನಮ್ಮ ಭಾವನೆಗೆ ಸತ್ಯದ ಮನೋಕನ್ನಡಿಯನ್ನು ತೋರಿಸಿ
ಭಾವನೆಗಳಿಗೆ ಹೊಸ ಹೊಸ ರೂಪ ಕೊಟ್ಟು ಬಣ್ಣಗಳು ಬದಲಿಸದೆ
ಸಂತೋಷದಿಂದ ಬಾಳುವುದೇ ಸತ್ಯದ ನೆರಳಿನ ಆಸರೆ !

- ಶ್ರೀ ಹರಿ





www.sriharikhoday.com

03-12-2011

ನನ್ನ  ಉದ್ರೇಕದ ಬಿಸಿರಕ್ತ
ಕುದಿಯುತ್ತಾ ಕುದಿಯುತ್ತಾ
ದುಃಖದ ಕೆನೆ ಕಟ್ಟಿಕೊಂಡು
ಮನದಲ್ಲಿ ದ್ವೇಷದ ಸ್ಫೋಟ ಆಗುತ್ತಿದೆ!

ಸ್ವಾತಂತ್ರ್ಯ ಸ್ವಾತಂತ್ರ್ಯ ಎಂದು ಕೂಗಿ ಕೂಗಿ
ತಮ್ಮ ಉಸಿರನ್ನೇ ದೇಶಕ್ಕೆ ಅರ್ಪಿಸಿದ
ತಾಯ್ನಾಡಿಗಾಗಿ ದುಡಿದ ಯೋಧರು
ತಮ್ಮ ದುಃಖದ ಕಣ್ಣೀರನ್ನು ಜಲಪಾತಗಳಾಗಿಸಿದೆ!

ಪರಕೀಯರ ಪಂಜರದಲ್ಲಿದ್ದ ನಾವುಗಳು
ಸ್ವಾತಂತ್ರ್ಯದ ಪಕ್ಷಿಗೆ ಸ್ವತಂತ್ರವಾಗಿ ಹಾರಲು ರೆಕ್ಕೆಗಳಿಲ್ಲದೆ
ಕುಂಟುತಾ ಕುಂಟುತಾ ತನ್ನ ಮೌಲ್ಯಗಳು
ರಾಜಕೀಯ ಅಟ್ಟಹಾಸದ ಕತ್ತಲಲ್ಲಿ ಕಳೆದು ಹೋಗುತ್ತಿವೆ

ದುರ್ಬಲರನ್ನು ಮತ್ತೆ ದುರ್ಬಲಿಸಿ
ಅವರ ಏಳಿಗೆಗೆ ನಾವು ದುಡಿಯುತ್ತೇವೆಂದು
ಹೇಳುವ ರಾಜಕಾರಣಿಗಳು ತಾವೇ ರಾಜರುಗಳಾಗಿ
ಆಳ್ವಿಕೆಯನ್ನು ಆಳುತ್ತಿರುವರು!

ಸ್ವಾತಂತ್ರ್ಯದ ಗರ್ಭಧಾರಣೆ ಮಾಡಿದ ಜಗತ್ ಜನನಿ
ಹುಟ್ಟಿ ಬೆಳೆಯುತ್ತಿರುವ ನಮ್ಮ ದೇಶದ ಕೂಸು
ಗರ್ಭದಲ್ಲೇ ಕೊಲೆಮಾಡಿ ಪಕ್ಷಗಳನ್ನು ಕಟ್ಟುತ್ತ
ಪಕ್ಷಗಳ ಕಟ್ಟುವ ರಾಜಕೀಯ ವ್ಯವಸ್ಥೆಗೆ

ನನ್ನ ಉದ್ರೇಕದ ಬಿಸಿರಕ್ತ
ಕುದಿಯುತ್ತಾ ಕುದಿಯುತ್ತಾ
ದುಃಖದ ಕೆನೆ ಕಟ್ಟಿಕೊಂಡು
ಮನದಲ್ಲಿ ದ್ವೇಷದ ಸ್ಫೋಟ ಆಗುತ್ತಿದೆ

- ಶ್ರೀ ಹರಿ



www.sriharikhoday.com

08-12-2011

ಕಣ್ಣಿಲ್ಲದ ಏನೂ ಕಾಣದ ಹಸಿವು
ಸ್ವರಾಜ್ಯ ಎಂದರೆ ಏನು?
ಸ್ವರಾಜ್ಯ ಬಂದರೆ ಏನು ಸುಖ ಬರುತ್ತದೆ
ಬೇರೆಯವರು ಹೇಳಿದ್ದನ್ನು ಕೇಳಿದ್ದೆ
ಸ್ವರಾಜ್ಯ ಬಂದಿದ್ದರೂ ಹಸಿದ ಹೊಟ್ಟೆಗಳಿಗೆ
ಹಸಿವಿನ ಕಾಟ ಬಿಟ್ಟರೆ ಬೇರೆ ಯಾವ ಸುಖವೂ ಸಿಗಲಿಲ್ಲ

ಯಾರಿಗೆ ಬಂದಿದೆ ಸ್ವರಾಜ್ಯ?
ಅವರ ಇಷ್ಟದಂತೆ ಅಟ್ಟಹಾಸದಿಂದ
ನಾನಾ ಆಕಾಂಕ್ಷೆಗಳುಳ್ಳ ಕಷ್ಟಗಳಿಗೋ
ಪಕ್ಷಗಳ ನಾಯಕರುಗಳಿಗೋ
ಕಾನೂನು ಬದ್ಧವಾದ ರೂಪಗೊಂಡಿರುವ
ರಾಜಕೀಯ ವ್ಯವಸ್ಥೆಗೋ?
ಸಿಕ್ಕಿದ ಸ್ವರಾಜ್ಯದವರ ರಾಜಕೀಯ ಪಕ್ಷಗಳಿಗೋ

ಲೌಕಿಕ ತಿಳಿಯದ ಹಸಿವು
ಸಮಾಜದ ಭೂಮಿಕೆ ತಿಳಿಯದ ಹಸಿವು
ಕಾಲದ ಜೊತೆ ಮಾತ್ರ ಇರುವ ಹಸಿವು
ಯಾರ ಕಣ್ಣಿಗೂ ಕಾಣಿಸದ, ಸಿರಿತನ, ಬಡತನ ತಿಳಿಯದ,
ಹಸಿವು ಹೇಳುತ್ತಿದೆ ಸ್ವರಾಜ್ಯ ಬಂದಿದ್ದರೂ
ನನ್ನ ಹೊಟ್ಟೆ ಹಸಿವಿನ ಕಷ್ಟ ಬಿಟ್ಟೋಗಿಲ್ಲ
ನನಗೆ ಎಂದಿಗೆ ಸ್ವರಾಜ್ಯ ಸಿಗುವುದೋ ಎಂದು
ಹಸಿವು ಕೇಳುತ್ತಿದೆ ಅದಕ್ಕೆ ನಾನೇನು ಮಾಡಬೇಕೆಂದು?
ಹಸಿವು ಕೇಳುತಿದೆ, ಉತ್ತರಗಳು ಬಾಯಿ ಕಟ್ಟಿಸುತ್ತಿದೆ

- ಶ್ರೀ ಹರಿ

08-12-2011

ಕಷ್ಟಗಳು ಸಾಧನೆಗಳು
ಜೊತೆ ಜೊತೆಗೆ ಬೆರೆತು ಸಾಧಿಸಿ
ಸಾಧಿಸಿದ ನಂತರ ಹೊಸ ಸಾಧನೆಗಳ
ಕಷ್ಟಗಳಿಗೆ ಮನಸ್ಸಿನ ಒಲವು

ಸಾಧನೆಗೆ ಯಾರು ಉಪಯುಕ್ತರು
ಎಂದು ಶೋಧನೆ ಮಾಡಿ
ಅವರಿಗೆ ಮಾತ್ರ ಕಷ್ಟಗಳ ಹೊರೆ ಹೊರಿಸಿ
ಸಾಧನೆ ತನ್ನ ಸಾಧನೆಯನ್ನು ಸಾಧಿಸಿಕೊಳ್ಳುತ್ತಿದೆ

ಪ್ರಕೃತಿಯ ಬೆಳೆಗೆ ಸೂರ್ಯನ ಸಾಧನೆ
ಆಕಾಶದ ಮೋಡಗಳಿಗೆ ನೀರು ತರಿಸುವ ಸಾಧನೆ
ಸಮುದ್ರವು ಕೊಳೆ ನೀರು ನದಿಗಳಿಗೆ ಶುಭ್ರತೆಗಳ
ಮೋಡಗಳಾಗಿ ತಿಳಿ ನೀರ ಹರಿಸುವ ಸಾಧನೆ!

ಕಷ್ಟದಲ್ಲಿ ಇರುವವನಿಗೆ ಸುಖ ನೀಡುವುದು ಸಾಧನೆ
ದುಃಖದಲ್ಲಿರುವವನಿಗೆ ಸಂತಸ ನೀಡುವುದೇ ಒಂದು ಸಾಧನೆ
ಬೇಡಿಕೆಗಳಿಗೆ ಬೇಡಿಕೆಗಳನ್ನು ನೀಡುವುದೇ ಸಾಧನೆ
ಬೇಡಿದ ಆನಂದ ಮನಕ್ಕೆ ದೊರೆತರೆ ಪರಿಸರದ ಸಾಧನೆ!

ಸಾಧನೆಯ ಜೊತೆಗೆ ಕಷ್ಟಗಳು
ಕಷ್ಟಗಳ ಜೊತೆಗೆ ಸಾಧನೆಗಳೋ
ಸಾಧನೆಗಳ ಜೊತೆಗೆ ಕಷ್ಟಗಳೋ ಕಷ್ಟಗಳು!

- ಶ್ರೀ ಹರಿ





www.sriharikhoday.com

09-12-2011


ಕೇಡು ಬಯಸಿ ಕೆಡಕನ್ನು ಕಟ್ಟಿಸುತ್ತಿಹರು
ರಾಜಕೀಯ ಮತ್ತು ರಾಜಕಾರಣಿಗಳು
ಹಿತವನ್ನು ಬಯಸಲು ತಿಳಿಯದ ಜನ
ದೇಶವನ್ನು ಹೇಂಗೆ ಕಟ್ಟಾರು ?

ಹಾಲಿಗೆ ಒಂದು ತೊಟ್ಟು ನಿಂಬೆ ರಸ ಬೆರೆತರೆ
ಹಾಲು ಒಡೆದು ಕೆಟ್ಟು ಹೋಗುವಂತೆ
ಹಾಲಿನಂತಿರುವ ಪ್ರಜೆಗಳ ಮನಸ್ಸಿಗೆ
ವಿಷದ ಪ್ರಚೋದನೆ ಮಾಡಿ ಮನಸ್ಸನ್ನು ಕೆಡಿಸುತ್ತಿಹರು!

ಕೆಟ್ಟದನ್ನು ಬಯಸಿ ಜೀವಿಸುತ್ತಿರುವವರು
ಇತಿಹಾಸದಲ್ಲೇ ಯಾರೂ ಇಲ್ಲ
ಕೆಟ್ಟದನ್ನು ಬಯಸಲು ಕಲಿಸಿದ್ದರೂ ಮರೆತು
ಒಳ್ಳೆಯದನ್ನು ಬಯಸುವುದು ಮೇಲು

ಇಂದಿನಿಂದ ಕೆಟ್ಟದನ್ನು ನಾವು
ಬಯಸುವುದಿಲ್ಲವೆಂದು ಸಂಕಲ್ಪಿಸಿ
ಒಳ್ಳೆಯದಾಗುವುದನ್ನು ಕಾದು ನೋಡೋಣ

- ಶ್ರೀ ಹರಿ



10-12-2011

ಹೇ ಕಾಲವೇ ನಿನಗೆ ನಮ್ಮ ಕಷ್ಟಗಳಲ್ಲಿ
ಜೊತೆಯಿರುವ ನಿನಗೆ ಕಷ್ಟವಾಗುವುದೇ
ಅಥವಾ ಸುಖದಲ್ಲಿ ಭಾಗಿಯಾಗಿ ಸುಖ ಬರುವುದೇ
ಅಥವಾ ನೀ ಬೇರೆಯೋ, ನಾ ಬೇರೆಯೋ ?

ಸುಖ ಪಡೆಯುವವರು ನನ್ನನ್ನು ಮರೆತಿರುವಾಗ
ಸುಖದಲ್ಲಿ ನನಗೆಲ್ಲಿ ಸುಖ ?
ಕಷ್ಟಗಳಲ್ಲಿ ಜೊತೆಯಿರುವಾಗ ನನಗೂ ಕೂಡ ಕಷ್ಟವಾಗಿ
ನಿದ್ರೆಯಿಲ್ಲದೆ ಕಷ್ಟಗಳು ಮರೆಯಲಾಗದ ಯಾತನೆ
ನಿಜಕ್ಕೂ ಈ ಲೋಕದಲ್ಲಿ ನನಗಿರುವ ಕಷ್ಟ ಯಾರಿಗೂ ಇಲ್ಲ ?

ಹೇ ಕಾಲವೇ ನಿನಗೆ ಸುಖವೇ ಇಲ್ಲವೇ
ಇದೆ ! ದೇವರಲ್ಲಿ ಬೆರೆತಿರುವವರ ಜೊತೆ
ಸುಖ ಬರುತ್ತಿದೆ ನನಗೆ
ಆದರೆ ದೇವರನ್ನೇ ಮರೆತಿರುವವರು ಈ ಲೋಕದಲ್ಲಿ
ನನ್ನ ಸುಖದ ಭವಿಷ್ಯಕ್ಕೆ ಅನುಮಾನ ಪಡುತ್ತಿರುವರು!

ಮುಂದೆಯಾದರೂ ಜನಗಳು ತನ್ನ ಕಷ್ಟಗಳಿಗೆ
ದೇವರಲ್ಲಿ ಬೆರೆತು ಕಷ್ಟಗಳನ್ನು ದೇವರಲ್ಲಿ ಕೇಳಿಕೊಂಡು
ದೇವರಲ್ಲಿ ಬೆರೆಯುವುದೇ ಸುಖವೆಂದು
ಹೊಸ ಜೀವಿಗಳು ಪ್ರಯತ್ನಿಸಿದರೆ
ಸುಖವೆಂಬ ನನ್ನ ಸ್ವಪ್ನ ಕಂಡು, ಪಡೆದು

ನಾನೂ ಕೂಡ ನಿಮ್ಮ ಜೊತೆ ಬೆರೆತು
ನನಗೂ ಸುಖ ನೀಡೆಂದು
ನಿನ್ನ ಜೊತೆಗೆ ನಾನೂ ಕೂಡ ದೇವರಲ್ಲಿ ಬೇಡಿಕೊಳ್ಳುವೆನು

- ಶ್ರೀ ಹರಿ 



www.sriharikhoday.com


12-12-2011

ಸ್ವರಾಜ್ಯದ ಸುಖದ ಗೊಂಬೆಯನ್ನು
ಕದ್ದು ಮುರಿದು ಹಾಕಿದ್ದಾರೆ
ಸ್ವರಾಜ್ಯದ ಸುಖದ ಜೊತೆಗೆ
ಆಟವಾಡಲು ಬಯಸಿದ್ದ ನಾವುಗಳು
ದುಃಖ ಕಷ್ಟಗಳನ್ನು ಅನುಭವಿಸಬೇಕಾಗಿದೆ !

ಸರಿಯಿಲ್ಲದ್ದನ್ನು ಸರಿಯಿಲ್ಲವೆಂದು ಹೇಳಲು
ನಮ್ಮ ತುಟಿಗಳಿಗೆ ಬೀಗ ಹಾಕಿ
ಬೀಗದ ಕೈಯನ್ನು ಕಾಲದ ಸಮುದ್ರದಲ್ಲಿ ಬಿಸಾಡಿರುವರು
ಏನೂ ತಿಳಿಯದಂತೆ ನಡೆಯುತ್ತಿದೆ ಈ ದಿನಗಳು
ರಾಜಕೀಯ ನಾಟಕ ನಟನಾ ರಾಜಕೀಯ!

ಒಬ್ಬ ಧೈರ್ಯ ವ್ಯಕ್ತಿಯ ಅವಶ್ಯಕತೆ
ಕಾಲದ ಸಮುದ್ರದ ಆಳದಲ್ಲಿ ಧುಮುಕಿ
ಕಳೆದು ಹೋಗಿರುವ ಬೀಗದ ಕೈಯನ್ನು ಹುಡುಕಿ ಹೊರಬಂದು
ನಮ್ಮ ಬಾಯಿಗಳಿಗೆ ಹಾಕಿರುವ ಬೀಗಗಳನ್ನು ತೆಗೆದು
ಅವರ ಬಾಯಿಗಳಿಗೆ ಬೀಗ ಹಾಕಲು ಸಮಯ ಬಂದಿದೆ !

- ಶ್ರೀ ಹರಿ



19-12-2011

ದೊರೆತಿರುವ ಸ್ವರಾಜ್ಯ ಬೆಳಕಿದ್ದರೂ
ಪ್ರಜೆಗಳಿಗೆ ಕೂಡಿಹಾಕಿದ್ದಾರೆ ಕತ್ತಲೆಯ ಕೋಣೆಯಲ್ಲಿ
ಕಿಟಕಿ ಬಾಗಿಲುಗಳೇ ರಾಜಕೀಯ ವ್ಯವಸ್ಥೆಗಳಾಗಿ
ಭಯ ಭ್ರಾಂತಿಗಳ ಸಂಸಾರದಲ್ಲಿ
ಸ್ವರಾಜ್ಯದ ಸಂತಸವನ್ನು ಕಳೆದುಕೊಂಡಿದ್ದೇವೆ!

ಉಸಿರುಕಟ್ಟಿಕೊಂಡು ಉಸಿರಾಡುತ್ತ
ಹಸಿದ ಹೊಟ್ಟೆಗಳಿಗೆ ಮಾರ್ಗ ತಿಳಿಸದ ಕತ್ತಲು
ಕುಡಿಯುವ ನೀರಿಗೆ ಕೊಳಾಯಿಗಳು ಮುನಿಸಿಕೊಂಡು
ಒಣಗಿಹೋಗುತ್ತಿರುವ ಗುಡಿಸಿಲಿನ ಹಣತೆಗಳು
ಸೋರುತ್ತಿರುವ ಆಸರೆಗೆ ಬೇಸರ!

ಮುನ್ನಡೆಯುವ ಹೆಜ್ಜೆಗಳಿಗೆ
ಕೋಪ ತೋರಿಸುವ ರಸ್ತೆಯ ಹಳ್ಳಗಳು
ಎಲ್ಲಿ ನೋಡಿದರೂ ಗೋಳು ಗೋಳಿನ ಕೂಗಾಟ
ಬೇಕಾಗಿರುವುದು ಹೊಸ ಬಾಗಿಲುಗಳು ಕಿಟಕಿಗಳು

ಈ ಕೋಣೆಗೆ ಬೀಗ ಹಾಕಿಕೊಂಡಿರುವ ಬಾಗಿಲುಗಳನ್ನು
ರಾಜಕೀಯ ವ್ಯವಸ್ಥೆಗಳು ಹಾಕಿಕೊಂಡಿರುವ ಬಾಗಿಲುಗಳನ್ನು
ಬಾಗಿಲುಗಳಿಗೆ ಹಾಕಿಕೊಂಡಿರುವ ಬೀಗಗಳನ್ನು ಒಡೆದು
ಬೆಳಕು ತೋರಿಸುವ ಹೊಸ ನಾಯಕರಿಗೆ
ಕಾಲ ಬೇಡುತ್ತಾ ನಿಂತಿದೆ

- ಶ್ರೀ ಹರಿ



20-12-2011

ದೇಶಕ್ಕೆ ದುಡಿದು ಸತ್ತು ಹೋದ ನಾಯಕರ
ಉಸಿರು ಉಸಿರಾಡುತ್ತಲೇ ಇದೆ
ಆಗುತ್ತಿರುವುದನ್ನು ನೋಡಿ ನೋಡಿ ಹರಿಯುತ್ತಿರುವ
ಕಣ್ಣೀರು ಯಾರಿಗೂ ಕಾಣದೆ ಕಣ್ಣೀರಿನ ತೊಟ್ಟುಗಳು
ಕೆಳಗೆ ಬೀಳದೆ ಕಣ್ಣಲ್ಲೇ ಬತ್ತಿಹೋಗುತ್ತಿದೆ!

ಶಪಥ ಮಾಡುವವರು ನಾನು ಸತ್ಯವನ್ನೇ ನುಡಿಯುವೆನು
ನುಡಿಯುವೆನು ಎಂದು ನುಡಿದು
ಶಪಥ ಮಾಡಿಸುವವರು ಸತ್ಯದ ಅರ್ಥ ತಿಳಿಯದ ಪುಂಡರು
ಶಪಥ ಮಾಡಿದಾಗ ದೇವರೇ ಹೆದರಿ ಓಡುವ ಘಟನೆಗಳು
ಕಾಲಕ್ಕೆ ಪ್ರಗತಿಯ ಮುಂದು ಹೋಗುವ ಹೆದರಿಕೆ!

ರಂಬೆ ಬೆಳೆಸಿದ ಮರದ ಕೊಂಬೆ ಕೊಂಬೆ ಬೆಳೆಸಿದ ಹಣ್ಣು
ಮರದ ಜೊತೆಗೆ ಅರ್ಥ ಇಲ್ಲದ ಜಗಳಗಳು
ಸೂರ್ಯನಿಗೆ ನಾಳೆ ನಾನು ದಿಗಂತದಲ್ಲಿ ಹುಟ್ಟಲೋ
ಚಂದ್ರನಿಗೆ ನಾಳೆ ಬೆಳದಿಂಗಾಳಾಗಿ ಬೆಳೆಯಲೊ
ಹಿಮಾಲಯದ ಪರ್ವತದ ಮಂಜುಗೆಡ್ಡೆ ಕರಗಲೋ

ಸಮುದ್ರದ ಅಲೆಗಳು ಅಲೆಯಾಗಿ ದಡದ ಮೇಲೆ ಸೇರಲೋ
ಉಸಿರಾಡುತ್ತಿರುವ ದೇಶ ಮಡಿದು ಹೋದ ಯೋಧರ ಉಸಿರು
ಉಸಿರಾಡಲು ಅಂಜುತ್ತಾ ಅಂಜುತ್ತಾ
ಹೆದರಿ ಹೆದರಿ ನಕ್ಷತ್ರಗಳಂತೆ ಮಿನುಗುತ್ತಿವೆ!

- ಶ್ರೀ ಹರಿ



www.sriharikhoday.com

ಮುಂದೇನು ! ಮುಂದೆ ಏನಿದೆ ?
ಮುಂದೆ ಏನಾಗಬೇಕು !
ಮುಂದೆ ನನಗೇನು ಬೇಕು ?
ಮುಂದೆ ಹೇಗೆ ನಾ ಸುಖಪಡಬೇಕು
ಮುಂದೆ ಎನ್ನುವುದು ನಮ್ಮೆದುರಿಗೆ ಇರುವ ಬದಲು
ನಮ್ಮ ಹಿಂದೆ ನೆರಳಾಗಿ ಹಿಂದೆ ಹಿಂದೆ ಹಿಂಬಾಲಿಸುತಿದೆ !

ಬಹಳ ಮುಂದಿನ ಯೋಚನೆ ಮಾಡುವವರು
ಏನೂ ಸಾಧನೆ ಮಾಡದೆ
ತಮ್ಮ ಬುದ್ಧಿ ಮುಂದೆ ಮುಂದೆ ಯೋಚಿಸುತ್ತ
ತಮ್ಮ ಎದುರಿಗೆ ಇರುವುದರಲ್ಲಿ ಬೆರೆಯದೆ
ಯಾರ ಜೊತೆಗೂ ಬೆರೆಯದೆ
ಸಾಧನೆಯ ತತ್ವ ಮತ್ತು ವಿಧಾನಗಳನ್ನು ತಿಳಿಯರು !

ಕಾಣುವ ಕಷ್ಟಗಳಲ್ಲಿ ಬೆರೆಯೋಣ
ಎದುರು ಕಾಣುವ ಸುಖದಲ್ಲಿ ಬೆರೆಯೋಣ
ಬೇರೆಯವರ ಸುಖ-ಕಷ್ಟಗಳಲ್ಲಿ ನಾವು ಬೆರೆತು
ನಮ್ಮ ಕಷ್ಟ-ಸುಖಗಳು ಒಂದಾಗಿ ಕಾಣುತ
ತೃಪ್ತಿಯ ಜೀವನ ಅನುಭವಿಸುವವರಿಗೆ
ಭವಿಷ್ಯ ಅವರಿಗಾಗಿ ಶ್ರಮಿಸುತ್ತದೆ !

- ಶ್ರೀ ಹರಿ





ಜೊತೆಗಿರುವುದು ಕಳೆದು ಹೋದರೆ
ಒಂದು ಅಂಗ ಕಳೆದು ಹೋದಂತೆ
ಜೊತೆಗಿರುವವರು ಕಳೆದು ಹೋದರೆ
ನಮ್ಮ ಜೀವನಕ್ಕೆ ಹೊಸ ಭಾರ ಬಂದಂತೆ !

ನಮಗೆ ಒಳ್ಳೆಯದನ್ನು ಬಯಸುವವರು
ಜೊತೆ ಜೊತೆ ಜೀವಿಸುವವರು ಕಳೆದು ಹೋದರೆ
ನೀರಿಲ್ಲದೆ ಬೆಳೆ ಬೆಳೆಯುವಂತೆ
ನೀರಿಲ್ಲದೆ ಅಡುಗೆ ಮಾಡುವಂತೆ !

www.sriharikhoday.com

ಕಾಲ ಸಮಯ ಜೊತೆ ಇರುವಾಗ
ಈ ಕ್ಷಣದಲ್ಲಿ ಏನು ಒಳ್ಳೆಯದು ಮಾಡೋಣ
ಮುಂಬರುವ ಘಳಿಗೆಗಳಲ್ಲಿ ಏನು ಒಳ್ಳೆಯದು ಮಾಡೋಣ
ಒಳ್ಳೆಯದು ಮಾಡುವುದು ನಮ್ಮ ಬಾಗಿಲಿಗೆ ಬರದಿದ್ದರೆ
ನಾವು ಹುಡುಕಿಕೊಂಡು ಹೋಗಿ ಹುಡುಕಿ ಒಳ್ಳೆಯದ ಮಾಡೋಣ !

ಒಳ್ಳೆಯದು ಮಾಡುವುದು ಮಾಡುವವರ ಜೊತೆ ಸೇರಿ
ಒಳ್ಳೆಯದನ್ನೇ ಯೋಚಿಸಿ
ಒಳ್ಳೆಯ ಕ್ರಿಯೆಗಳ ಜೊತೆಗೆ ಜೊತೆಯಾಗುವುದು
ಪ್ರಕೃತಿಯ ಉಸಿರು ನಿಟ್ಟುಸುರಿನ ಜೊತೆಗಿರುವಂತೆ !

- ಶ್ರೀ ಹರಿ

26-12-2011

ಅವನಂತೆ  ಓಡುವ ಕಾಲ
ನಮ್ಮಂತೆ ಓಡುತ್ತದೆಯೇ ?
ಅವನಂತೆ ಆಡುವ ಕಾಲ
ನಮ್ಮಂತೆ ಆಡುವುದೇ ?

ಮಹಾನ್ ಶಕ್ತಿಯ ಧೂತನಾದ ಕಾಲ
ದೇವರು ನುಡಿಯುವಂತೆ ಕೇಳುವುದು
ಕಾಲದ  ಜೊತೆ ಗೆಳೆತನವಿಲ್ಲದ ನಾವುಗಳು
ಕಾಲ ನಮ್ಮ ಮೇಲೆ ಸೇಡು ತೀರಿಸಿಕೊಳ್ಳುವುದು !

ನಮ್ಮ ಜೊತೆಗಿರುವುದರ ಜೊತೆ ಪ್ರೀತಿಸದೆ
ಜೊತೆ ಬರದ್ದನ್ನು ಪ್ರೀತಿಯಿಂದ ಅಪೇಕ್ಷಿಸಿ
ದೊರೆಯದಿದ್ದರೆ ಅಸೂಯೆ ಪಡುತ್ತ
ಕಾಲದ ಸುಳಿಗೆ ಸಿಲುಕಿ ಇದ್ದವರು  ಕಾಣದಾಗುವರು !

ಬೆಳಕಿಗೆ ಪ್ರೀತಿಸೋಣ, ಗಾಳಿಗೆ ಅಪ್ಪಿ ಪ್ರೀತಿಸೋಣ
ಭೂಮಿ ತಾಯಿಗೆ ನಮಿಸಿ ಹೆಜ್ಜೆ ಹಾಕೋಣ
ದಿಗಂತಗಳಿಗೆ ಪ್ರೀತಿಯ ನೋಟದಿಂದ ನೋಡೋಣ
ಸೂರ್ಯ-ಚಂದ್ರರಿಗೆ ನಮಿಸಿ

ಹಗಲು ರಾತ್ರಿಗಳ ಜೊತೆ ಸ್ನೇಹ ಬೆಳೆಸಿ
ಜವಾಬ್ದಾರಿ ಜೀವನವನ್ನು ನಡೆಸೋಣ !

- ಶ್ರೀ ಹರಿ



27-12-2011

ನೆರಳಿಗೆ ತನ್ನ ನೆರಳು ತಿಳಿಯದು
ಕಾಲಕ್ಕೆ  ತನ್ನ ಹೆಜ್ಜೆಗಳು ತಿಳಿಯದು
ಪ್ರೀತಿಗೆ ಕೊನೆ ಮೊದಲುಗಳು ತಿಳಿಯದು
ದ್ವೇಷಕ್ಕೆ  ಮೊದಲೇ ಕೊನೆಗಾಣುವುದು!

ಪ್ರೀತಿಯಿಂದ ಜೀವಿಸಿದರೆ ಕೊನೆ  ಮೊದಲಿಲ್ಲದ ಕಾಲ
ಜೊತೆಯಾಗಿ ಸಂತಸ  ಹಂತ ಹಂತದಲ್ಲಿ ನೀಡುತ್ತ
ನಮ್ಮ  ಸಂತಸದಲ್ಲಿ ಕಾಲವೇ ಬೆರೆತು
ಉಲ್ಲಾಸದ ಅಲೆ ಮನದಲ್ಲೇ ಆಡಿಸುತ್ತಾ!

ನಮ್ಮನ್ನು ಜಿಗುಟಿದರೆ  ಪ್ರೀತಿಯ ಹೊಸ ರಸ ಚೆಲ್ಲೋಣ
ನಮ್ಮನ್ನು ದಿಟ್ಟಿಸಿ ನೋಡಿದರೆ  ಜೇನಿನಂತೆ ಸವಿ ಮಾತನ್ನಾಡೋಣ
ನಮ್ಮ ಜೊತೆ ಕಾದಾಡಿದರೆ ಪ್ರೀತಿಯ ತೆರೆದ ಕಣ್ಣೋಟದಿಂದ
ತೆರೆದ ಮನದಿಂದ ತೆರೆದ ತೋಳುಗಳಿಂದ ಅಪ್ಪಿಕೊಂಡು
ಕಾಲದ ಜೊತೆಗೆ  ಎತ್ತಿ ಕುಣಿಯೋಣ !

- ಶ್ರೀ ಹರಿ



www.sriharikhoday.com

28-12-2011

ಬುಗುರಿಯಂತೆ ತಿರುಗುತ್ತಿರುವ ನಾ
ರಾತ್ರಿಯಲ್ಲಿ ಕತ್ತಲೆ ಹಗಲಲ್ಲಿ ಎಚ್ಚರ
ದಿಗಂತಗಳನ್ನು ಹುಡುಕುತ್ತಾ ಸಿಗದೆ
ಕೆಲವೇ ದಿವಸದಲ್ಲಿ ಮುನ್ನೂರವತ್ತೈದು ಸುತ್ತು ಆಗುತ್ತಿದೆ!

ನನ್ನ ಮೇಲೆ ಅಮೃತ ಬೆಳೆಯುವ ಇಚ್ಚೆಗೆ ಬದಲು
ನನ್ನ ಮೇಲೆ ವಿಷ ಬೆಳೆಯುತ್ತಿರುವುದು ನನಗೆ ಕಷ್ಟವಾಗಿ
ಪರಿಹಾರ ತಿಳಿಯದೆ ಕಾಲಕ್ಕೆ ಮೊರೆ ಹೊಕ್ಕಿರುವೆ!

ಯಾವುದೋ ಒತ್ತಡದಿಂದ ಮೂಕನಾಗಿರುವ ಈ ಮಾನವ
ಅವನಿಗೆ ಎಚ್ಚರಿಸಲು ನನ್ನ ಪ್ರಯತ್ನ ವಿಫಲವಾಗಿ
ಹಾದಿ ಇಲ್ಲದ ದಿಗಂತಗಳು ದೊರಕದ ಕಷ್ಟಗಳಿಗೆ
ಉತ್ತರವಿಲ್ಲದೆ ಮೂಕನಾಗಿ ಸುತ್ತು ಹಾಕುತ್ತಿರುವೆ!

ಬರುವ ವರುಷಗಳ ತಿರುಗಾಟದಲ್ಲಿ ವಿಷವೆಲ್ಲಾ ಅಮೃತವಾಗಲಿ
ಮೂರ್ಚೆ ಹೋಗಿರುವ ಜನಗಳ ಮನಸ್ಸು ಎಚ್ಚರವಾಗಲಿ
ಹೊಸ ವರುಷವು ಆರೋಗ್ಯ ಸಂಪತ್ತು
ಹೊಸದುಮಾಡುವ ಯೋಗ್ಯತೆ

ಎಲ್ಲರ ಮನದಲ್ಲಿ ಪ್ರೀತಿಯೆಂಬ ಬೀಜ ಬಿತ್ತಿ
ತೃಪ್ತಿಯ ಬೆಳೆ ಎಲ್ಲರ ಪಾಲಿಗೂ ಬರಲಿ!

- ಶ್ರೀ ಹರಿ





www.sriharikhoday.com


30-12-2011

ಎದುರಿಗೆ ಕಾಣದ ಮಹಾನ್‌ಶಕ್ತಿಯೇ
ಹಂತ ಹಂತದಲ್ಲಿ ಜೊತೆ ಜೊತೆಯಿರುವ ಶಕ್ತಿಯೇ
ಕಾಲದ ಜೊತೆಗಿರುವ ಕಾಲದ ಗುರುವೇ
ಭೂತ ಭವಿಷ್ಯ ವರ್ತಮಾನಗಳ ಚಿಗುರಿಸಿ ಬೆಳೆಸಿ
ಸುಖ ಬೆಳೆಸುವ ಕಾಮಧೇನುವೇ!

ಬೇಡಿಕೆಗಳು ಕೇಳದೆ ಬೇಡಿಕೆಗಳ ಫಲ ನೀಡುವ
ಕರುನಾಳು ಆದ ವಿಘ್ನೇಶ್ವರನೇ
ಬರುವ ವರುಷಗಳಲ್ಲಿ ಈ ಜಗತ್ತಿಗೆ
ಬಣ್ಣ ಬಣ್ಣಗಳ ಸುಖ ನೀಡಿ
ಪ್ರತಿಯೊಬ್ಬರ ಜೀವನದಲ್ಲಿ ನಿನ್ನ ಆಶೀರ್ವಾದದ
ಕಾಮನಬಿಲ್ಲಿನ ಹಂದರದಲ್ಲಿ

ನಮಗೆ ನಮ್ಮ ಗೆಳೆಯರಿಗೆ
ನಮ್ಮ ಸಮಾಜಕ್ಕೆ ನಮ್ಮ ದೇಶಕ್ಕೆ
ನಮ್ಮ ದೇಶದಲ್ಲಿ ಬೇಡಲೂ ತಿಳಿಯದ
ಪ್ರಜೆಗಳ ಕಷ್ಟಗಳ ನಿವಾರಿಸಿ
ಕರುಣೆಯಿಂದ ನಿನ್ನ ನೆರಳಲ್ಲಿ ನಮ್ಮೆಲ್ಲರ ಮನದಲ್ಲಿ
ಸುಖ ಸಂತಸ ತಾಂಡವವಾಡಲಿ!

- ಶ್ರೀ ಹರಿ



31-12-2011

ಮಿಂಚುತ್ತಿರುವ ನಕ್ಷತ್ರಗಳು
ನಾಳೆ ಬರುವ ಹೊಸ ವರುಷಕ್ಕೆ
ಶುಭಾಶಯಗಳ ಕೋರುತ್ತಿರಲು
ಅತಿ ಉತ್ಸಾಹದಿಂದ ನಾಳೆ ಉದಯಿಸುವ
ಭಾಸ್ಕರನಿಗೆ ನಮಸ್ಕರಿಸೋಣ!

ಆಕಾಶಕ್ಕೆ ಮುತ್ತು ನೀಡೋಣ
ದಿಗಂತಗಳಿಗೆ ಅಪ್ಪಿಕೊಳ್ಳೋಣ
ಸಮುದ್ರದ ಅಲೆಗಳ ಜೊತೆ ಸೇರಿ
ಕುಣಿದು ಕುಪ್ಪಳಿಸೋಣ
ಧುಮುಕುತ್ತಿರುವ ಜಲಧಾರೆಯ ಕಂಡು
ಹರುಷದ ಆನಂದಬಾಷ್ಪ ಸುರಿಸೋಣ!

ಎಲ್ಲರ ಮನಸ್ಸಿನಲ್ಲಿ ದ್ವೇಷವಿಲ್ಲದೆ
ಹರುಷದ ಪ್ರೀತಿಯನ್ನು ತುಂಬಿಸೋಣ
ಈ ವರುಷ ಯಾರಿಗೂ ಯಾವುದಕ್ಕೂ ಕೊರತೆಯಿಲ್ಲದ
ತುಂಬುತನವ ಅನುಭವಿಸೋಣ
ಎಲ್ಲರ ಕಣ್ಣಲ್ಲಿ ಎಲ್ಲರ ಮನದಲ್ಲಿ
ಎಲ್ಲಾ ಕೆಲಸಗಳಲ್ಲಿ ಪ್ರಗತಿಯ
ಕನಸು ನೋಡಿ ನಲಿಯೋಣ!

- ಶ್ರೀ ಹರಿ






03-01-2012

ನಮ್ಮ ಮನದಲ್ಲಿ ಆಗುವುದು ಎಂದರೆ
ಆಗುವುದು !
ನಮ್ಮ ಮನದಲ್ಲಿ ಆಗುವುದು ಕಷ್ಟ ಎಂದರೆ
ಇಲ್ಲದ ಕಷ್ಟಗಳು ಬಂದು ಕಾಡುವುದು !

ದೂರದಿಂದ ನಮ್ಮ ಮನೆಯಲ್ಲಿ ಸುಖವಿದೆ ಎಂದರೆ
ಅಪೇಕ್ಷೆಗಳ ಮೀರಿಸುವ ಸುಖ
ಮನೆಯಲ್ಲಿ ಕಾದುಕುಳಿತಿರುವುದು
ನಮ್ಮ ಕೆಲಸ ಸರಿಯಾಗಿ ನಡೆಯುತ್ತಿದೆ ಎಂದರೆ
ನಮ್ಮ ಬೇಡಿಕೆಗಳ ಮೇಲೆ ಹೆಚ್ಚಿನ ಕೆಲಸ ಮುಗಿದು ಬರುವುದು!

ನಮ್ಮಲ್ಲಿ ನಮಗೆ ನಂಬಿಕೆ ಇಲ್ಲದ್ದಲ್ಲಿ
ಯಾವ ಕೆಲಸವೂ ಮುಗಿಸಲಾಗದೆ
ಸಂಕೋಚದಿಂದ ಕಷ್ಟಗಳನ್ನು ನಾವೇ ಚಿತ್ರಿಸಿ
ಚಿತ್ರಿಸಿದ ಚಿತ್ರವನ್ನು ನಾವೇ ನೋಡಿ
ಭಯಪಡುತ್ತಿದ್ದೇವೆ !

- ಶ್ರೀ ಹರಿ





www.sriharikhoday.com

04-01-2012

ಕತ್ತಲಿನ ರಾತ್ರಿಗೆ ಕೊನೆಯಂಟು
ಬೆತ್ತಲೆಯ ದ್ವೇಷಕ್ಕೆ ಕೊನೆಯುಂಟು
ಕಾಲದ ಜೊತೆ ಜೊತೆಗಿರುವ ಪ್ರೀತಿಗೆ
ಕೊನೆಯೇ ಕಾಣಿಸದು !

ಪ್ರಕೃತಿಯ ಪ್ರೀತಿ ವ್ಯಕ್ತಪಡಿಸುವುದು ಹಸಿರು ಬಣ್ಣವಾದರೆ
ಪ್ರಕೃತಿಯ ಪ್ರೀತಿಯ ಸಂತಸದ ವ್ಯಕ್ತಪಡಿಸುವುದು
ಬಣ್ಣ ಬಣ್ಣಗಳ ಹೂವುಗಳಾದರೆ, ಪ್ರಕೃತಿ ಜೊತೆಯಿರುವ ಪ್ರೀತಿ
ಬಯಸುವುದಕ್ಕಿಂತ ಹೆಚ್ಚಿನ ಫಲಗಳನಗನು ನೀಡುವುದು!

ನಾನಾ ರೀತಿಯ ಪ್ರೀತಿಗೆ ಬುನಾದಿ ಪ್ರೀತಿಯೇ ಆದರೆ
ಮನಸ್ಸಿನ ನಾನಾ ಭಾವನೆಗಳಿಗೆ ಪ್ರೀತಿಯೇ ಆಸರೆಯಾದರೆ
ಜೀವನದಲ್ಲಿ ಹೆಜ್ಜೆ ಹಜ್ಜೆಗಳು ಪ್ರೀತಿಯಿಂದ ಹಾಕಿದರೆ
ಶರೀರ ಪಡೆದಿರುವ ಈ ಜೀವ ಅದು ಕಾಣುವುದರ ಜೊತೆ

ಪ್ರೀತಿಯ ಬೆಳಕಿನ ಹಣತೆಗಳನ್ನು ಬೆಳೆಸುವುದೇ
ಪ್ರೀತಿಯ ರೀತಿಯಾದರೆ, ಪ್ರೀತಿಯನ್ನು ವ್ಯಕ್ತಪಡಿಸಿ
ಎಲ್ಲರ ಮನದಲ್ಲಿ ಹರಸುವುದೇ ಜೀವನವಾದರೆ
ಕಾಲದ ಜೊತೆ ಪ್ರೀತಿಯಿಂದ ಬಾಳುವುದೇ ಜೀವನ !

- ಶ್ರೀ ಹರಿ






07-01-2012

ಒಳ್ಳೆಯದು ಮಾಡಲು ಬಿಳಿ ಬಣ್ಣದ ಪ್ರೀತಿ ಸಾಧನೆಯಾದರೆ
ಕೆಟ್ಟದು ಮಾಡಲು ಕಪ್ಪು ಬಣ್ಣದ ದ್ವೇಷ ಸಾಧನೆಯಾದರೆ
ನಾವು ಒಳ್ಳೆಯದ ಮಾಡಲು ಜನುಮ ಕೊಟ್ಟ ಭೂತಾಯಿಗೆ
ನಮ್ಮ ಸಮಯವನ್ನು ನೀಡಿದರೆ
ಕೆಟ್ಟದ್ದನ್ನು ಮಾಡಲು ಯಾರ ಸಹಾಯ ಬೇಡಿ, ಜನುಮ ನೀಡಿದ
ತಾಯಿಯಾದ ಭೂ ತಾಯಿಗೆ ಕೆಟ್ಟದ್ದು ಮಾಡೋಣ?

ಬಿಳಿಯ ಬಣ್ಣವಾದ ಬೆಳಕು ದೇವರು ನೀಡಿದ ವರವಾದರೆ
ಕಪ್ಪು ಬಣ್ಣ ದ್ವೇಷ ರೂಪವಿಲ್ಲದ ಕತ್ತಲೆಯಾದರೆ
ವಿಮರ್ಶೆಗೆ ಸಿಗದ ಮನೋಪ್ರಚೋದನೆ
ದ್ವೇಶದ ಕಪ್ಪು ಬಣ್ಣವಾದರೆ
ಯಾವ ಅರ್ಥಗಳಿಗೂ ಸಿಗದ ಕಪ್ಪು ದ್ವೇಷ
ತನಗೇ ತಿಳಿಯದೆ ಕತತಲಲ್ಲಿ ಕಾಣೆಯಾಗುವುದು!

ಬಣ್ಣ ಬಣ್ಣಗಳಿಂದ ತುಂಬಿಕೊಂಡಿರುವ ಬಿಳಿ ಬಣ್ಣವಾದ ಪ್ರೀತಿ
ಬಣ್ಣ ಬಣ್ಣಗಳೇ ತುಂಬಿಕೊಂಡಿರುವ ಪ್ರೀತಿಯ ಬೆಳಕು
ಬೆಳಕು ಪ್ರಕೃತಿಯ ಬೇಡಿಕೆಯಾದರೆ
ಬಣ್ಣ ಬಣ್ಣಗಳ ಜೊತೆ ನಮ್ಮ ಕಣ್ಣಿಗೆ ಕಂಡ ಕಷ್ಟಗಳಲ್ಲಿ
ಕಷ್ಟಗಳ ಜೊತೆ ಬೆರೆತು ಎಲ್ಲರ ಕಷ್ಟಗಳನ್ನು ಕರಿಗಿಸೋಣ !

- ಶ್ರೀ ಹರಿ





www.sriharikhoday.com

09-01-2012

ಹಳೆಯದನ್ನು ಮರೆತು
ಹಳೆಯ ಕಷ್ಟಗಳನ್ನು ಮರೆತು
ಕಾಲದ ನೇಗಿಲನ್ನು ಹಿಡಿದು
ಹೊಸ ವರುಷದ ಹರುಷದ ಬೆಳೆಯನ್ನು ಬೆಳೆಯೋಣ!

ಹೆಜ್ಜೆ ಹೆಜ್ಜೆಗೆ ಹಿಂದೆ ನೋಡದೆ
ಮುಂದಿನ ಪ್ರಗತಿಯ ದೆಸೆ ಹುಡುಕುತ್ತ
ಬೇಸರ ಮೈಭಾರವನ್ನು ಇಳಿಸಿಕೊಂಡು
ಎಳೆದುಕೊಂಡು ಹೋಗುತ್ತಿರುವ ಕಾಲದ ನೇಗಿಲಿಗೆ
ಏಳಿಗೆ ವರಮಾನದ ದೆಸೆ ತೋರಿಸೋಣ!

ನೆನಪುಗಳ ಹಳೆ ಕನ್ನಡಿಯನ್ನು ಬಿಟ್ಟು
ಹೊಸ ಭಾವನೆಯಿಂದ ಹೊಸ ಕನ್ನಡಿಯನ್ನು ನೋಡುತ್ತ
ಎಲ್ಲರೂ ಮೆಚ್ಚುವ ತರಹದಲ್ಲಿ
ಭಾವನೆಗಳನ್ನು ಸಜ್ಜು ಮಾಡಿ
ಕಾಲಕ್ಕೆ ಜಯ ಘೋಷಿಸಿ ಕಾಲಕ್ಕೆ ಹರುಷ ತಂದರೆ

ನಮ್ಮ ಮನದ ನಮ್ಮ ಮನೆಯ ಮೂಲೆ ಮೂಲೆಗಳಲ್ಲಿ
ಪ್ರೀತಿ ಸಂತಸ ಹುಡುಕದೇ ಕೈಗೆ ಸಿಗುವುದು!

- ಶ್ರೀ ಹರಿ



12-01-2011

ಕಷ್ಟಪಡುವವರ ಕಷ್ಟದಲ್ಲಿ ಬೆರೆತು
ಅವರಿಗೆ ಸುಖ ಬಂದರೆ
ಅದನ್ನು ಕಂಡು ನೋಡಿ ನಲಿಯುವುದೇ ಆನಂದ!

ನಾನು ನನ್ನದು ಎಂದು ಸುಖದಲ್ಲಿ ಮರೆತು
ದೇವರಲ್ಲಿ ಬೆರೆತರೆ
ದೇವರಲ್ಲಿ ಬೆರೆತ ಆ ಸುಖ ಅನುಭವಿಸಿ
ಆನಂದದಿಂದ ಮರೆತರೆ ಅದು ಬ್ರಹ್ಮಾನಂದ!

ಸುಖ ಆನಂದ ಜೊತೆ ಜೊತೆ ಬೆರೆತು ಜೀವಿಸುತ್ತಿದ್ದರೆ
ಕಷ್ಟ ನಷ್ಟಗಳು ಬೇರೆ ಬೇರೆ ಹಾದಿಗಳಾದರೆ
ಕಷ್ಟದಲ್ಲಿ ಸುಖದ ನಷ್ಟ ಅನುಭವಿಸಿ
ದೇವರ ಆನಂದದಲ್ಲಿ ಬೆರೆತು

ಕಷ್ಟಗಳನ್ನು ದೇವರಿಗೆ ಅರ್ಪಿಸಿ ಸುಖಪಟ್ಟರೆ
ಸುಖದ ನೆರಳಾಗಿ ಆನಂದ
ಜೊತೆ ಜೊತೆ ಹಿಂಬಾಲಿಸುವುದು!

- ಶ್ರೀ ಹರಿ



www.sriharikhoday.com

13-01-2012

ಕೇಳಿಸಲಾಗದ ನಿಶ್ಶಬ್ದವೇ
ನೋಡಲಾಗದ ಬೆಳಕೇ
ಹಿಡಿಯಲಾಗದ ಆಕಾಶವೇ
ಗಣಿಕೆ ಮೀರಿಸಿರುವ ಕಾಲವೇ
ಉದ್ದ ಅಗಲ ಎತ್ತರಗಳ ಮೀರಿಸುವ ಪ್ರಮಾಣವೇ

ಭೂತ ಭವಿಷ್ಯ ವರ್ತಮಾನಗಳ ಬುನಾದಿಯೇ
ಎಲ್ಲಾ ಬಣ್ಣಗಳ ಮೂಲ ಬಿಂಬವೇ
ಸೃಷ್ಟಿ-ಲಯಗಳ ತೂಗಾಟದ ಆಟದ ಪಟುವೇ
ವರ್ಣಿಸಲಾಗದ ಕ್ಷಣ ಕ್ಷಣದಲ್ಲಿ ಬದಲಿಸುತ್ತಿರುವ
ಕ್ರಿಯೆಗಳ ಮರ್ಮಗಳಿಗೆ ನಮಿಸುವುದು ಬಿಟ್ಟರೆ
ಅರಿವಿಗೇ ತಿಳಿಯದ ಸತ್ಯವೇ

ಶೂನ್ಯ ಆಳದಲ್ಲಿ ಕುಳಿತು
ನಿನ್ನನ್ನೇ ಮರೆತಿರುವ ಪ್ರೀತಿಯ ಸಮುದ್ರವೇ
ನಿನದೆ ಕ್ರಿಯಗಳಿಂದಾದ ನಾನು ಎಂಬ ಶರೀರದಿಂದ
ನಮೋ ನಮಃ ನಮೋ ನಮಃ ನಮೋ ನಮಃ

- ಶ್ರೀ ಹರಿ





www.sriharikhoday.com

13-01-2011


ಏನೂ ಕಾಣದೇ ಇರುವುದು
ವಿಶ್ವದ ಅತಿ ಹೆಚ್ಚಿನ ನೋಟ
ಏನೂ ತಿಳಿಯದೇ ಇರುವುದು
ವಿಶ್ವದ ಅತಿಯಾದ ಹೆಚ್ಚಿನ ಅನುಭವ!

ಸತ್ಯದ ಹಾದಿಗಳಿಗೆ
ಕೋಟೆ ಬಾಗಿಲುಗಳು ಇಲ್ಲದೇ ಇರುವಾಗ
ಬಾಗಿಲಿಲ್ಲದ ಪ್ರವೇಶಗಳು
ನಮ್ರತೆಯಿಂದ ಕರೆಯುತ್ತಿರಲು

ಸಮುದ್ರದ ದಡಗಳು ಸಮುದ್ರವನ್ನು ದಾಟದೇ
ಸಿಗುವ ದಡಗಳು ಹತ್ತಿರವಿರಲು
ಒಳಗೂ ಹೊರಗೂ ಏನೂ ಇರದೆ
ಯಾವ ರೀತಿಯಲ್ಲಿಯೂ ಅಡಚಣೆಗಳಿಲ್ಲದೆ

ಶೂನ್ಯವನ್ನು ಉಪಯೋಗಿಸಿ
ಆಳವಾದ ಖಾಲಿ ಆಕಾಶಕ್ಕೆ
ಆ ಖಾಲಿ ಆಕಾಶದಲ್ಲಿ ನೆಂಟನ್ನು ಬೆಳಸಿಕೊಂಡರೆ
ಎಲ್ಲರ ಜೊತೆಗೆ ನೆಂಟೋ ನೆಂಟು
ಪರಸ್ಪರ ಪ್ರೀತಿಗಳ ಗಂಟೋ ಗಂಟು!

- ಶ್ರೀ ಹರಿ



17-01-2011

ಸುಖದಲ್ಲಿ ಕಷ್ಟಗಳ ನೆರಳು ನೋಡು
ಕಷ್ಟಗಳಲ್ಲಿ ಸುಖದ ನೆರಳು ನೋಡು
ಸುಖ ಪಡುವ ಅಪೇಕ್ಷೆಯಲ್ಲಿದ್ದರೆ
ಸುಖದ ಜೊತೆಗೆ ಕಷ್ಟವೂ ಬರುತ್ತದೆ!

ನಿರಂತರ ಸುಖದ ಇಚ್ಛೆಗಳೇ
ಬರುವ ಸುಖದ ಫಲಗಳ ಕಾರಣವಾದರೆ
ದೊರಕಿದ ಮೇಲೆ ತಾನು ತನ್ನದು ಎಂಬ ವಿಷವ ಬೆರೆಸದೆ
ಸುಖದ ನೆರಳನ್ನು ಅನುಭವಿಸಿದರೆ
ಹೆಚ್ಚು ದಿನಗಳ ಕಾಲ ಸುಖವು ಜೊತೆಗಿರುವುದು!

ಸುಖದ ಜೊತೆಗೆ ಕಷ್ಟಗಳ ಹೋಲಿಕೆ ಮರೆತರೆ
ಸುಖದ ಜೊತೆಗೆ ತನ್ನನ್ನು ಮರೆತು ಸಂತಸ ಬೆರೆಸುತ್ತಿದ್ದರೆ
ಜೀವನದ ಹಾದಿಯಲ್ಲಿ ಮುಳ್ಳುಗಳು ಇದ್ದು
ಚುಚ್ಚದೇ ಹೂವಿನ ಮೇಲೆ ನಡೆದಂತೆ
ಜೀವನದ ಸುಖದ ಹೆಜ್ಜೆಗಳು
ಹಾಕುತ್ತಾ ಹಾಕುತ್ತಾ ಮುನ್ನಡೆಯುವುದು!

- ಶ್ರೀ ಹರಿ



18-01-2012

ಕವಿ ಏನೋ ಬರೆಯಲು ತನ್ನ ಸ್ಮೃತಿಪಟಲದಲ್ಲಿ
ಬರೆಯಲು ಏನೂ ಕಾಣದಿದ್ದರೆ
ಯಾರಿಗೂ ಕಾಣದ ಹೊಸ ವಿಷಯ
ಕವಿಯ ಅರಿವಿಗೆ ಬರುತ್ತಿದೆ ಎಂಬ ಸೂಚನೆ!

ತಾನೂ ಕಷ್ಟ ಸುಖಗಳಲ್ಲಿ ಬಣ್ಣಗಳಲ್ಲಿ ಈಜಾಡುತ್ತಿರುವ ಕವಿ
ಅಂಟಿಕೊಂಡಿರುವ ಬಣ್ಣಗಳನ್ನು ತೊಳೆಯಲು ಇಚ್ಛಿಸದೆ
ಅಂಟಿಕೊಂಡಿರುವ ಬಣ್ಣಗಳನ್ನು ನೋಡುತ್ತಾ ನೋಡುತ್ತಾ
ಹಿಗ್ಗುತ್ತಾ ಹಿಗ್ಗುತ್ತಾ ತನ್ನಲ್ಲಿ ತಾನೇ ನಗುತ್ತಿದ್ದರೆ
ಕವಿಯ ಬರವಣಿಗೆಗೆ ಹೊಸ ವಿಷಯ ದೊರಕಿದಂತಿದೆ!

ದೊರಕಿದ ಹೊಸ ವಿಷಯಗಳ ಗಣಿಯಲ್ಲಿ
ಅಗೆಯುತ ಅಗೆಯುತ ತಾನೂ ಅನುಭವಿಸುವ ಸುಖ
ತಾನೊಬ್ಬನೇ ಬಚ್ಚಿಡದೆ ಧರೆಗೆ ತಿಳಿಸಲು ಆಸೆ ಪಡುತ್ತ
ಹುಚ್ಚನಂತೆ ನಗುತ್ತಾ ನಗುತ್ತಾ ಬರೆದ ಬರವಣಿಗೆಯಲ್ಲಿ
ಈ ಧರೆ ಅರಿಯಲು ತಿಳಿಯದೆ ಲೆಕ್ಕಿಸದೇ ಇದ್ದರೆ

ಕಾಲ ಓದಿ ತಿಳಿದುಕೊಂಡು ಸಂತಸದಿಂದ ಸುಖಪಡೆದು
ಕವಿಯ ಬರವಣಿಗೆಯನ್ನು ಲೆಕ್ಕಿಸದ ಈ ಧರೆಗೆ
ಕಾಲ ನೋಡಿ ನಗುತ್ತಿದೆ

- ಶ್ರೀ ಹರಿ



www.sriharikhoday.com

19-01-2012

ಕೆಲಸವಿಲ್ಲದವರು  ನಿಂದಿಸುವರು
ನಿಂದನೆಯನ್ನು ತಿಳಿಯದವರಿಗೆ
ಕೆಲಸ ಮುಗಿಸಲು ಕಾಲವು ಸಾಲದೆ
ನಿಶಬ್ಧದಲ್ಲಿ ಕೆಲಸದಲ್ಲಿ ನಿರತರಾಗಿರುವರು!

ಪ್ರಗತಿಯ ಹಾದಿ ತಿಳಿಯದ ನಿಂದನೆ
ಸತ್ಯದಿಂದ ದೂರವಿರುವ ನಿಂದನೆ
ತಾನು ಇಲ್ಲದ ನಾಲಿಗೆ ನುಡಿಯುವ ನಿಂದನೆ
ತನ್ನ ತನ್ನ ಒಡನಾಡಿಗಳ ಜೀವವನ್ನು ಹಾಳುಗೆಡವುದು !

ನಿಶ್ಶಬ್ದ ದಲ್ಲಿರುವ ಶಕ್ತಿಯ  ಆಕಾಶಕ್ಕೆ ಹೋಲಿಸಲೆ
ನಿಶ್ಶಬ್ದ ದಲ್ಲಿ ಪ್ರಕಾಶಿಸುವ ಸೂರ್ಯನಿಗೆ ಏನೆಂದು ವರ್ಣಿಸಲಾಗದೆ
ನಿಶ್ಶಬ್ದ ದ  ಮನೋ ಏಕಾಂತದ ಅನುಭವ
ದೇವರ ಅನುಭವ ಎಂದು ವರ್ಣಿಸಲೇ

ಸತ್ಯದ  ಆಳದಲ್ಲಿರುವ ನಿಶ್ಶಬ್ದ
ಜಗತ್ತಿಗೆ ಬೇಕಾದಾಗ ಹೊರಬಂದು
ನಿಶ್ಶಬ್ದವನ್ನು ಬೇದಿಸಿ
ಸತ್ಯವು ರಣಭೇರಿಯನ್ನು ಮೊಳಗಿಸುತ್ತದೆ !

- ಶ್ರೀ ಹರಿ





www.sriharikhoday.com


21-01-2012

ಪ್ರೀತಿ ತಿಳಿಯದ ಪ್ರೇಮಗಳು, ಪ್ರೀತಿಯಿಲ್ಲದ ಪ್ರೇಮಿಗಳು
ಆಸೆ ತಿಳಿಯದ ದುರಾಸೆಗಳು
ಸಂಬಂಧದ ಅರ್ಥ ತಿಳಿಯದ ನೆಂಟುಗಳು
ರಾಗ ತಿಳಿಯದ ಹಾಡುಗಳು
ಸತ್ಯದ ಅರ್ಥ ತಿಳಿಯದ ದ್ವೇಷಗಳು
ಕೆಲಸ ತಿಳಿಯದ ಯಜಮಾನರುಗಳು
ಈ ಭೂಲೋಕಕ್ಕೆ ನಷ್ಟವನ್ನು ನೀಡುತ್ತಿರುವರು !

ಸಮಾಜದ  ಅರ್ಥ ತಿಳಿಯದ ಸಮಾಜ ಸೇವಕರು
ರಾಜಕೀಯ ಅರ್ಥ ತಿಳಿಯದ ರಾಜಕಾರಣಿಗಳು
ಮಕ್ಕಳನ್ನು ಸಾಕಲು ತಿಳಿಯದ ತಂದೆ-ತಾಯಿಗಳು
ಜೊತೆ ಜೊತೆ ಜೀವಿಸಲು ತೊಂದರೆ ನೀಡುತ್ತಿರುವರು !

ಆಳ ತಿಳಿಯದೆ  ಆಳದ ಅರ್ಥವನ್ನು ಹೇಳುವವರು
ಕಣ್ಣಿಂದ ನೋಡದೆ ವಿವರಣೆ ನೀಡುವವರು
ತಾನು ಹೆಸರನ್ನು ಗಳಿಸಲು ಹೋಗಿ ಬೇರೆಯವರನ್ನು ನಿಂದಿಸುವರು
ಅರ್ಥವಿಲ್ಲದ ಉಸಿರಾಟದಿಂದ ಈ ಜಗದಲ್ಲಿ ಜೀವಿಸುತ್ತಿರುವವರು
ಸೂತ್ರವಿಲ್ಲದ ಗಾಳಿಪಟಗಳು !

- ಶ್ರೀ ಹರಿ



23-01-2012

ಹೊಸತನ್ನು ಅನುಭವಿಸುವುದೇ
ಪ್ರಕೃತಿಯ ಲೀಲೆ ಮತ್ತು ನಿಯಮ
ಹೊಸದನ್ನು ಯೋಚಿಸುವುದೇ
ಪ್ರಗತಿಯ ಹಾದಿಗಳು !

ಕ್ಷಣ ಕ್ಷಣದಲ್ಲೂ ಹುಟ್ಟುತ್ತಿರುವ ಹೊಸ ಭಾವನೆಗಳು
ಹಳೆಯ ಭಾವನೆಗಳನ್ನು ಹಳತು ಮಾಡಿ
ಹೊಸ ಅನುಭವಕ್ಕೆ ಭವಿಷ್ಯ ಅದರ ಹಾಳೆಯಲ್ಲಿ
ಹೊಸದನ್ನು ಬರೆಸುತ್ತದೆ !

ಹಳೆಯದನ್ನೆಲ್ಲಾ ಮರೆತು
ಹೊಸದನ್ನು ಅನುಭವಿಸಲು
ದೇವರು ನೀಡಿರುವ ವರವನ್ನು
ಸ್ವೀಕರಿಸಿ ಯಾರಿಗೂ ತಿಳಿಯದ
ಹೊಸ ಹೊಸ ಭಾವನೆಗಳು

ಹೊಸ ಹೊಸ ಕೆಲಸಗಳಿಗೆ ಬುನಾದಿಯಗಿ
ಜೀವನದಲ್ಲಿ ಹೊಸ ಹೊಸ ಅನುಭವದ
ಚಿಗುರಿನ ಧೈರ್ಯ ತುಂಬುತ್ತಾ
ಹೊಸ ಹೊಸ ತರದ ಅಪೇಕ್ಷೆಯೇ ಜೀವನ

- ಶ್ರೀ ಹರಿ



24-01-2012

ನಮ್ಮ ಜೀವನದ ಅಂಬಿಗೆ ನಂಬಿಕೆ
ನಮ್ಮ ಭಾವನೆಗಳಿಗೆ ಸಾರಥಿ ನಂಬಿಕೆ
ನಮ್ಮ ಕಷ್ಟಗಳ ಗೆಳೆಯ ನಂಬಿಕೆ
ನಮ್ಮ ಸಾಹಸಗಳ ನಾಯಕ ನಂಬಿಕೆ !

ನಾಳೆಯ ಸೂರ್ಯೋದಯವು ಸೂರ್ಯನ ನಂಬಿಕೆ
ಉರುಳುತ್ತಿರುವ ಕಾಲಕ್ಕೆ ಭವಿಷ್ಯ ನಂಬಿಕೆ
ತಾಯಿಯ ಹೊಟ್ಟೆಯಲ್ಲಿ ಬೆಳೆಯುತ್ತಿರುವ
ಕೂಸು ತಾಯ್ತನದ ನಂಬಿಕೆ !

ಕುಂಚವಿಡಿದು ಪಟದ ಎದುರಿಗೆ
ಚಿತ್ರವ ಬಿಡಿಸುವುದು ಚಿತ್ರಗಾರನ ನಂಬಿಕೆ
ಕವನ ಬರೆಯುವ ಕವಿಗೆ
ಕವನಗಳ ಮೇಲೆ ನಂಬಿಕೆ

ನಂಬಿಕೆಯೇ ಪ್ರಕೃತಿಯ ಸೂತ್ರ
ಎಲ್ಲಾ ಸತ್ಯಗಳ ಸತ್ಯವೇ ನಂಬಿಕೆ !

- ಶ್ರೀ ಹರಿ



www.sriharikhoday.com

25-01-2012

ಒಳಗಿನ ದೀಪದಿಂದಾದ ಪ್ರಕೃತಿ
ಹೊರಗಿನ ಬೆಳಕಿನಿಂದ ಬೆಳೆಯುತತಿರುವ ಪ್ರಕೃತಿ
ಬೆಳಕು ಬ್ರಹ್ಮ ಬ್ರಹ್ಮಾಂಡಗಳನ್ನು
ಬೆಳೆಸುತ್ತಲೂ ಇದೆ ಅಳಿಸುತ್ತಲೂ ಇದೆ!

ಕ್ರಿಯೆ ಮಾಡಲಾಗದ ಆ ಬೆಳಕು
ಎಲ್ಲಾ ಕ್ರಿಯೆಗಳಿಗೆ ಮೂಲ ಬಿಂದುವಾಗಿ
ಮನಸ್ಸು - ಶರೀರ ಜ್ಞಾನದ ಬುನಾದಿಯಾಗಿ
ವಿಶ್ವವನ್ನೇ ರಂಗು ರಂಗುಗಳಾಗಿಸಿ
ಪ್ರಗತಿಯ ಬುಗುರಿಯ ಆಟವಾಡುತ್ತಿದೆ!

ಚಾಟಿ ಹಿಡಿದಿರುವ ವಿಶ್ವ ಸೂತ್ರದಾರಿಗೆ
ರೂಪವಿದೆಯೋ ಅಥವಾ ರೂಪವಿಲ್ಲದ ಶಕ್ತಿಯೋ?
ಅಥವಾ ಅವ ಬರಿ ಬೆಳಕೋ
ಅಥವಾ ಒಳ ಹೊರಗಿನ ಬೆಳಕೊ

ಶರೀರವಿಲ್ಲದ ಬೆಳಕಿನ ಇರುವಿಕೆ
ಎಲ್ಲವನ್ನು ತರಿಸಿ ದೊರಕದಿದ್ದಲ್ಲಿ ಸೃಷ್ಟಿಸಿ
ಬಣ್ಣ ಬಣ್ಣಗಳಲ್ಲಿ ಜೀವ ತುಂಬುತ್ತ
ಜೀವನವು ಕಾಣದ ಇರುವಿಕೆಯ
ಮಹಾನ್ ಶಕ್ತಿಯ ಪ್ರತಿಬಿಂಬವಾಗಿದೆ!

- ಶ್ರೀ ಹರಿ





28-1-2012


ಚಿಕ್ಕದಾದ ನಮ್ಮ ರಾತ್ರಿಗಳು
ಕೊನೆಬರದ ನಮ್ಮ ಕಥೆಗಳು
ದಾರಿ ತಪ್ಪಿಸಿಕೊಂಡಿರುವ ನಮ್ಮ ಸ್ವಪ್ನಗಳು
ಏನನ್ನೂ ಹುಡುಕಲು ತಿಳಿಯದಾಗಿದೆ!

ಸದ್ದಾಗದ ನಮ್ಮ ಕತ್ತಲಿನ ಮಾತುಗಳು
ಕತ್ತಲಲ್ಲೇ ಕಳೆದುಹೋಗಿ
ಬೆಳಕು ಹರಿಯುತ್ತಾ ಹರಿಯುತ್ತಾ
ನಮ್ಮ ಸಂಬಂಧಗಳನ್ನು
ಇಬ್ಬನಿಯಂತೆ ಕರಗಿಸಿಹೋಗಿದೆ!

ಕಾಲ ಕಟ್ಟಿಹಾಕಿದ ನಮ್ಮ ನೆಂಟಿನ ಗಂಟು
ಕಾಲವೇ ಗಂಟನ್ನು ಸಡಲಿಸಿ
ಫಲ ಮಾತ್ರ ನೀಡಿದೆ
ಕಾಲವು ಮಾಡಿದ ತಪ್ಪಿಗೆ ಮುಖ ತೋರಿಸಲಾಗದೆ
ಅಂಜಿ ಭವಿಷ್ಯದಲ್ಲಿ ಬಚ್ಚಿಟ್ಟುಕೊಂಡಿದೆ!

ಬಿಟ್ಟುಹೋಗಿರುವ ನಿನ್ನ ನೆರಳ ಜೊತೆ
ಇದ್ದು ಜೀವಿಸುವ ನಿಶ್ಶಬ್ದದಲ್ಲಿ
ಪ್ರತಿಧ್ವನಿಸುತ್ತಿರುವ ನಿನ್ನ ಬಳೆಯ ಸದ್ದು
ಫಲವಾಗಿ ನೀಡಿರುವ ಸಸಿಗೆ ಒಕ್ಕಲು ಮಾಡುತ
ನಮ್ಮಿಬ್ಬರ ಜೀವನ ಕಥಾನಾಯಕನನ್ನು ಬೆಳೆಸೋಣ!

- ಶ್ರೀ ಹರಿ





www.sriharikhoday.com

30-01-2012

ಗಾಳಿಯು ಎಲ್ಲಿಂದ ಬರುವುದೋ ತಿಳಿಯದು
ಭೂಮಿ ಎಲ್ಲಿಂದ ಬೆಳೆಯಿತೋ ತಿಳಿಯದು
ಆಕಾಶ ಎಲ್ಲಿ ಹುಟ್ಟಿ ಎಲ್ಲಿ ಕೊನೆಯಾಗುವುದೋ ತಿಳಿಯದು
ಪ್ರೀತಿಯು ಎಲ್ಲಿ ಮೊಳೆತು ಎಲ್ಲಿ ಮುಗಿಯುವುದೋ ತಿಳಿಯದು
ಕಾಲವು ಎಲ್ಲಿಂದ ಹುಟ್ಟಿ ಎಲ್ಲಿ ಕೊನೆಗೊಳ್ಳುವುದೋ ತಿಳಿಯದು !

ಕೆಲಸ ಮಾಡಲು ಇಚ್ಚಿಸುವವರಿಗೆ
ಕೆಲಸ ಮಾಡಲು ಕೊನೆಗಳು ತಿಳಿಯದು
ಚಂಚಲ ಮನಸ್ಸಿಗೆ ಕೊನೆಗಳೇ ತಿಳಿಯದು
ಚಂಚಲ ಮನಸ್ಸಿಗೆ ಮೊದಲ ನೆನಪಿಲ್ಲದೆ
ಕೊನೆಗಾಣದ ಆಸೆಗಳಿಗೆ ಆಸೆ ಪಡುತ್ತ
ಕೊನೆಯೇ ಕಾಣದ ದುಃಖವನ್ನು ಅನುಭವಿಸುವುದು!

ಕೊನೆ ಮೊದಲುಗಳ ಆಕಾಶವ ಮರೆತು
ಎದುರಿಗೆ ಇರುವವರ ಜೊತೆ ಬೆರೆತು
ತಾವೇ ಕಾರ್ಯಗಳಲ್ಲಿ ಬೆರೆತು ತನ್ನನ್ನೇ ಮರೆತು
ತಾನೇ ಕೆಲಸ ಕಾರ್ಯಗಳಾದರೆ
ಈ ಜಗತ್ತಿನ ಕೆಲಸಗಳು ಲೆಕ್ಕಕ್ಕೆ ಬರದೆ
ಹೊಸ ಕೆಲಸಗಳ ಜವಾಬ್ದಾರಿಗಳಿಗೆ ಸಂಕಲ್ಪಗಳು
ಜಾರಿ ಎದುರಿಗೆ ನಿಲ್ಲುವುವು

- ಶ್ರೀ ಹರಿ



31-01-2012

ಅಂತರಾಳದ ಮನದ
ನಿಶ್ಶಬ್ದದ ಕಣಿವೆಯಲ್ಲಿ
ಮನ ಮಾತಾಡಲು ನಾಲಿಗೆ ಇಲ್ಲದೆ
ಸಂತಸ ವ್ಯಕ್ತ ಪಡಿಸಲು ಪದಗಳಿಲ್ಲದೆ
ಅಸೂಯೆಗಳ ನೆರಳೂ ಇಲ್ಲದೆ

ತಡೆಯಲಾಗದೆ ಕುದಿಯುತ್ತಿರುವ ಹರುಷ ಆನಂದಗಳ
ಸುಖದ ಆಕಾಶದಲ್ಲಿ ನಿಂತು ಹಾರಾಡುತ್ತ
ಯಾವುದೋ ಕ್ರೀಡೆಯಲ್ಲಿ ಜಯಗಳಿಸಿರುವ
ಆನಂದ ಭಾವನೆಗಳಿಗೆ ಕೊನೆ-ಮೊದಲು ತಿಳಿಯದೆ

ಬೀಸುತ್ತಿರುವ ಮಹಾನ್ ಶಕ್ತಿಯೆಂಬ
ಗಾಳಿಯ ಎದುರಿಗೆ ನಿಂತು
ತೇಲುತ್ತಿರುವ ಭಾವನೆಗಳಿಗೆ
ಎಂದೂ ಅನುಭವಿಸದ ಭಾವನೆಗಳ ಕ್ರಿಯೆ

ಈ ವಿಶ್ವದಲ್ಲಿ ಏನನ್ನೂ ಬೇಕಾದರೂ
ನಾ ಸಾಧಿಸಬಲ್ಲೆ ಎಂಬ ಧೈರ್ಯವನ್ನು
ಶರೀರದಲ್ಲಿ ತುಂಬಿಕೊಂಡು ಆ ತುಂಬುತನ
ಹೊಸ ಹೊಸ ಕ್ರಿಯೆಗಳನ್ನು ಚಿಗುರಿಸುತ್ತಿದೆ !

- ಶ್ರೀ ಹರಿ



www.sriharikhoday.com

31-01-2012

ಅವಳು ಕೊಟ್ಟ ನೆನಪಿನ ಹೂವು
ಇಂದು ನನ್ನ ಪುಸ್ತಕದಲ್ಲಿ ದೊರಕಿದೆ !

ಅವಳ ಜೊತೆ ಮಾಡಿದ ಮಳೆರಾಯ
ಮಳೆಯಲ್ಲಿ ನೆನೆದು ನೀಡಿದ ಛತ್ರಿಯ ಆಸರೆ
ನಮ್ಮಿಬ್ಬರ ಪ್ರೀತಿ ಪ್ರೇಮಗಳ ಆಸರೆಯಾಯಿತು !

ಅವಳು ಆಕಾಶದಲ್ಲಿ ಸಿಡಿಲು ಬಡಿದಾಗಲೆಲ್ಲ
ಅವಳ ನೆನಪುಗಳು ಸಿಡಿಲಾಗಿ ಬಡಿಯುವುದು

ದೇವರನ್ನು ಪ್ರತಿಬಿಂಬಿಸುವ ಅವಳ ರೂಪ
ಲಜ್ಜೆಯ ಭಾರ ತುಂಬಿಕೊಂಡಿರುವ ಕಣ್ ರೆಪ್ಪೆಗಳು
ತುಟಿ ತುಟಿಗಳ ಅಚ್ಛಾದವು !

ಪ್ರೇಮ-ರೋಮಾಂಚನಗಳ ಜ್ವಾಲೆ ಹೆಚ್ಚುತ್ತಾ ಹೆಚ್ಚುತ್ತಾ
ಹೆಚ್ಚಿದ ಜ್ವಾಲೆ, ನಮ್ಮಿಬ್ಬರನ್ನು ದೂರ ಮಾಡಿ
ಒಬ್ಬರನ್ನೊಬ್ಬರು ಕಾಣೆಯಾಗಿರುವೆವು

ತುಕ್ಕು ಹಿಡಿಯಲಾಗದ ಅವಳ ಮೇಲಿನ ನನ್ನ ಪ್ರೇಮ
ದೊರಕದೆ ದೂರ ಹೋಗಿರುವ ಅವಳು
ಉಸಿರು ಇರುವ ತನಕ ಕೊಟ್ಟು ಹೋಗಿರುವ
ಪ್ರೀತಿಯ ಹೂವಿನ ನೆನಪು

ಮಳೆರಾಯ ಬಂದಾಗಲೆಲ್ಲ
ಸಿಡಿಲಾಗಿ ಮನಕ್ಕೆ ತಟ್ಟಿ
ದುಃಖವನ್ನು ತಿರುಗಿಸುತ್ತಿರುವುದು !

- ಶ್ರೀ ಹರಿ 



02-02-2012

ಮನಸ್ಸಿನಿಂದ ಬೇರೆಯವರಿಗೆ
ತಪ್ಪು ತಪ್ಪೆಂದು ಹೇಳುವುದು
ಮನಸ್ಸಿನ ಕನ್ನಡಿ ಪ್ರಕಾಶವಾಗಿ
ಪ್ರತಿಬಿಂಬಿಸುತ್ತಿದೆ ಎಂಬರ್ಥ !

ಅಹಂಕಾರದಿಂದ ಅಜ್ಞಾನದಿಂದ ನಮ್ಮ ಮನಸ್ಸಿನ
ಕನ್ನಡಿಯ ಪ್ರಕಾಶವನ್ನು ಮೊಟಕುಗೊಳಿಸುತ್ತಿದ್ದೇವೆ
ಮನಸ್ಸಿನ ಕನ್ನಡಿಯ ಉತ್ತರಗಳು ಮುಂದಿನ
ಪ್ರಗತಿಯ ಮುನ್ನಡೆಯ ನಡಿಗೆಗೆ ದಾರಿದೀಪವಾಗಿ

ಭಯ ಭ್ರಾಂತಿಗಳನ್ನು ಕರಗಿಸಿ
ಧೈರ್ಯದಿಂದ ಕಾರ್ಯ ರೂಪುಗೊಳ್ಳಲು
ಮನಸ್ಸಿನ ಪ್ರಕಾಶವೇ ಕಾರಣವಾಗುವುದು !

ಸತ್ಯದ ಅರಿವಿಗೆ ಆ ಮಹಾನ್ ಶಕ್ತಿಯ
ಪ್ರಕಾಶವನ್ನು ನೋಡಲು
ಮನಸ್ಸಿನ ಕನ್ನಡಿಯೆಂಬ ಪ್ರಕಾಶವನ್ನು
ಎಚ್ಚರಿಸುವುದೇ ಮಾನವನ ಕರ್ತವ್ಯ !

ಯಾವ ಖರ್ಚಿಲ್ಲದೇ ಕೊನೆಯಿರದ
ಮನಸ್ಸಿನ ಪ್ರಕಾಶಕ್ಕೆ ಉಪಯೋಗಿಸಲು
ಮನಸ್ಸು ಏಕೆ ಹೆದರುವುದು ಎಂಬುದೇ
ಜಗತ್ತಿನ ಒಂದು ಲೋಪ ಮಾನವನ ವಿಸ್ಮಯ !

- ಶ್ರೀ ಹರಿ 



www.sriharikhoday.com

07-02-2012

ಒಳ್ಳೆಯ ಮನೋ ಅನಿಸಿಕೆಗಳು
ಪ್ರಗತಿ ಸುಖ ಸಂತಸದ
ಉಡುಗೊರೆಗಳನ್ನು ನೇಯುತ್ತಿದ್ದರೆ

ಒಳ್ಳೆಯದು ಹೆಚ್ಚಲಿ ಹೆಚ್ಚಲಿ ಎಂಬ
ಮನದ ಆಳದ ಕೂಗುಗಳು
ಶ್ರೇಯಸ್ಸಿನ ಜೈಕಾರಗಳು
ತೋರಣಗಳಾಗಿ ಬರಮಾಡಿಕೊಂಡರೆ

ತನ್ನ ಜೀವನವನ್ನು ಮರೆಸಿ
ಸಮಾಜದ ತೇರಿನ ಜೊತೆ
ಎಳೆದುಕೊಂಡು ಹೋಗುವುದೇ
ಈ ಸತ್ಯ ಜೀವನದ ಸ್ವಾರಸ್ಯವಾದರೆ
ಉಸುರು ಉಸಿರಿನಿಂದ ಒಳ್ಳೆಯ
ಅನಿಸಿಕೆಗಳನ್ನು ಬೆಳೆಸೋಣ !

ಮನದ ಆಳದಿಂದ ಕೆಟ್ಟ ಅನಿಸಿಕೆಗಳನ್ನು
ಹೊರಚೆಲ್ಲಿ
ಹೊಸ ಹಗುರವಾದ ಅನುಭವಗಳನ್ನು ಅನುಭವಿಸುತ್ತ
ಜೀವನದ ರಾಜ ರಸ್ತೆಯಲ್ಲಿ ತಲೆಯೆತ್ತಿ
ಬಾಳಿ ಬದುಕಿ ಜೀವಿಸುತ್ತ

ಆನಂದದ ತೇಗನ್ನು ತೇಗಿ
ಜೊತೆ ಜೊತೆಯಲ್ಲಿ ತೋಳುಗಳ ಜೊತೆಯಾಗಿಸುತ್ತ
ಜೊತೆ ಜೊತೆ ಹೆಜ್ಜೆ ಹಾಕುತ್ತ
ಮುನ್ನಡೆಯುವುದೇ ಜೀವನ !

- ಶ್ರೀ ಹರಿ 



www.sriharikhoday.com

10-02-2012

ಸುಖ ನೀಡುವ ಅರಮನೆ ಒಳ್ಳೆ ಮನೋರಾಜ್ಯದಲ್ಲಿದ್ದರೆ
ದುಃಖ ನೀಡುವ ಸೆರೆಮನೆ ಅದೇ ಮನೋರಾಜ್ಯದಲ್ಲಿದ್ದರೆ
ಅರಮನೆಯ ಸುಖಕ್ಕೆ ಸೆರಮನೆಯ ದುಃಖಕ್ಕೆ
ನಮ್ಮ ಮನಸ್ಸಿನ ನೆನಪುಗಳೇ ಕಾರಣವಾಗಿಹುದು

ನಮ್ಮ ಕೈ ಬೆರಳುಗಳಂತಿರುವ ನಮ್ಮ ನೆನಪುಗಳು
ನಮ್ಮ ಇಚ್ಛೆಯಂತೆ ಬೆರಳುಗಳು ನಡೆಯದೇ ಇದ್ದರೆ
ನಮ್ಮ ಇಚ್ಛೆಯಂತೆ ಹತೋಟಿಯಲ್ಲಿ
ನಡೆದುಕೊಳ್ಳುವ ರೀತಿ ಅದರ ವರ್ತನೆ
ಸೂಜಿ ತೆಗೆದುಕೊಂಡು ನಮ್ಮ ಕಣ್ಣುಗಳನ್ನೇ ಚುಚ್ಚುತ್ತಿವೆ !

ನಮ್ಮ ಬೆರಳುಗಳು ಸೂಜಿಯಿಂದ ಬಟ್ಟೆ ಹೊಲಿಯುವಂತೆ
ನಮ್ಮ ಬೆರಳುಗಳಿಂದ ಚಿತ್ರವನ್ನು ಬಿಡಿಸುವಂತೆ
ನಮ್ಮ ಬೆರಳುಗಳಿಂದ ಕವನದ ಮನೋ ಕಲ್ಪನೆಯನ್ನು
ಬರೆದು ಅರಳಿಸುವಂತೆ
ನಮ್ಮ ನೆನಪುಗಳನ್ನು ಸರಿಯಾಗಿ ಉಪಯೋಗ ಮಾಡೋಣ!

ಗಡಿಗಳಿಲ್ಲದ ಮನೋ ಸಾಮ್ರಾಜ್ಯವನ್ನು ಕಟ್ಟೋಣ
ಇರುವ ನೆನಪುಗಳಿಗೆ ಮುಂಬರುವ ನೆನಪುಗಳಿಗೆ
ಸಂತಸದ ಸುಖ ನೀಡಿ ಆ ಸಂತಸ
ಹೊಸ ಸಾಧನೆಗಳ ಹುರುಪು ತುಂಬಿಕೊಳ್ಳುತ್ತ

ಇರುವ ಬ್ರಹ್ಮಾಂಡವೇ ಸಾಲದೆ ಹೊಸ ಹೊಸ
ಅನುಭವಗಳಲ್ಲಿ ಹೊಸತನ್ನು ಅನುಭವಿಸಿ
ಹಗಲು ಇರುಳು ನಾವು ನಮ್ಮ ಮನಸ್ಸಿನ
ನೆನಪುಗಳ ಜೊತೆ ಜೊತೆ ದುಡಿಯೋಣ !



- ಶ್ರೀ ಹರಿ

11-02-2012

ನಿನ್ನ ಮೇಲೆ ಸುಂದರವಾದ ಕವನವನ್ನು ಬರೆಯುವೆ
ನಿನ್ನ ಕಣ್ಣಿನ ಪ್ರೇಮಸಾಗರ
ನಾಳೆಯನ್ನು ಬರೆಸುತ್ತಿದೆ !

ನಿನ್ನ ನಡಿಗೆ ನನ್ನನ್ನು ಜೊತೆ ಕರೆದಂತೆ ಕೇಳಿಸಿದ ಕೂಗು
ನಿನ್ನ ಪ್ರೀತಿ ಸಾಗರದ ಆಳವ ಕಂಡು
ನಾಳೆಯನ್ನು ಬರೆಸುತ್ತಿದೆ !

ನೀ ಹೀಗೊಮ್ಮೆ ಹಾಗೊಮ್ಮೆ ಹರಿಸಿದ ಕಣ್ಣೋಟದ ಆಕರ್ಷಣೆ
ನನ್ನ ಅಂತರಾಳದ ಪ್ರೀತಿಯ ಪ್ರಚೋದಿಸಿ
ನಾಳೆಯನ್ನು ಬರೆಸುತ್ತಿದೆ !

ನಿನ್ನ ಕೇಶರಾಶಿಯ ಗುಂಗುರು ಗಾಳಿಗೆ ಚದುರಿರುವುದು
ನಿನ್ನ ಚಂದ್ರನ ಮುಖದ ಕಾಂತಿಯ ರೂಪ
ನಾಳೆಯನ್ನು ಬರೆಸುತ್ತಿದೆ !

ನಿನ್ನ ಜೊತೆ ಜೊತೆ ಒಡನಾಟ ಬೇರ್ಪಡಿಸಲಾಗದ ಸಂಬಂಧ
ನಿನ್ನ ಪ್ರೀತಿಯಲ್ಲಿ ಬೆರೆತು ಬೆಸೆದುಕೊಂಡಿಹೆ ನಾ
ನಾಳೆಯನ್ನು ಬರೆಸುತ್ತಿದೆ !

ನೂರು ಜನ್ಮದ ಸಂಬಂಧದ ಪ್ರೀತಿಯ ದರ್ಶನ
ಭೂತ ಭವಿಷ್ಯ ವರ್ತಮಾನದಲಿ
ನಾಚುತ ನಾಚುತ ಬೆಳೆಯುತ್ತಿರುವ ಸಂಬಂಧ
ನಾಳೆಯನ್ನು ಬರೆಸುತ್ತಿದೆ !

- ಶ್ರೀ ಹರಿ





13-02-2012


ಬಿರುಕುಬಿಡುತ್ತಿರುವ ಆಕಾಶ
ಒಣಗಿಹೋಗುತ್ತಿರುವ ಸಮುದ್ರ
ಬಿರುಕುಗಳು ಹೆಚ್ಚಾಗುತ್ತಿರುವ ಮಾನವ ಸಮಾಜ
ಸುಖ ಭವಿಷ್ಯಕ್ಕೆ ಅಡ್ಡಗೋಡೆಗಳನ್ನು ಕಟ್ಟುತ್ತಿರುವ ಅಜ್ಞಾನ !

ಬಿರುಕಿರುವ ಪ್ರೀತಿ - ಪ್ರೇಮ
ನಂಬಿಕೆಯೆಂಬ ಪದಗಳು ಕರಗಿ ಹೋಗಿ
ಜೀವರಸ ಕೊಡುವ ಭೂತಾಯಿಯ
ಮಡಿಲಲ್ಲಿ ನೀರೇ ಕಾಣದೆ

ಕನಿಕರವಿಲ್ಲದೆ ಹರಿದಾಡುತ್ತಿರುವ ಮೋಡಗಳು
ನಾನು ನನ್ನದು ಎಂಬುದರ
ಚಕ್ರಗಳಿಲ್ಲದ ಮೆರವಣಿಗೆಗೆ
ಜೀವಿಸಲು ಸತ್ವಕ್ಕೆ ಉಸಿರೇ ಇಲ್ಲದೆ

ಡಾಂಭಿಕ ಜೀವನದ ಬಣ್ಣಗಳು
ದೇವರನ್ನು ಮರೆಸಿ ತಾಯ್ತನವನ್ನು ಮರೆಸಿ
ಆಧಾರವಿಲ್ಲದ ಪ್ರಗತಿಯ ಭಾವಣೆಗಳ ಆಸರೆಯಲ್ಲಿ
ಹೆದರಿ ಹೆದರಿ ಜೀವಿಸುತ್ತಿದ್ದಾನೆ ಈಗ ಈ ಮಾನವ !

- ಶ್ರೀ ಹರಿ





www.sriharikhoday.com

14-02-2012

ವಿಶ್ವದಲ್ಲಿ ಪ್ರೀತಿ -ಪ್ರೇಮ ಹುಟ್ಟಿದ್ದು ಹೇಗೆ ?
ನನ್ನದಾಗಬೇಕೆಂಬ ಬಯಕೆ ಹುಟ್ಟಿದ್ದು ಹೇಗೆ ?
ನನ್ನವರಾದ ಮೇಲೆ ನನದಾಗಿ ಉಳಿಯಬೇಕೆಂಬ
ಆಸೆ ಪ್ರೇಮ ಹುಟ್ಟಿದ್ದು ಹೇಗೆ ?

ಹಸಿರು ಸೂರ್ಯನನ್ನು ಪ್ರೀತಿಸುವಂತೆ
ಕತ್ತಲು ಬೆಳಕನ್ನು ಪ್ರೀತಿಸುವಂತೆ
ಹೆತ್ತ ಕರುಳು ಮಗುವನ್ನು ಪ್ರೀತಿಸುವಂತೆ
ಅಖಂಡದಿಂದ ಖಂಡ ಖಂಡಗಳು ಬೆಳೆದಾಗ
ಬೇರೆಯಾಗಿರುವ ಖಂಡ ಖಂಡಗಳನ್ನು
ಜೊತೆ ಜೋಡಿಸುವ ಬಯಕೆ
ವಿಶ್ವದ ಪ್ರೀತಿ-ಪ್ರೇಮದ ಹುಟ್ಟು ಗುಣಗಳು!

ಅಖಂಡದಿಂದಾದ ಗಂಡು ಹೆಣ್ಣುಗಳು
ಸತ್ವದ ಪೂರ್ಣದಿಂದ ಬೇರೆ ಬೇರೆ ಇದ್ದರೂ
ಬೇರೆ ಬೇರೆಯಾಗಿರುವುದು
ತಮ್ಮನ್ನು ತಾವುಗಳು ಮರೆಯುವ ಸಮಯಗಳು
ಪ್ರೀತಿ ಪ್ರೇಮಗಳು ಒಂದಾಗುವ ಸಮಯಗಳು
ಹೊಸ ಜನುಮಕ್ಕೆ ಕಾರಣವಾದರೆ
ದಿನವೂ ಬೆಳೆಯುತ್ತಿರುವ ಬ್ರಹ್ಮಾಂಡದ ಬೆಳವಣಿಗೆಗೆ
ಪ್ರೀತಿ-ಪ್ರೇಮ ಅವಶ್ಯ ಜೀವಧಾತು ಆಗಿರುವುದು

ಮಹಾನ್ ಶಕ್ತಿ ಬ್ರಹ್ಮಾಂಡಕ್ಕೆ ನೀಡಿರುವ
ಕೊಡುಗೆ ಎಂದರೆ ಪ್ರೀತಿ ಮತ್ತು ಪ್ರೇಮ

- ಶ್ರೀಹರಿ





www.sriharikhoday.com

15-02-2012


ನಂಬಿಕೆ ಇಲ್ಲದ ಸಮುದ್ರದ ನದಿ ದಡಗಳು
ಮೋಡಗಳ ಮೇಲೆ ನಂಬಿಕೆ ಇಲ್ಲದೆ ಬೆಂದು ಹೋಗುತ್ತಿರುವ ಭೂಮಿ
ತಂದೆ ತಾಯಿಗಳ ನಂಬಿಕೆ ಕಳೆದುಕೊಂಡಿರುವ ಮಕ್ಕಳು
ತಾಯಿ-ತಂದೆಯ ಮಮತೆಯನ್ನು ಕಳೆದುಕೊಂಡಿರುವ ಅನಾಥ ಮಕ್ಕಳು
ನಂಬಿಕೆಯೇ ಇಂದು, ಮುಂದೆ ಕಾಲು ಹಾಕಲು ಹಜ್ಜೆಗಳೇ ಅಂಜುತ್ತಿವೆ!

ದೇವರನ್ನು ಪ್ರತಿನಿಧಿಸಿದ ಗುರುಗಳಲ್ಲಿ ಶಿಷ್ಯನಿಗೇ ನಂಬಿಕೆಯಿಲ್ಲ
ತಾವೇ ಆರಿಸಿದ ರಾಜಕಾರಣಿಗಳ ಮೇಲೆ ನಂಬಿಕೆ ಇಲ್ಲವೇ ಇಲ್ಲ
ನಂಬಿಕೆಯ ಆಧಾರ ಕಳೆದುಕೊಳ್ಳುತ್ತಿರುವ ದಿನಗಳಲ್ಲಿ
ನಮ್ಮ ಉಸಿರಿನ ಮೇಲೆ ನಮಗೆ ನಂಬಿಕೆಯೇ ಇಲ್ಲವಾಗುತ್ತಿದೆ !

ಜೀವನದಲ್ಲಿ ಹಾಸು ಹೊಕ್ಕಾಗಿರುವ ನಂಬಿಕೆ
ಬೆಟ್ಟದ ಕಣಿವೆಯಲ್ಲಿ ಕಾಮನಬಿಲ್ಲು ಕಟ್ಟಿಕೊಳ್ಳುವ ನಂಬಿಕೆ
ಗೆಳೆಯರ - ಗೆಳತಿಯರ ಆಲಿಂಗನದಲ್ಲಿರುವ ನಂಬಿಕೆ
ಅಮರ ಪ್ರೀತಿ-ಪ್ರೇಮಗಳಿಗೆ ಬೇಕಾಗಿರುವ ನಂಬಿಕೆ

ಮಾನವ ನಂಬಿಕೆಯನ್ನು ತನ್ನ ದಿನಚರಿಯಲ್ಲಿ ಅಳವಡಿಸಿಕೊಂಡರೆ
ಕಾಲಚಕ್ರದ ಜೊತೆಗೆ ಜೀವನ ಸರಾಗವಾಗಿ ಹರಿದು ಹೋಗುವುದು !

- ಶ್ರೀ ಹರಿ



20-02-2012

ಸುಖಕ್ಕೆ ಕಷ್ಟಗಳು ಫಲವಾದರೆ
ಕಷ್ಟಗಳಿಗೆ ಅಲಕ್ಷ ಕಾರಣವಾದರೆ
ಸುಖ-ದುಃಖಗಳನ್ನು ಏಕಕಾಲದಲ್ಲಿ ನಾವು ಅನುಭವಿಸಿದರೆ
ಜೀವನದಲ್ಲಿ ನಮ್ಮ ಹೆಜ್ಜೆಗಳು
ಹೊಸ ಕೆಲಸವನ್ನು ಹುಡುಕುವುದು !

ಬರಬಹುದಾದ ಕಷ್ಟಗಳಿಗೆ ಲೆಕ್ಕಿಸದೇ ಹೆದರದೇ
ಬರಬಹುದಾದ ಸುಖಗಳನ್ನು ಎಚ್ಚರದಿಂದ ಸ್ವೀಕರಿಸಿ
ಬೇರೆಯವರಿಗೆ ಕಷ್ಟಗಳನ್ನು ಎಚ್ಚರದಿಂದ ಸ್ವೀಕರಿಸಿ
ಬೇರೆಯವರಿಗೆ ಕಷ್ಟಗಳನ್ನು ಕೊಡದೆ
ಬೇರೆಯವರಿಗೆ ನಾವುಗಳು ಸುಖ ನೀಡುತ್ತಿದ್ದರೆ
ಸುಖಗಳು ಮುಂದಾಗಿ ಕಷ್ಟಗಳು
ಸುಖದ ಹಿಂದೆ ಬಚ್ಚಿಕೊಂಡಿರುತ್ತದೆ !

ಕಷ್ಟಗಳಿಲ್ಲದೆ ಸುಖದಿಂದ ಉಸಿರಾಡುವುದು ಪ್ರಕೃತಿಯ ಧರ್ಮವಾದರೆ
ನಾವುಗಳು ನಮ್ಮ ಕಷ್ಟಗಳಿಗೆ ಬೇರೆಯವರನ್ನು ನಿಂದಿಸದೆ
ನಮ್ಮ ಸುಖದಲ್ಲಿ ಬೇರೆಯವರನ್ನು ಭಾಗಿಯಾಗಿಸುವುದು
ನಮ್ಮ ಗುಣವಾದರೆ
ಎಂದೆಂದಿಗೂ ನಮ್ಮ ಸುಖಗಳು ಹಿಂದೆ ಕಷ್ಟಗಳನ್ನು ಬಚ್ಚಿಟ್ಟುಕೊಂಡು

ನಮ್ಮ ಸುಖದ ಅನುಭವಗಳಿಗೆ ಕಷ್ಟಗಳೇ ಕೊಂಡಾಡಿ
ಸಂತಸ ಉಕ್ಕಿ ಹರಿಯುವಂತೆ
ಕಷ್ಟಗಳು ಬೇರೆಯವರನ್ನು ಪ್ರಚೋದಿಸಿ
ಸುಖದ ಮಾತುಗಳಲ್ಲಿ ಕಷ್ಟಗಳು
ಸುಖದಲ್ಲೇ ನಮ್ಮನ್ನು ಮರೆಸಿ ಮೆರೆಸುವುದು !

- ಶ್ರೀ ಹರಿ 



www.sriharikhoday.com


21-02-2012

ಜೊತೆಗಿಲ್ಲದ ಜೀವನ ಜೀವನವೇ ಅಲ್ಲ
ಜೊತೆಗಿರುವವರ ಸುಖ ನಾವು ಬಯಸಿದರೆ
ಪ್ರಕೃತಿಯೂ ನಮ್ಮ ಜೊತೆ ಸೇರೆ
ಅತಿಯಾದ ಹೆಚ್ಚಿನ ಆಸಕ್ತಿಯಿಂದ
ನಮ್ಮನ್ನು ಪ್ರಗತಿಯತ್ತ ಸಾಗಿಸಿ
ಕಾರ್ಯಸಿದ್ಧಿಗಳ ಕೊಡುಗೆ ಬೇಡದೆ ನೀಡುವುದು !

ಕನ್ನಡಿಯಿದ್ದರೆ ನಮ್ಮ ರೂಪದ ಪ್ರತಿಬಿಂಬ ನೀಡಬಹುದು
ಕನ್ನಡಿಯಿಲ್ಲದೆ ನಾವು ಹೇಗೆ ಇದ್ದರೂ ನಮ್ಮ ಇರುವಿಕೆ ತಿಳಿಯದು
ಜೊತೆಗಿರುವವರೇ ನಮ್ಮ ಕನ್ನಡಿಯೆಂದು
ಅವರು ಹೇಳುವ ಮಾತುಗಳಲ್ಲಿ
ನಮ್ಮ ಸತ್ಯದ ರೂಪ ಮನಸ್ಸು ನೋಡಿದರೆ
ಎಲ್ಲಾ ನಮ್ಮ ಕನಸುಗಳಲ್ಲಿ ಯಶಸ್ಸು ತುಂಬಿ ಹೊಳೆಯುವುದು !

ಯಶಸ್ಸು ಬೇಡದೆ ಇರುವವರು ಮರುಭೂಮಿಯೇ ಸರಿ
ಇದ್ದ ಹಾಗೆ ಇದ್ದು ಹೋಗಿ ಬಿಡೋಣ ಎನ್ನುವರು ತಿಪ್ಪೆಗುಂಡಿಯೇ ಸರಿ
ಉಸಿರಾಡುವ ಈ ಶರೀರ ಜೊತೆಗಿರುವವರೆಗೂ
ಉಸಿರು ಉಸಿರುಗಳಲ್ಲಿ ಪ್ರಗತಿಯ ಸುವಾಸನೆಯನ್ನು ತುಂಬುತ
ತನಗೆ ಮಾತ್ರವಲ್ಲದೆ ಬೇರೆಯವರಿಗೊಬ್ಬರಿಗಾದರೂ
ಜೊತೆ ಸಹಾಯ ಮಾಡಿ ಪ್ರಕೃತಿ ಪುರುಷನಿಗೆ ನಾವೆಲ್ಲ
ಪ್ರಗತಿಯ ಕಿರೀಟಧಾರಣೆ ಮಾಡೋಣ !

- ಶ್ರೀ ಹರಿ



22-02-2012

ಸ್ವಪ್ನಗಳಿಲ್ಲದೆ ಸುಖದ ನಿದ್ದೆಯ ಆಕಾಶದಿಂದ
ಬೆಳಕಿನ ಪ್ರಭೆಯ ಕಾರಣದಿಂದ ಎಚ್ಚರವಾದರೆ
ಆ ದಿನದಲ್ಲಿ ಹೊಸ ಸೂರ್ಯ ಉದಯವಾದಂತೆ
ಯಾರನ್ನೂ ದ್ವೇಷಿಸದೆ ಸುಖದ ನಿದ್ದೆ ಪಡೆದರೆ
ನಾಳೆ ಉದಯವಾಗುವ ಸೂರ್ಯನಿಗೆ
ನಾವು ಚೈತನ್ಯವನ್ನು ನೀಡಿದ ಂತೆ!

ಯಾರ ಹೆದರಿಕೆಯೂ ಇಲ್ಲದೆ ಎಲ್ಲರ ಜೊತೆ ಬೆರೆತರೆ
ನಕ್ಷತ್ರಗಳಿಗೆ ಮಿನುಗುವ ಶಕ್ತಿ ನಾವು ನೀಡಿ
ಎಲ್ಲರಿಗೂ ಒಳ್ಳೆಯದನ್ನು ಮಾಡಬೇಕೆಂಬ ಆಸೆ
ದಿಗಂತದಲ್ಲಿ ಬೆಟ್ಟದ ಕಣಿವೆಯ ಮಧ್ಯದಲ್ಲಿ
ಕಾಮನ ಬಿಲ್ಲಿಗೆ ನಾವು ಬಣ್ಣ ನೀಡುವಂತೆ !

ದಿನಚರಿಯಲ್ಲಿ ಆಗು ಹೋಗುಗಳ ಕವನ ಬರೆಯಬೇಕೆಂಬ ಆಸೆ
ನಾವು ಊಟ ಮಾಡುವ ನಾಲಿಗೆಗೆ
ರುಚಿಯನ್ನು ಮತ್ತು ಸುಖದ ತೃಪ್ತಿ ನೀಡುತ್ತಾ
ಕೊನೆಗಾಣದ ಕವಿಯ ಕಲ್ಪನೆಗೆ ಸುಖ ಕಾಣದೆ
ಏನೂ ಬರೆಯದ ಖಾಲಿ ಕಾಗದದ ಕವಿಯು ನೋಡುತ್ತಿದ್ದರೆ
ಪದಗಳು ಜೋಡಣೆಗೆ ಕಾದು ಸಾಲು ನಿಂತಿರುವುದು!

ಕವಿ ತಾನೊಬ್ಬನೇ ಎಲ್ಲಾ ಬಣ್ಣಗಳಾಗಿ
ತಾನೊಬ್ಬನೇ ಎಲ್ಲಾ ಶಬ್ದಗಳಾಗಿ
ತಾನೊಬ್ಬನೇ ಎಲ್ಲಾ ರೀತಿಯ ಜೀವನದ ಸುಖದ ಹಾದಿಯಾಗಿ
ತಾನೊಬ್ಬನೇ ದೊಡ್ಡ ಕನ್ನಡಿಯಾಗಿ ವಿಶ್ವವನ್ನೇ ಪ್ರತಿಬಿಂಬಿಸುತ
ಕನ್ನಡಿಯಲ್ಲಿರುವ ಸತ್ಯದಲ್ಲಿ ಕವಿಯು
ಬೆರೆತು ತಾನು ಕಳೆದುಹೋಗಿರುವನು !

- ಶ್ರೀ ಹರಿ 



www.sriharikhoday.com


23-02-2012

ಹೂವನ್ನು ದೇವರು ಬೆಳೆದು ಕೊಟ್ಟರೆ
ಮಾನವ ಹಾರ ತಾನು ಮಾಡಿದೆನೆಂದು ಜಂಭದಿಂದ ಮೆರೆಯುವನು !
ದೇವರು ಕಾಳು ಬೆಳೆಸಿಕೊಟ್ಟರೆ ತಾನು ಅಡುಗೆ ಮಾಡಿದವನೆಂದು
ಅಹಂಕಾರದಿಂದ ತಿಂದು ತೇಗುವನು !

ದೇವರು ಮಣ್ಣನ್ನು ಈ ಜಗದಲ್ಲಿ ಬೆಳೆಸಿದರೆ
ಕುಂಬಾರನು ನಾನು ಮಡಿಕೆ ಮಾಡಿದೆನೆಂದು ಬಿಂಕದಿಂದ
ಮಾತನಾಡುವನು !
ದೇವರು ರೂಪ ಕೊಟ್ಟು ಸುಂದರಿಯನ್ನು ಸೃಷ್ಟಿಸಿದರೆ
ಅವಳು ನನ್ನವಳೆಂದು ಜಂಭದಿಂದ ಮೆರೆಯುವನು !

ಹತ್ತಿರ ಇದ್ದು ದೇವರನ್ನೇ ಗುರುತಿಸದೆ
ಹೊರಗಣ್ಣು ಒಳಗಣ್ಣು ಮುಚ್ಚಿಕೊಂಡು
ಭ್ರಮೆಯಿಂದ ಹೆಜ್ಜೆ ಹಾಕುತ್ತ ನಡೆಯುತ್ತಿರುವ ಮಾನವ
ತಾನು ಏನು ಮಾಡುತ್ತಿರುವನೆಂಬ ಅರಿವಿಲ್ಲದೆ
ಬೀದಿನಾಯಿಯ ಹಾಗೆ ಹೊಸ ಹೊಸದನ್ನು ಹುಡುಕುತ್ತ
ತನ್ನ ಹೊಟ್ಟೆಪಾಡನ್ನು ಮಾತ್ರ ಗಮನಿಸುತಿರುವನು !

ತನ್ನ ಜೀವನಕ್ಕೆ ಸಹಪಾಠಿಯಾಗಿ ಹೆಣ್ಣು ರೂಪದಲ್ಲಿರುವ ದೇವರಿಗೆ
ಜೊತೆ ಮಾತನಾಡುವ ದೇವರಿಗೆ ಕಷ್ಟದಲ್ಲಿ ಸಂತಸ ನೀಡುವ ದೇವರಿಗೆ
ಸರಿ ರೀತಿಯಲ್ಲಿ ಪ್ರೀತಿಸುವುದು ತಿಳಿಯದೆ
ನಾನು ತಾನು ಎಂಬ ಅರ್ಥವಿಲ್ಲದ ಪ್ರಜ್ಞೆಯಲ್ಲಿ
ತಾನೇ ತನ್ನನ್ನು ಕಳೆದುಕೊಂಡಿರುವನು



ಮಾತನಾಡುವ ದೇವರನ್ನು ಪ್ರೀತಿಸೋಣ
ತನ್ನ ಜೀವನವನ್ನೇ ನಮಗಾಗಿ ಅರ್ಪಿಸುವ
ದೇವರ ರೂಪವಾದ ನಮ್ಮ ಜೀವನದ ದೇವತೆಗೆ ಪ್ರೀತಿಯಿಂದ
ಆರಾಧಿಸಿ
ಅವಳು ನೀಡಿರುವ ಸುಖದ ಸವಿ ನೆನಪುಗಳನ್ನು ಮನದಲ್ಲೇ
ಮೆಲುಕುಹಾಕುತ್ತ
ಜೀವನ ಹರಿದಂತೆ ದೇವರ ಜೊತೆ ಹರಿದಾಡಿ
ನಿತ್ಯ ಸತ್ಯ ದರ್ಶನದಿಂದ ನಮ್ಮ ಜೀವನದಲ್ಲಿ ಸಂತಸವನ್ನು
ಹಂಚಿಕೊಂಡು ಹೆಚ್ಚಿಸಿಕೊಳ್ಳೋಣ

- ಶ್ರೀ ಹರಿ





24-02-2012

ಚತುರರಾದ ಬಣ್ಣಗಳೇ
ಸಾವು ನೋವು ತಿಳಿಯದ ಬಣ್ಣಗಳೇ
ಆದಿ ಕೊನೆಯಿಲ್ಲದ ಬಣ್ಣಗಳೇ
ವಿಶ್ವವನ್ನೇ ಬೆರೆಗಾಗಿಸುತ್ತಿರುವ ಬಣ್ಣಗಳೇ
ವಿಶ್ವವನ್ನು ನೋಡಿ ನೀ ಬೆಳೆಯುತ್ತಿರುವೆಯಾ ಅಥವಾ
ವಿಶ್ವವೇ ಸಾಲದೆ ಹೊಸ ವಿಶ್ವ ಬೆಳೆಸಲು
ಇಚ್ಛೆಯುಳ್ಳ ತ್ರಿಕಾಲಜ್ಞಾನಿಗಳೇ

ಏಳು ಅಕ್ಷರದ ಸ್ವರ ಸಂಗೀತ ದ್ವನಿಗೊಳ್ಳುವಂತೆ
ಏಳು ಬಣ್ಣಗಳು ಸದ್ದಿಲ್ಲದೆ ಮಿನುಗಿ
ಪ್ರಕೃತಿ ಬೆಳೆಸುತ್ತಿರುವ ಕಾಲಾತೀತ
ಕಲ್ಪನೆಗೆ ಸಿಗದ ಸ್ಫಟಿಕ ಸ್ವರೂಪವುಳ್ಳ
ಏಳು ಅಣ್ಣ ತಮ್ಮಂದಿರೇ
ತಮ್ಮ ಬಣ್ಣಗಳಿಂದ ಬಿಳಿ ಬಣ್ಣವನ್ನು
ಸೂರ್ಯನಲ್ಲಿ ಅಡುಗೆ ಮಾಡಿ ಮಾಡಿದ ಅಡುಗೆಯನ್ನು
ಬೆಳೆಯುತ್ತಿರುವ ವಿಶ್ವಕ್ಕೆ ಉಣಿಸುತ್ತಿರುವಿರಾ !

ವಿಶ್ವದ ವಿಸ್ಮಯವೇ ಈ ದಿನ ಇಂದು
ನಿಮ್ಮನ್ನು ನಾ ನೆನೆಸುತ್ತಿರುವುದು
ಜನ್ಮ ಕೊಟ್ಟ ನನ್ನ ತಂದೆ-ತಾಯಿಯರ ನೆನೆಸಿದಂತೆ
ನಿನ್ನ ಬಣ್ಣಗಳಿಂದ ನನ್ನ ಸ್ಮೃತಿಪಟಲದಲ್ಲಿ
ವಿಶ್ವವೇ ಬೆರಗಾಗಿಸುವ ಮನೋಸಾಹಸದ
ಕಲ್ಪನಾಶಕ್ತಿಯನ್ನು ನನಗೆ ಆಶೀರ್ವದಿಸಿ
ನೀ ಮಿನುಗಿಸುತ್ತಿರುವ ಈ ಶರೀರದಿಂದ
ವಿಶ್ವದ ಎಲ್ಲಾ ಕಷ್ಟಗಳಿಗೆ ಉತ್ತರ ನೀಡುವಂತಹ
ಉತ್ತರವನ್ನು ನನ್ನಿಂದ ಪ್ರತಿಬಿಂಬಿಸಿ ಹೇ ಬಣ್ಣಗಳೇ!



- ಶ್ರೀ ಹರಿ



www.sriharikhoday.com

25-02-2012

ಮಳೆ ಸುರಿಸಲು ಹಣ ಕೇಳದ ಮಳೆರಾಯ
ತನ್ನ ಆಶೀರ್ವಾದಕೆಗೆ ಹಣ ಕೇಳದ
ರಾಯರ ರಾಯ ದೇವರಾಯ
ನದಿಯ ನೀರನ್ನು ಸಾಲವಾಗಿ ಸ್ವೀಕರಿಸದ ಸಮುದ್ರರಾಯ
ನಾವುಗಳು ಏಕೆ ಒಳ್ಳೆಯ ಕ್ರಿಯೆಗಳಿಗೆ
ಹಣದ ರೂಪವಾಗಿ ಅಪೇಕ್ಷಿಸುವೆವು ?

ಒಂದು ಹಣತೆ ದೀಪ ಉರಿಸಲು ಎಣ್ಣೆಗೆ ಹಣಬೇಕು
ಕೈಯ್ಯಲ್ಲಿರುವ ದೀವಟಿಕೆಯನ್ನು ಬೆಳಗಿಸಲು ಹಣ ಬೇಕು
ಜಗಕೆಲ್ಲಾ ಬೆಳಕು ನೀಡುತ್ತಿರುವ ಸೂರ್ಯರಾಯ
ಹಣವನ್ನೇಕೆ ಕೇಳಲಿಲ್ಲ ?

ತೆಗೆದುಕೊಂಡಿರುವ ಬೆಳಕಿಗೆ ಹಣಕೊಡುವ ಚಿಂತೆ ನಮಗಿಲ್ಲ
ಹಾಗೆಯೇ ನಾವುಗಳು ಹಣವನ್ನು ಬೇಡದೆ
ಪ್ರೀತಿಯಿಂದ ನಮ್ಮ ಕ್ರಿಯೆಗಳ ಸ್ಪಂದಿಸಿದರೆ
ನಾವು ಬೇರೆಯವರ ಪ್ರೀತಿಗೆ ಪಾತ್ರರಾಗಿ
ಪ್ರಕೃತಿಯ ಜೊತೆ ಪಾತ್ರಿಗಳಾದರೆ
ನಾವು ಬೇಡುವ ಎಲ್ಲಾ ಪ್ರಕೃತಿಯ ಜೊತೆಗೆ ಸ್ಪಂದಿಸುತ್ತದೆ !

ನಾವು ನಗುವುದು ಬೇರೆಯವರಿಗೆ ಕೊಡುವ ಸಾಲವಾಗದೆ
ಪ್ರೀತಿ ಕೊಂಡುಕೊಳ್ಳಲು ಅಪೇಕ್ಷೆಗಳ ಹಿನ್ನೆಲೆಯಲ್ಲದೆ
ನಾನು ಕೇಳದೆ ನಮ್ಮ ಜೀವನದ ಚಕ್ರವನ್ನು
ತಿರುಗಿಸುತ್ತಿರುವ ಪ್ರಕೃತಿಯಂತೆ
ಪ್ರಕೃತಿಯ ಜೊತೆ ಜೊತೆಗೆ ಭಾಗಿಗಳಾಗಿ
ದೊರಕಿರುವ ವರದಾನಗಳನ್ನು ಆದಷ್ಟೂ ಹಂಚಿಕೊಂಡು
ಜೀವಿಸುವುದೇ ಜೀವನ !

- ಶ್ರೀ ಹರಿ 



www.sriharikhoday.com

26-2-2012

ಸಮಾಜದ ಸುಖ ಬಯಸುವವರಿಗೆ
ಇರುವ ಸೋಮಾರಿತನವು ಕರಗಿ ಹೋಗುವುದು
ಸಮಾಜದ ಯಶಸ್ಸು ಬಯಸುವವರಿಗೆ
ಸಮಯವಿಲ್ಲದಷ್ಟು ಕೆಲಸಗಳು ಸಾಲು ಸಾಲಾಗಿ ನಿಂತು
ಕೆಲಸಗಳು ತಾನೇ ಮುಗಿದು ಹೋಗಿ
ಕೆಲಸಗಳ ಸಾಧನೆಗೆ ಹೆಸರು
ನಮಗೆ ನಾಮಕರಣ ಮಾಡುತ್ತದೆ !

ಜವಾಬ್ದಾರಿ ಕೆಲಸವಾಗದೆ
ಜವಾಬ್ದಾರಿ ನಮ್ಮ ಮನದ ಆಸೆ ಎಂದರೆ
ಜವಾಬ್ದಾರಿ ಏಕೆ ಎಂದು ನಮ್ಮ ಮನಸ್ಸು ಪ್ರಶ್ನಿಸಿದರೆ
ಉತ್ತರ ಸಿಗದೆ ಕೆಲಸಗಳೇ ಇಲ್ಲದೆ
ಹೊಸ ಕೆಲಸಗಳ ಬೇಡಿಕೆಯು
ನಮ್ಮ ಮನದಲ್ಲಿ ಉದ್ಭವಿಸಿ

ಜಗತ್ತಿನ ನೆರಳೇ ನಮ್ಮ ಜೀವನದ
ಸುಖದ ಅಂದರವಾಗಿ
ನಾವುಗಳು ನಮ್ಮನ್ನು ಮರೆತು
ನಾವುಗಳು ನನ್ನದೆನ್ನುವುದ ಮರೆತು
ನಮ್ಮದು ಎಂಬ ಆದಿ ಪದದಿಂದ
ನಮ್ಮದು ಎಂಬ ಬಿಂದುವಿನಿಂದ

ವಿಶ್ವದ ವೃತ್ತವೇ ನಮದು ಎನ್ನುತ
ಉಳಿದಿರುವ ಸಮಯದಲ್ಲಿ ಸೇವೆಯನ್ನು ಸಲ್ಲಿಸುವ
ನಮ್ಮ ಜನುಮದಲ್ಲಿ ದಿನಗಳನ್ನು ಸವೆಸುತ
ನಮ್ಮ ಸೇವಾಭಾವನೆಗಳ ನೆರಳು
ಈ ಜಗದಲ್ಲಿ ಬಿಟ್ಟು ಹೋಗೋಣ !



- ಶ್ರೀ ಹರಿ

27-02-2012

ಅನೇಕ ತರಹ ಮನಸ್ಸುಳ್ಳ ಈ ಶರೀರ
ಒಳ್ಳೆ ಮನಸ್ಸು ಕೆಟ್ಟ ಮನಸ್ಸುಳ್ಳ ಶರೀರ
ಮನಸ್ಸು ನಡೆಸುತ್ತಿರುವಂತೆ ನಡೆಯುತ್ತಿರುವ
ಈ ಶರೀರ ಜಾಗ್ರತೆಯಲ್ಲಿರಬೇಕಾಗಿದೆ !

ಒಂದು ಅಥವಾ ಎರಡು ಕೆಟ್ಟ ಮನಸ್ಸುಳ್ಳ ಸಂಚು
ಏನೂ ಅರಿಯದ ಶರೀರಕ್ಕೆ ಕೆಟ್ಟ ಹೆಸರನ್ನು ತರಿಸಿ
ಶರೀರದ ಚಾತುರ್ಯವನ್ನು ಮೊಟಕುಗೊಳಿಸಿ
ಹೆದರದೆ ನಮ್ಮನ್ನೇ ಲೆಕ್ಕಿಸದೆ ಮಾಡುತ್ತಿರುವ
ಕೆಟ್ಟ ಮನಸ್ಸುಗಳಿಂದ ಎಚ್ಚರವಾಗಿರಬೇಕಾಗಿದೆ !

ಕೆಟ್ಟ ಮನಸ್ಸನ್ನು ನಮ್ಮ ಒಳ್ಳೆಯ ಮನಸ್ಸಿನಿಂದ
ಶುಶ್ರೂಷೆ ಮಾಡಿ, ಅದನ್ನು ಆದರದಿಂದ ಸರಿ ಪಡಿಸುತ್ತ
ನಮ್ಮ ಮನಸ್ಸಿನಲ್ಲಿ ಯಾವ ಕೆಟ್ಟ ಮನಸ್ಸಿಲ್ಲ
ನನ್ನ ಮನಸ್ಸಿನಲ್ಲಿ ಯಾವ ಕೆಟ್ಟ ಭಾವನೆಯಿಲ್ಲ
ಕೆಟ್ಟ ಭಾವನೆಗಳಿಂದ ಎಚ್ಚರದಿಂದ ಇದ್ದೇನೆಂಬ

ಮನೋಶಕ್ತಿಯನ್ನು ನಮ್ಮ ಮನದಲ್ಲಿ ಬೆಳೆಸಿಕೊಂಡರೆ
ಈ ಜಗವನ್ನು ಬುಗುರಿಯಂತೆ ಆಡಿಸಬಹುದು
ದೇವರನ್ನು ಅನುಭವಿಸಲು
ನಮ್ಮ ಮನೋಶಕ್ತಿ ಬೆಳೆಸಿಕೊಳ್ಳುವುದೇ
ನಮ್ಮ ಜೀವನದ ದಿನಚರಿಯಾಗಬೇಕು!

- ಶ್ರೀ ಹರಿ



www.sriharikhoday.com

28-02-2012

ಸಮುದ್ರ ಇದೆ ಎಂದು ನದಿ ತಿಳಿದು
ನದಿಯು ಸಮುದ್ರ ದಡಕ್ಕೆ ಓಡುತ್ತಿದ್ದರೆ
ಸಾವುಗಳು ದೇವರಿದ್ದಾನೆ ಎಂದು
ಯಾವ ನಿಲುವಿನ ದಡಕ್ಕೆ ನಡೆಯುತ್ತಿಲ್ಲ!

ನಂಬಿಕೆಯ ಹಿಂದೆ ಸತ್ಯ ಇದೆ ಎಂದು ನಂಬಿದರೆ
ನಂಬಿಕೆಯ ಹಾದಿಯಲ್ಲೂ ಸತ್ಯದ ದರ್ಶನವಾಗುತ್ತದೆ
ಚಿನ್ನದ ಬೆಟ್ಟದ ಎದುರಿಗೆ ನಾವುಗಳು ನಿಂತು
ನಾವು ಹೊತ್ತಷ್ಟು ಚಿನ್ನವನ್ನು ಹೊರಬಹುದೇ ವಿನಹ:
ಬೆಟ್ಟವನ್ನು ಹೊರಲಾರೆವು !

ನಂಬಿದಷ್ಟು ಹೆಚ್ಚು ಬೆಳೆಯುವ ನಂಬಿಕೆಯ ಶಕ್ತಿ
ನಮ್ಮ ಸಂಕಲ್ಪಕ್ಕೆ ನಂಬಿಕೆ ನಾಂದಿಯಾಗಿ
ಎಣ್ಣೆ ದೀಪವನ್ನು ಉರಿಸುವಂತೆ
ಬೆಳಗಿದ ದೀಪ ಬೆಳಕನ್ನು ನೀಡುವಂತೆ
ನಂಬಿಕೆ ಸಂಕಲ್ಪ ಜೊತೆಯಾದರೆ
ಮಾನವನ ಸಾಧನೆಗೆ ಯಾವ ಅಡ್ಡಿಯೂ ಬರುವುದಿಲ್ಲ!

ನಾನು ಒಂದು ಹೊಸ ಸಮಾಜ ಕಟ್ಟುವೆನೆಂಬ ನಂಬಿಕೆ
ಸಂಕಲ್ಪದ ಜೊತೆಯಾಗಿ ಕಾಲದ ಹೊಳೆಯಲ್ಲಿ
ನಮ್ಮನ್ನು ಸಂಕಲ್ಪದ ದಡಕ್ಕೆ ಒಯ್ದು
ನಂಬಿಕೆ ಮತ್ತು ಸಂಕಲ್ಪಗಳು ಕಾರ್ಯರೂಪಕ್ಕೆ ಬಂದಾಗ

ನನ್ನ ಅದೃಷ್ಟ ಬಹಳ ಚೆನ್ನಾಗಿದೆ ಎಂಬ ಮಾತಿನ ಬದಲಾವಣೆ
ಮಾನವನಿಗೆ ಬರುವ ಕಾಲದಲ್ಲಿ ಸಂತಸದ ಸಂಪಾದಿಸಿ
ನನ್ನ ಅದೃಷ್ಟ ಬಹಳ ಚೆನ್ನಾಗಿದೆ ಎಂಬ ಮಾತುಗಳನ್ನಾಡಿ
ನಂಬಿಕೆ ಮತ್ತು ಸಂಕಲ್ಪಗಳ ಕಾರ್ಯವನ್ನು ಮರೆತು ಬಿಡುವರು !

- ಶ್ರೀ ಹರಿ

29-02-2012

ಕನ್ನಡಿಯನ್ನು ನಾ ಕಂಡರೆ
ನನ್ನ ಮನಸ್ಸಿಗೆ ಮೈಲಿಗೆ ಇಲ್ಲ
ಕನ್ನಡಿಯನ್ನು ನಾ ಕಂಡರೆ
ಪ್ರೀತಿಸುತ್ತಿದ್ದೇನೆ ಏಕೆ ಎಂದು ಯೋಚಿಸಿದರೆ
ಅದು ನಾ ಇದ್ದಂತೆ ತೋರಿಸುತ್ತದೆ
ಸೌಂದರ್ಯವಾಗಲಿ ಕುರೂಪವಾಗಲಿ ತಪ್ಪಿಲ್ಲದೆ ಪ್ರತಿಬಿಂಬಿಸುತ್ತದೆ !

ನನಗೆ ಪ್ರೀತಿಸುವವರು ಬೇಕು ಎಂದರೆ
ನಾವು ಕನ್ನಡಿಯಂತೆ ಇರಬೇಕು
ನಮಗೆ ಆದರದಿಂದ ನೋಡಿಕೊಳ್ಳಬೇಕು ಎಂದರೆ
ಕನ್ನಡಿಯನ್ನು ನಾವು ಸ್ವಚ್ಛವಾಗಿ ಹಸನಾಗಿರುವಂತೆ
ನಮ್ಮ ಮನಸ್ಸನ್ನು ಸ್ವಚ್ಛಗೊಳಿಸಿ
ಹಸನಾಗಿ ಇಟ್ಟುಕೊಂಡರೆ
ನಮಗೆ ಪ್ರೀತಿಸುವವರು ಸಾಲು ಸಾಲು !

ಅತಿ ವಿಚಿತ್ರವಾದ ಪ್ರಕೃತಿಯ ಕೊಡುಗೆ ಎಂದರೆ
ಅತಿ ಪವಿತ್ರವಾದ ದೇವರ ಕೊಡುಗೆ ಎಂದರೆ
ಪ್ರೀತಿ-ಪ್ರೇಮಗಳ ಜೋಡಣೆ
ಮಾನವನಿಗೆ ಉಳಿದಿರುವುದು ಒಂದೇ ದಾರಿ
ಜೊತೆ ಪ್ರೀತಿಸಿ ಜೊತೆ ಮಾತನಾಡಿ
ಜೊತೆ ಒಳ್ಳೆ ಕಾರ್ಯಗಳಿಗೆ ಕಾರ್ಯನಿರತನಾಗುವುದೇ

ಜೀವನದಲ್ಲಿ ಮಾನವನಿಗೆ ಸುಖ
ಮಾನವನಿಗೆ ಸುಖದ ಸೌಂದರ್ಯ ಅರಿವಾಗುವುದು !

- ಶ್ರೀ ಹರಿ



www.sriharikhoday.com

01-03-2012

ದಿಗಂತದಲಿ ಕತ್ತಲು ಬೆಳಕಿನ ಮಾತುಗಳು
ಜನಗಳ ಕಷ್ಟ ನೋಡಿ ಬೇಸತ್ತುಹೋಗಿರುವ ಬೆಳಕಿನ ನುಡಿಗಳ ಕೇಳಿ
ನೀ ಬೇಸರ ಪಡಬೇಡ ನಾವು ನಾಳೆ ಜೊತೆ ಬೆರೆತಾಗ
ಕಷ್ಟಗಳ ಮತ್ತು ಜಗದ ಕಷ್ಟಗಳಿಗೆ ಉತ್ತರ ನೀಡುವೆ ಎಂದು
ಕತ್ತಲೆಯ ಮಾತು ಬೆಳಕಿಗೆ ನಾಳೆಯ ಉದಯಕ್ಕೆ
ಹೊಸ ಹೊಸ ಬಣ್ಣಗಳನ್ನು ಸಜ್ಜು ಮಾಡಿಕೊಡುತ್ತಿವೆ !

ಬೆಳಕು- ಕತ್ತಲೆಗಳು ನಮಗೆ ಇದು ಬೇಕು ಅದು ಬೇಕೆನ್ನದೆ
ಇದಾಗಬೇಕು ಅದಾಗಬೇಕು
ಅದನ್ನು ನೀ ಮಾಡು ಇದನ್ನು ನಾ ಮಾಡುವೆನೆಂಬ
ಮನೋ ಕೆಲಸದ ವ್ಯಾಕರಣ ಯಾರ ಕಿವಿಗೂ ಬೀಳದೆ
ಜಗತ್ತಿನ ಸುಖ - ದುಃಖಗಳಿಗೆ ತಾನೇ ಜವಾಬ್ದಾರಿಯ
ಹೊಣೆ ಹೊತ್ತು, ನಿಲ್ಲದೆ ಜಗವು ಜನವೂ ಜೀವಿಸುತ್ತಿದೆ !

ಬೆಳಕನ್ನೇ ಕಾಣದ ಬೆಳಕಿನ ಕಿರಣ ಕಾಣಲು ಕಾದಿರುವ
ಕೋಟಿ ಕೋಟಿ ಯೋನಿಗರ್ಭಗಳು ಬೆಳೆಯುತ್ತಿರುವ
ಗರ್ಭದ ಬೆಳೆಗೆ ವಿಶ್ವದಲ್ಲಿ ವಿಶ್ರಮಿಸಿಕೊಳ್ಳಲು
ನಿದ್ರೆ ನೀಡಿರುವ ಕತ್ತಲು ಅನೇಕ ಕೆಲಸಗಳು ಬಾಕಿಯಾಗಿವೆ
ಅನೇಕ ಕೆಲಸಗಳು ಉಳಿದಿವೆ ಎಂದು

ವಿಚಾರಿಸುತ್ತಿರುವ ಸೂರ್ಯನ ಬೆಳಕು
ಜಗತ್ತಿನ ಕಷ್ಟಗಳು ತಮಗೆ ಕಷ್ಟವೇ ಇಲ್ಲದಂತೆ
ಬೆಳಕು ಕತ್ತಲಿನ ಬಣ್ಣಗಳ ಆಟದಲ್ಲಿ
ಕಾಲದ ಪಗಡೆಹಿಡಿದು ನಾ ಗೆದ್ದೆ ನಾ ಗೆದ್ದೆ ಎಂದು
ಪಗಡೆಯಾಟ ಆಡುತ್ತಿರುವವರು ಕತ್ತಲು - ಬೆಳಕುಗಳಿಗೆ
ತಾವು ಮಾಡುತ್ತಿರುವ ಕೆಲಸವು ತಮಗೇ ಅರಿವಾಗುತ್ತಿದೆ

- ಶ್ರೀ ಹರಿ

02-03-2012

ಬೇಕು ಬೇಡಗಳ ತಕ್ಕಡಿ
ಮನದಲ್ಲಿ ಒಂದು ಸಲ ಈ ಕಡೆ
ಮತ್ತೊಂದು ಸಲ ಆ ಕಡೆ
ಜೀವಿಸಲು ದೇವರು ಕೊಟ್ಟಿರುವ
ಸುಖ ಕೊಡುವ ಮನೋ ತಕ್ಕಡಿ

ತಕ್ಕಡಿ ಮುರಿಯುವಷ್ಟು ನಾವು ಆಸೆಪಡದೆ
ಸಮತೋಲನದ ಬೇಕು ಬೇಡಗಳಿಲ್ಲದೆ
ನಮ್ಮ ನೆನಪುಗಳ ಮರೆತು
ಹೊಸ ಹೊಸ ನೆನಪುಗಳಿಂದ ಅಪೇಕ್ಷೆ ಪಟ್ಟರೆ
ನಮ್ಮ ಮನೋ ನಿರ್ಣಯಗಳು
ಸಮಾಜ ಒಪ್ಪುವಂತೆ ತೂಗುತ್ತದೆ !

ಯಾವುದು ಬೇಡವೆಂದು ಯಾವುದು ಬೇಕೆಂದು
ಕಿವಿ ಮಾತುಗಳ ಕೇಳಿಸಿಕೊಳ್ಳದೆ
ತನ್ನ ಮನದಲ್ಲಿರುವ ಒಪ್ಪಿಗೆಯ ಗಂಟೆಯ ಸದ್ದು
ಮನದಲ್ಲಿ ಕೇಳಿಸಿಕೊಂಡರೆ
ಸಂಕೋಚವಿಲ್ಲದ ಮನೋನಿರ್ಧಾರದ ತೀರ್ಪು
ನಾವು ಸ್ವೀಕರಿಸಿ ಪಾಲಿಸಿಕೊಂಡು ಹೋಗುತ್ತಿದ್ದರೆ

ಜೀವನದಲ್ಲಿ ಫಲವತ್ತಾದ ಪ್ರಗತಿಯುಳ್ಳ ಬೆಳೆ
ಸ್ವಾರಸ್ಯಕರವಾದ ಹೊಸ ಹೊಸ ಸುಖ
ನಮ್ಮ ಜೊತೆ ಆಟವಾಡಿಕೊಂಡೇ ಇರುತ್ತದೆ !

- ಶ್ರೀ ಹರಿ





03-03-2012

ದೇವರೇ ದೇವರೇ
ನಿನ್ನನ್ನು ಪಡೆದ ಈ ವಿಶ್ವವೇ ವರ್ಣಿಸಲಾಗದ ಅಭಾರಿ
ಆತ್ಮ - ಶರೀರ ಎಂಬ ಜೋಡನೆ
ಸಾಯುತ್ತಿರುವ ಇದರ ಶರೀರಗಳು ಶರೀರ ಭಾವನೆಗಳು !

ಮುಪ್ಪಿಲ್ಲದ ಆತ್ಮ ಅದು ನೀನೋ ಅದು ನಾನೋ
ಇಬ್ಬರೂ ಸತ್ಯದ ಎದುರಿಗೆ ಬಿಂಬ ಪ್ರತಿಬಿಂಬಗಳೊ
ಜೊತೆಯಿರುವ ಆತ್ಮ ಜೊತೆಯಿದ್ದು ಮಾಯವಾಗುವ ತರಂಗವೋ
ಕೊನೆ ಮೊದಲಿಲ್ಲದ ನಿನ್ನ ಇರುವಿಕೆ ನಿನ್ನ ಬ್ರಹ್ಮಾಂಡದ ಸೃಷ್ಟಿಯಲಿ

ಅದರ ಜೊತೆಗೆ ನೀ ಬೆಳೆಸಿರುವ ಪ್ರಕೃತಿ
ಪ್ರಕೃತಿಯಲ್ಲಿ ನೀ ಬೆಳೆಸುತ್ತಿರುವ ಆಕಾರ ಸ್ವರೂಪಗಳು
ಆಕಾರ ಸ್ವರೂಪಗಳಲ್ಲಿ ಒಬ್ಬರ ಮತ್ತೊಬ್ಬರ ಪ್ರೀತಿಯ ಹೊಳೆ
ಎಲ್ಲವನ್ನು ಆಟವಾಡಿಸುತ್ತಿರು ಎಂದು ನೀ ನೀಡಿರುವ ಆಜ್ಞೆ
ಪಾಲಿಸಿಕೊಂಡು ಹೋಗುತ್ತಿರುವ ಕಾಲ

ಹೇ ದೇವಾ ನಿನಗೆಂದೂ ನಾ ತಬ್ಬಿಕೊಳ್ಳಲಾಗದೆ
ತಬ್ಬಿಕೊಳ್ಳದೆ ನೀ ನೀಡುತ್ತಿರುವ ಅನುಭವದ ಸುಖ
ಶರೀರ-ಆತ್ಮಗಳ ಜೋಡಣೆಯಲ್ಲಿ, ಶರೀರ ಆತ್ಮಗಳ ಜೋಡಿಯಲ್ಲಿ
ನಿನ್ನ ಅಪ್ಪಿಗೆಯ ಸುಖ ಪಡೆಯಬೇಕೆಂದು

ಪ್ರತಿ ಸಲ ನಾ ಹುಟ್ಟಿ ಪ್ರತಿಯೊಂದು ನಾ ನಿನ್ನಲ್ಲಿ ಬೆರೆತು
ಪ್ರತಿ ಸಲ ನಿನ್ನ ಅಪ್ಪುಗೆಗೋಸ್ಕರ ಹುಟ್ಟುತ್ತ
ನೀ ಸೃಷ್ಟಿಸಿರುವ ಎಲ್ಲದರಲ್ಲಿ
ಪ್ರೀತಿ-ಪ್ರೇಮಗಳ ಜೋಡಣೆ ಜೊತೆ ಜೀವಿಸುತ್ತ

ಕಾಲದ ಜೊತೆಗೆ ಸುಖಪಡುತ್ತ
ಕತ್ತಲಲ್ಲಿ ನಿನ್ನ ಜೊತೆ ಅನುಭವಗಳು
ಈ ವಿಶ್ವದಲ್ಲಿ ಈ ಮಾನವನು ಅತಿ ಶ್ರೇಷ್ಠ ಸೃಷ್ಟಿ ಎಂದು
ಪ್ರಕೃತಿಯು ಹೊಗಳುತ್ತಿರುವುದು ನಿನ್ನ ಪ್ರಚೋದನೆಯೇ ಸರಿ!



- ಶ್ರೀ ಹರಿ



www.sriharikhoday.com

05-03-2012

ಸರಿ ತಪ್ಪು ನಮ್ಮಲ್ಲಿರುವ ದೇವರಿಗೆ ಮಾತ್ರ ಗೊತ್ತು
ಸರಿಯನ್ನು ಮಾಡುವುದು ತಪ್ಪನ್ನು ಮಾಡುವುದು
ನಮ್ಮ ಮನಸ್ಸಿನ ತಕ್ಕಡಿಯ ತೀರ್ಪು
ಅದನ್ನು ಸ್ವೀಕರಿಸಿ ಅದನ್ನು ನಿರಾಕರಿಸುವುದು ನಮ್ಮ ತೀರ್ಪು
ತೀರ್ಪಿನ ಮೇಲೆ ಬರವಣಿಗೆ ಆಗುವುದು ಆವನ ಬ್ರಹ್ಮ ಲಿಖಿತ!

ಅದೃಷ್ಟಶಾಲಿ ಪ್ರಗತಿ ಪುರುಷ ಎಂದು ಹೆಸರು ಪಡೆಯುವವರು
ತಮ್ಮ ಮನಸ್ಸಿನ ತಕ್ಕಡಿಯ ಸೂಚನೆಯ ಮೇಲೆ
ಆಧಾರಿತ ತೀರ್ಪುಗಳ ಜೋಡಣೆಯೇ ಪ್ರಗತಿ
ಪ್ರಗತಿಯ ಸಾಧನೆಯ ಹೆಜ್ಜೆಗಳೇ ನಮ್ಮನ್ನು ಮುನ್ನಡೆಸಿ
ಜಗವನ್ನೇ ವಿಸ್ಮಯಗೊಳಿಸುವ ಸಾಧನೆಗಳನ್ನು ಸಾಧಿಸಿ
ಯಶವ ಪಡೆಯುವವನೇ ಸ್ವಯಂಲಿಖಿತ ಅದೃಷ್ಟಶಾಲಿಗಳು!

ಕಾಣದ ದೇವರ ಮೇಲೆ ಭಾರ ಹೊರಿಸದೆ
ಮನದಲ್ಲಿನ ದೇವರ ಭಾಷೆ ಅರ್ಥಮಾಡಿಕೊಂಡು
ಮಿನುಗುವ ವಿಮರ್ಶೆಗಳನ್ನು ನಮ್ಮ ಹಣೆಯ ಮೇಲೆ
ಬಾಸಿಂಗವಾಗಿ ಕಟ್ಟಿಕೊಂಡು ಕಾಲದ ಜೊತೆ ಜೊತೆಗೆ ಬೆಳೆದು
ಅದೃಷ್ಟ ಪ್ರಕಾಶಿಸುವ ನಿರ್ಣಯಗಳೇ
ಬ್ರಹ್ಮಲಿಖಿತ ಅದೃಷ್ಟಶಾಲಿಗಳೆಂಬ ಹೆಸರುಪಡೆದು

ಸಮಾಜ ಸತ್ಯದ ಅರ್ಥ ತಿಳಿದುಕೊಳ್ಳದೆ
ಬರೀ ಅದೃಷ್ಟಶಾಲಿಗಳೆಂದು ಹೊಗಳುತ್ತಿರುವರು!

- ಶ್ರೀ ಹರಿ





06-03-2012

ಮನದಲ್ಲಿನ ದೇವರ ತೀರ್ಪು ಕೇಳದೆ
ತನ್ನದೇ ಆದ ನಿರ್ಣಯ ಮಾಡಿ
ಮಾಡಿದ್ದು ತಪ್ಪು ಎಂದು ಪರಿಗಣಿಸಿ
ಅದನ್ನು ತಿದ್ದುಕೊಳ್ಳುವವನೇ ಜ್ಞಾನಿ!

ಜ್ಞಾನಿ ಎಂದರೆ ಅತಿಯಾದ ಬುದ್ಧಿವಂತಿಕೆಯಲ್ಲ
ಜ್ಞಾನಿ ಎಂದರೆ ಅತಿಯಾದ ದೊಡ್ಡ ತಪಸ್ವಿಯೂ ಅಲ್ಲ
ಜ್ಞಾನಿ ಎಂದರೆ ತನ್ನ ಮನೋನಿರ್ಣಯಗಳ ತಪ್ಪುಗಳನ್ನು
ದಿನಚರಿಯಲ್ಲಿ ಹಂತ ಹಂತದಲ್ಲಿ ತಿದ್ದುಕೊಳ್ಳುತ್ತ
ಹೊಸತನವನ್ನು ಅನುಭವಿಸುವವನೇ ಜ್ಞಾನಿ!

ಜ್ಞಾನದಿಂದ ಪವಿತ್ರ ಭಾವನೆಗಳು
ಪವಿತ್ರ ಭಾವನೆಯ ಜ್ಞಾನದಿಂದ ಹತ್ತು ಜನರ ಒಡನಾಟ
ಒಡನಾಟ ಜೀವನದಿಂದ ಸಮಾಜ
ಸಮಾಜವೆಂದರೆ ಸುಖ-ದುಃಖಗಳ ಸಹಪಾಠಿಗಳ ಗುಂಪು
ಸಹಪಾಠಿಗಳ ಗುಂಪೇ ಸಮಾಜ!

ನಮ್ಮ ಹಿರಿಮೆಯನ್ನು ತೋರುವ ಮನೋದೇವರ ಜೊತೆ
ನಮ್ಮ ಜೀವನ ಬೆಳೆಸಿಕೊಂಡರೆ
ದಿನವೂ ಅವನ ಜೊತೆಯ ಮಾತುಗಳು
ವಿಶ್ವದಲ್ಲಿ ತೇಲಿ ಕರಗಿ ಕಾಣದೆ
ಬೇಡಿದ್ದಲ್ಲಿ ಪ್ರಕಟವಾಗುವ ದೇವರು

ನಮ್ಮ ಅಂತರಂಗದ ಹತ್ತಿರದ ಗೆಳೆಯನಾದಾಗ
ಮಾನವ ಅವಧೂತನಾಗಿ ಜಗದಲ್ಲಿ ಮಾರ್ಪಾಟಾಗಿ
ವಿಶ್ವದ ಸುಖ-ದುಃಖಗಳಿಗೆ ನಿಲುವು ಮತ್ತು ಗುರಿಗಳ ಸಾಧನೆಗಾಗಿ
ಕೇಳದೆಯೇ ವರವಾಗಿ ಕೊಡುವ ವರದಾನವನ್ನು ನೀಡಿದರೆ
ಮಾನವನ ಜೀವನದ ದಾರಿ ತೋರ್ಪ ಗುರಿ ಆಗುವದು



- ಶ್ರೀ ಹರಿ



www.sriharikhoday.com

07-03-2012

ನಮ್ಮ ನಿರಾಳ ಭಾವನೆಯ ಸಮುದ್ರದಲ್ಲಿ
ನಮ್ಮದು ತಮ್ಮದು ಎಂಬ ಹಡಗುಗಳು
ತಮ್ಮದೇ ಆದ ಪತಾಕೆಗಳನ್ನು ಹಾರಿಸಿಕೊಂಡು
ಈ ದಡದಿಂದ ಆ ದಡಕ್ಕೆ ಆ ದಡದಿಂದ ಈ ದಡಕ್ಕೆ
ನಿಲ್ಲದೆ ಓಡುತ್ತಿರುವ ಓಟಗಳು

ನಮ್ಮನ್ನು ನಾನು ಇಂಥವನು
ನಾನು ಅಂಥವನು ಎಂಬ ಭಾವನೆಗಳನ್ನು ಮೂಡಿಸಿ
ನಮ್ಮನ್ನು ಕವನ ಬರೆಸುವ ಕವಿಯಾಗಿಸಿ
ಕುಂಚ ಕೈಯ್ಯಲ್ಲಿಡಿದು ಚಿತ್ರಗಾರನಾಗಿಸಿ
ತನ್ನ ಕಂಠ ಸರಿಯಾಗಿದೆಯೆಂದು ಹಾಡುಗಾರನಾಗಿಸಿ
ನಮ್ಮ ಮನೋ ನೌಕೆಗಳ ಓಡಾಟ ವಿಶ್ವದ ವಿಸ್ಮಯ !

ಸಾರಥಿ ಇಲ್ಲದ ನೌಕೆಗಳು ಸ್ವಯಂಪ್ರೇರಣೆಯಿಂದ ನಡೆಯುವ
ನಿರಾಳ ಸಮುದ್ರ ತಮ್ಮದೇ ಎಂದು ಘೋಷಿಸುತ
ನಮ್ಮ ನೆನಪುಗಳು ನಮ್ಮ ಮೇಲೆ ಒಡೆತನವನ್ನು ಸಾಧಿಸುತ
ಸಾಧಿಸುತ್ತಿರುವುದು ಮತ್ತೊಂದು ಜಗತ್ತಿನ ವಿಸ್ಮಯ

ನಮ್ಮ ನಿರಾಳ ಭಾವನೆಯ ಸಮುದ್ರದಲ್ಲಿ
ನಮ್ಮ ಮನೋ ಹಡಗುಗಳನ್ನು ಒಂದು ದಡದಲ್ಲಿ ನಿಲ್ಲಿಸಿ
ಬೇಕಾದಾಗ ಮಾತ್ರ ಮತ್ತೊಂದು ದಡಕ್ಕೆ ಕಳುಹಿಸಿ
ನಡೆಯುವ ಮನೋವ್ಯಾಪಾರಕ್ಕೆ ಮತ್ತೊಂದು ದಡಕ್ಕೆ ಕಳುಹಿಸಿ

ಈ ರೀತಿಯ ಮನೋನೌಕೆಗಳ ಮೇಲೆ
ನಮ್ಮ ಅಧಿಕಾರವನ್ನು ಚಲಾಯಿಸಿದರೆ
ಮನದಲ್ಲಿ ಹೊಸ ಜಗತ್ತನ್ನು ಕಟ್ಟುವ
ಶಕ್ತಿ ಪಡೆಯಬಹುದು

- ಶ್ರೀ ಹರಿ



www.sriharikhoday.com

08-03-2012

ಸಾವಿಲ್ಲದ ಪುಸ್ತಕಗಳಂತೆ
ಸಾವಿಲ್ಲದ ನಮ್ಮ ಮನದ ನೆನಪುಗಳು
ಮಾನವನ ಮನಸ್ಸಿನಲ್ಲಿ ಜೊತೆ ಜೊತೆಗೆ ಬೆರೆತು ಹೋಗಿ
ನೆನಪುಗಳನ್ನು ದೂರಮಾಡುವ ಯತ್ನ
ನಮಗೆ ಅರಿಯದೇ ಆಗಿದೆ !

ಹುಟ್ಟಿನಿಂದ ಸ್ನೇಹಿತರೂ ಇಲ್ಲ ಶತ್ರುಗಳೂ ಇಲ್ಲ
ನೆನಪಿನ ಪ್ರಚೋದನೆಯೇ ಸ್ನೇಹ ಶತ್ರುಗಳನ್ನು ಹುಟ್ಟಿಸುತ್ತಿದೆ
ಹಿರಿಯರು ಪಾಪ ಪುಣ್ಯಗಳನ್ನು
ಮನಸ್ಸಿನ ಕೋಟೆಯಿಂದ ದೂರ ಇರಿಸಿದ್ದರು
ಪ್ರಯತ್ನವಿಲ್ಲದೆ ಫಲವ ದೋಚಿಕೊಳ್ಳುವುದು ಪಾಪವಾದರೆ
ಪುರುಷಪ್ರಯತ್ನದಿಂದ ಸಮಾಜದ ಲಾವಣ್ಯವನ್ನು ಅನುಭವಿಸುವುದೇ ಪುಣ್ಯ
ಎಲ್ಲಾ ನೆನಪಿನ ಕ್ರಿಯೆಗಳು ಮನಸ್ಸಿನ ಸತ್ಯದಿಂದ ದೂರವಿರುವುದು !

ಗಂಟೆ ಬಾರಿಸಿದಂತೆ ಗಂಟೆ ಬಾರಿಸುವಂತೆ
ನೆನಪು ಮನಸ್ಸುಗಳು ಬಾರಿಸುವಂತೆ ಬಾರಿಸುತ್ತಿದ್ದರೆ
ಸದ್ದು-ಗದ್ದಲಗಳಲ್ಲಿ ತನ್ನ ಮನೋ ಹತೋಟಿಯನ್ನು ತಾನೇ ಕಳೆದುಕೊಳ್ಳುತ್ತ
ನಾವು ಹುಟ್ಟಿಸಿದ ನೆನಪುಗಳು ನಮ್ಮಲ್ಲಿ ಸೇರಿ
ಕಾಡುವ ಅದರ ಗುಣ ನಮ ಗುಣಗಳಾಗಿ
ಎಚ್ಚರದಿಂದ ನಾವುಗಳು ಇಲ್ಲದಿದ್ದಲ್ಲಿ
ಕಿಟಕಿಯ ಬಾಗಿಲು ತೆರೆದಾಗ ಗಾಳಿ ಬಂದು ಆವರಿಸಿದಂತೆ

ನೆನಪುಗಳು ನಮ್ಮ ಮನದಲ್ಲಿ ನುಗ್ಗಿ ಅನ್ಯತಾ ಮನವ ಕೆಡಿಸುತ್ತ
ನಾನು ಇಲ್ಲದ ನೆನಪುಗಳ ಜೊತೆ ಪ್ರೀತಿ ಬೆಳೆಸಿಕೊಂಡರೆ
ಅದು ಅತಿಯಾದ ದೊಡ್ಡ ಹಿರಿಯ ಗೆಳೆಯನಾಗಿ
ನಮ್ಮ ಪುಣ್ಯ ಕೆಲಸಗಳಲ್ಲಿ ಬಾಗಿಯಾಗಿ ನಮ್ಮ ಜೊತೆ ಸಂತಸ ಪಡುವುದು
ನಮ್ಮ ನೆನಪುಗಳೇ ನಮ್ಮ ಜೀವನದ ಗೆಳೆಯನಾಗಿ
ಜೊತೆಯಾಗಿರುವುದು ಅವಶ್ಯ !

- ಶ್ರೀ ಹರಿ

09-03-2012

ಒಬ್ಬರನೊಬ್ಬರು ಕೊಂಡಾಡುತ
ಒಬ್ಬರೊಬ್ಬರ ಮುಖದ ಮೇಲೆ ನಗುವ ತೇಲಾಡಿಸುತ
ಒಬ್ಬರಿಂದ ಮತ್ತೊಬ್ಬರು ಒಲುಮೆಯನ್ನು ಗಳಿಸಿಕೊಳ್ಳುತ್ತ
ಸ್ನೇಹ ಭಾವಗಳಿಂದ ಅಪ್ಪಿಕೊಳ್ಳುತ್ತ ರಾತ್ರಿ ಹಗಲಿನ ಜೊತೆಗೆ
ಜೀವಿಸುತ್ತಿದ್ದರೆ
ಶತ್ರುಗಳಿಗೆ ಮನದ ಕೋಟೆಯಲ್ಲಿ ಪ್ರವೇಶಿಸಲು ಅಸಾಧ್ಯ !

ಯಾವ ಹಣವೂ ಬೇಡದ ಬಡವನಾಗಲಿ ಶ್ರೀಮಂತನಾಗಲಿ
ದೇವರು ಕೊಟ್ಟಿರುವ ಮುಗುಳ್ನಗೆ
ಎದುರಿಗೆ ಅವರಿಗೆ ಬರುವ ಕಷ್ಟಗಳನ್ನು ಕರಗಿಸಿ
ಜೊತೆ ಸಂಬಂಧಗಳನ್ನು ಹೆಚ್ಚಿಸಿಕೊಂಡು
ಜೊತೆ ಜೀವನವನ್ನು ಸಂತಸದಲ್ಲಿ ತೇಲಾಡಿಸುತ

ಪ್ರಕೃತಿ ಅರಳಿಸಿರುವ ಕಮಲ
ದಡದ ಮೇಲಿರುವ ಫಲ ತುಂಬಿಕೊಂಡಿರುವ ಮರವ ಕಂಡು
ತಡೆಯಲಾಗದೆ ಬೀರುತ್ತಿರುವ ನಗೆ
ನನಗೂ ನಗೆಯ ಅರ್ಥ ಹೇಳು ಎಂದು ಕೇಳುವ
ಅರಳಲು ಕಾದು ನಿಂತಿರುವ ಹೂಗಳು ಹೇಳಲು
ಉಲ್ಲಾಸದಿಂದ ಹೊಸ ಹೊಸ ಬಣ್ಣಗಳನ್ನು ಮಿನುಗಿಸುತ್ತ

ಆಕಾಶಕ್ಕೆ ಬೇಕಾದ ನೀಲಿ ಬಣ್ಣವನ್ನು
ಹೂಗಳು ನನ್ನಿಂದ ತೆಗೋ ನನ್ನಿಂದ ತೆಗೋ
ಎಂದು ಬೇಡುತ್ತಿರುವುದನ್ನು ಕಂಡರೆ
ಯಾವ ಫಲವೂ ಸ್ವೀಕರಿಸದೆ ಯಾವ ಹಣವೂ ಬೇಡದೆ
ಹೂಗಳು ಕೊಡುತ್ತಿರುವ ಬಣ್ಣಗಳು
ನಾ ಬಣ್ಣವ ಕೊಟ್ಟಿರುವೆ ಎಂಬ ಹಿಗ್ಗಿನಿಂದ






www.sriharikhoday.com

ಪ್ರೀತಿಯಿಂದ ಸ್ವೀಕರಿಸುತ್ತಿರುವ ಆಕಾಶ
ಒಬ್ಬೊಬ್ಬರ ಮುಖದಲ್ಲಿನ ಮುಗುಳ್ನಗೆ ನೀಡುತ್ತಿರುವ ಸಂತಸ
ಇದ ಕಂಡು ಹಾರುತ್ತಿರುವ ಗಿಳಿಯ ಸಮೂಹಗಳು
ತಾವೇ ತಮ್ಮನ್ನು ಮರೆತು ಗುರಿ-ದೆಸೆಯಿಲ್ಲದೆ
ರಂಬೆಯಿಂದ ಕೊಂಬೆಗೆ ಕೊಂಬೆಯಿಂದ ರಂಬೆಗೆ ಹಾರುತ್ತಿದೆ
ಒಬ್ಬರನ್ನೊಬ್ಬರು ಕೊಂಡಾಡುವ ಗುಣ ಈ ಪ್ರಕೃತಿಯಲ್ಲಿದ್ದರೆ
ನಾವು ಬೇರೆಯವರನ್ನು ಕೊಂಡಾಡಲು ಏನು ಕಷ್ಟ?

- ಶ್ರೀ ಹರಿ



10-03-2012

ಆದರದಿಂದ ಕರೆಯುತ್ತಿರುವ ಕತ್ತಲು
ಆದರದಿಂದ ಕರೆಯುತ್ತಿರುವ ನಿಶ್ಶಬ್ದ
ಪ್ರೀತಿಯ ಆದರದಿಂದ ಕರೆಯುತ್ತಿರುವ
ನಾನು ಅಲ್ಲದ ನಾನು ದೇವರ ಜೊತೆಗೆ
ನಾವೆಲ್ಲ ಸೇರಿಕೊಳ್ಳೋಣವೆಂದು ಕರೆಯುತ್ತಿರುವರು !

ದೇವರನ್ನು ನೋಡದಿರುವ ಕತ್ತಲು
ತಾನು ದೇವರನ್ನು ನೋಡಲು ಕಣ್ಣಿಲ್ಲದ ಕಾರಣ
ನಾನು ಇಲ್ಲದ ನನ್ನಿಂದ
ದೇವರನ್ನು ಅನುಭವಿಸಲು ನನ್ನನ್ನು ಕರೆಯುತ್ತಿರುವ ರೀತಿ
ಮನುಷ್ಯನಿಗೆ ಕತ್ತಲೆಡೆಗಿರುವ ಪ್ರೀತಿ ಅರಿವಾಗುತ್ತದೆ !

ಕಿವಿ ಇಲ್ಲದ ನಿಶ್ಶಬ್ದಕ್ಕೆ
ತಾನು ದೇವರ ನೋಡಲು ದೃಷ್ಟಿ ಇಲ್ಲದ ಕಾರಣ
ನಾನು ಇಲ್ಲದ ಅದರಿಂದ
ದೇವರನ್ನು ಅನುಭವಿಸಲು ಕಾತರದಿಂದ ಕರೆಯುತ್ತಿರುವ ರೀತಿ
ಮಾನವನ ಮೇಲೆ ನಿಶ್ಶಬ್ದಕ್ಕಿರುವ ಸ್ನೇಹವನ್ನು ತಿಳಿಸುತ್ತದೆ!

ನನ್ನಲ್ಲೇ ಇರುವ ನಾನು ಇಲ್ಲದ ಅದು
ದೇವರನ್ನು ಅನುಭವಿಸಲು ಇಂದ್ರಿಯಗಳಿಲ್ಲವಾದ ಕಾರಣ
ಭಕ್ತಿಯಿಂದ ನಾನು ಇಲ್ಲದ ಅದು
ನಮಿಸಿ ಕರೆಯುತ್ತಿರುವುದನ್ನು ಕಂಡರೆ
ಈ ಮಾನವ ವಿಶ್ವದಲ್ಲಿ ಅತಿ ಶ್ರೇಷ್ಠವಾದ ಸೃಷ್ಟಿ

- ಶ್ರೀ ಹರಿ





12-03-2012

ಮನಸ್ಸು ಮೋಡದಂತೆ
ಭಾವನೆಗಳ ಹನಿ ಹನಿಗಳು ಕೆಳಗಿಳಿದಂತೆ
ಕೆಳಗಿಳಿದ ನೀರು ಕೆರೆ-ಹಳ್ಳ ನದಿಗಳಾಗುವಂತೆ
ಉದ್ದೇಶಗಳು ಸರಿ- ಉದ್ದೇಶಗಳು, ಬೇಡದ ಉದ್ದೇಶಗಳು ಜೊತೆಗಿರುವಾಗ
ಉದ್ದೇಶಗಳಿಗೆ ನಾವು ಕಾಲ ನೀಡಿದರೆ
ಉದ್ದೇಶಗಳು ತಿಳಿಯಾಗಿ ಸರಿ ಉದ್ದೇಶಗಳನ್ನು ಅಳವಡಿಸಿಕೊಳ್ಳೋಣ!

ಸರಿ ಉದ್ದೇಶಗಳ ಗುಂಪು
ಒಂದು ಸಂಕಲ್ಪ ಮಾಡುವ ಶಕ್ತಿಯಾಗಿರುವಂತೆ
ಎಲ್ಲ ರೀತಿಯಲ್ಲಿ ನಮ್ಮ ಹಿತವಿದೆಯೆಂದು ತಿಳಿದು
ಸಂಕಲ್ಪಸಿದ್ದಿಯಾಗಲು ಬೇಕಾದ ನೆನಪುಗಳ ಜೋಡಿಸಿದರೆ
ಕಾಲ ಸಂಕಲ್ಪವನ್ನು ಪ್ರಯೋಗಿಸಿಕೊಂಡು
ಸಂಕಲ್ಪ ಕಾರ್ಯಸಿದ್ಧಿಯಾಗಲು ಏನೇನೂ ಸಂಕೋಚವಿಲ್ಲ!

ಹಿತಕರ ಭಾವನೆಗಳೇ ದೇವರನ್ನು ಪೂಜಿಸುವ ಹೂಗಳಾದರೆ
ಕೆಟ್ಟ ಭಾವನೆಗಳಿಗೆ ಕಷ್ಟಗಳ ತರಿಸುವ
ತಲೆ ಮೇಲೆ ಬೀಳಿಸುವ ಕಲ್ಲು ಎಂದು
ನೆಮ್ಮದಿಯಿಂದ ಭಾವನೆಗಳನ್ನು ತಿಳಿಪಡಿಸುತ್ತ
ನಮ್ಮ ನೆನಪುಗಳು ದೇವರ ನಾನಾ
ಅವತಾರವೆಂದು ತಿಳಿದು

ಹಿತಭಾವನೆಗಳ ನೆನಪಿನ ಜೋಡಣೆ
ಮನಸ್ಸಿಗೆ ಅತಿಯಾದ ಸಂತೋಷ - ಸಂತಸ ನೀಡಿ
ನನಗಾಗಲಿ ನಮಗಾಗಲಿ ಸಮಾಜ
ಹಿತ ಬಯಸುವ ಭಾವನೆಯಿಂದ
ನೆನಪಿನ ಖಜಾನೆ ಉಪಯೋಗಿಸಿ
ನೆರಳಿಲ್ಲದ ಪೂರ್ಣದಲ್ಲಿ ಬೆರೆಯೋಣ



- ಶ್ರೀ ಹರಿ



www.sriharikhoday.com

13-03-2012

ಏನೂ ಇಲ್ಲ ಎಂದು ಹೇಳುವುದೇ ಮೊದಲು
ಒಂದು ಪ್ರಾರಂಭ ಇದೆ ಎಂದರೆ
ಕೆಲಸಗಳು ತಾನಾಗಿ ನಡೆಯಲಾರಂಭಿಸುವುದು !

ವಿಶ್ವದ ಸೃಷ್ಟಿಯಲ್ಲಿ ಏನೂ ಕೊರತೆಯಿಲ್ಲದೆ
ಎಲ್ಲವೂ ಇದೆ ಅದನ್ನು ನಾವು ಹುಡುಕಿ
ಸಂದರ್ಭಕ್ಕನುಗುಣವಾಗಿ ಜೊತೆಗಿರುವುದರ
ಜೊತೆ ಜೋಡಣೆಯೇ ಸುಖದ ಹಾದಿ !

ಅವರಷ್ಟೆ ನನಗೂ ಇದೆ ಅವರಷ್ಟೇ ನನ್ನಲ್ಲೂ ಇದೆ ಎಂದರೆ
ವನದೇವತೆ ನಮ್ಮ ತೃಪ್ತಿಯನ್ನು ಅರಿತು
ನಮ್ಮ ಬೇಡಿಕೆಯ ಮೇಲೆ ಕಣಜದಲ್ಲಿ
ಹೆಚ್ಚಿನ ದಾಸ್ತಾನನ್ನು ತುಂಬುವಳು !

ನನ್ನ ಬಣ್ಣ ಕಪ್ಪು ಇದೆ ಎಂದು ದುಃಖಪಡದೆ
ನಾವು ಅವರಷ್ಟೆ ರೂಪವತಿ ಎಂದು ಅಸೂಯೆಪಡದೆ
ಸಂತಸದ ಧ್ವಜ ಮನದಲ್ಲಿ ಹಾರಿಸುವುದೇ ಸುಖ !

ಇದು ನನ್ನ ಕೆಲಸಕ್ಕೆ ಬೇಕಾಗಿದೆ
ಇಲ್ಲದ್ದಲ್ಲಿ ನನ್ನ ಕೆಲಸಕ್ಕೆ ಅಡಚಣೆಯಾಗುವುದೆಂದು
ನಾನು ಸುಮ್ಮನೆ ಅನಿಸಿ ಅನಿಸಿಕೊಂಡರೆ

ಜಗನ್ಮಾತೆಯಾದ ನಮ್ಮ ಭೂತಾಯಿ
ನಮ್ಮ ಪ್ರಯತ್ನವಿಲ್ಲದೆ
ನಮ್ಮ ಬೇಡಿಕೆಗಳು ಹಿತ್ತಲಲ್ಲಿ ಸಜ್ಜಾಗುವುವು !

- ಶ್ರೀ ಹರಿ



14-03-2012

ಮಿತಿಯಿಲ್ಲದ ವಿಶ್ವದ ಆಯಸ್ಸು
ದಿಕ್ಕು-ದೆಸೆಗಳು ಅಳಿಯಲಾಗದ ವಿಶ್ವ
ಆಳ-ಅಳತೆಗಳು ವಿಶ್ವದಲ್ಲೇ ಇಲ್ಲ

ಎಲ್ಲವೂ ಅನಂತವಾಗಿರುವ ಸತ್ಯ
ಮಾನವನು ಅಳತೆ ಎಂಬ ಪದವನ್ನು ಸೃಷ್ಟಿಸಿ
ಸಾವು-ನೋವು, ಉದ್ದ ಅಗಲ ಎತ್ತರ ಆಳಗಳ
ಪ್ರಮಾಣಗಳನ್ನು ಸೃಷ್ಟಿಸಿ

ತಾನು ತನ್ನಲ್ಲಿದ್ದ ಅನಂತವನ್ನು
ಅನಂತದಲ್ಲಿ ಬೆರೆಸಿ ಅದನ್ನು ಅನುಭವಿಸಲು ತಿಳಿಯದೆ
ಸಾಮಾನ್ಯ ಸುಖಗಳಿಗೆ ಮೊರೆಯಾಗಿ
ಇಲ್ಲ ಇದೆ ಎಂಬ ಕೊನೆಯಿರದ ಕಣಿವೆಯಲ್ಲಿ ಸಿಲುಕಿ
ಹೊರಬರಲಾರದೆ ಕಷ್ಟಪಡುತ್ತಿದ್ದಾನೆ !

ಸಮುದ್ರದ ನೀರು ಬಾವಿ ನೀರಿಗೆ
ಹೇಗೆ ಅಳತೆಯಾಗುವುದಿಲ್ಲವೋ
ಒಂದು ಪಾತ್ರೆಯಲ್ಲಿರುವ ಆಕಾಶ
ನಭೋ ಮಂಡಲವನ್ನು ಹೋಲಿಸಲಾಗುವುದಿಲ್ಲವೋ

ನಾವು ಸಮುದ್ರವಾಗುವ ಸ್ಥಿತಿಯಿಂದ
ಬಾವಿಯ ನೀರಿನ ಅಳತೆಯಲ್ಲಿ ಮುಳುಗಿ
ಸತ್ಯದ ಅರಿವಾಗದೆ ಅತಿ ಕಡಿಮೆ ಸಾಧನೆ ಮಾಡಿ
ಮುಪ್ಪನ್ನು ಅಪ್ಪಿ ಕುಳಿತಿದ್ದಾನೆ ಈ ಮಾನವ !

ಬೆಳಕಿನ ಗುಹೆಯಲ್ಲಿ ಸಿಲುಕಿರುವ ನಾವುಗಳು
ಕತ್ತಲಿನ ಸತ್ಯವನ್ನು ಅರಿತು
ನಮ್ಮ ನಿಜ ಜೀವನದ ಬೆಳಕಿಗೆ
ಜೀವ ನೀಡಬೇಕಾಗಿದೆ ಈಗ

- ಶ್ರೀ ಹರಿ



www.sriharikhoday.com

15-03-2012

ಏಕ ಕಾಲದಲ್ಲಿ ವಿಶ್ವವನ್ನೇ ಅರಿಯಬಲ್ಲ
ಉಸಿರಾಡುತ್ತ ಬೆಳೆದು ಸಾಯುವ ವಸ್ತು ಎಂದರೆ
ಅದು ಮಾನವ ಮಾತ್ರ !

ಭೂತ ಭವಿಷ್ಯ ವರ್ತಮಾನಗಳನ್ನು ಗಮನಿಸಿ
ತನ್ನ ವಿವೇಕಬುದ್ಧಿಯಿಂದ ನಿರ್ಧಾರಗಳನ್ನು ತೆಗೆದುಕೊಂಡು
ಪ್ರಗತಿಯ ಸಾಧಿಸುವವನೇ ಮಾನವ!

ಕಾಲದ ಬೆಳವಣಿಗೆಗೆ ಅನುಕೂಲ ಸ್ಥಿತಿಗಳನ್ನು
ವಿಶ್ವದ್ಯಾದ್ಯಂತ ಪ್ರಗತಿಗನುಗುಣವಾಗಿ
ಯೋಚಿಸಿ ಜಗತ್ತಿನ ಎಲ್ಲರ ಮನದಲ್ಲಿ
ಯೋಗ್ಯ ನಿರ್ಣಯಗಳನ್ನು ಮನದಲ್ಲಿ ಮೂಡಿಸಿ
ಅಸಾಧ್ಯ ಸಾಧನೆಗಳನ್ನು ಮಾಡುವವನು ಮಾನವ ಮಾತ್ರ !

ಕಣ್ಣಿಗೆ ಕಾಣದ ನಿಗೂಢ ಇರುವಿಕೆಗಳನ್ನು
ತನ್ನ ಅರಿವು ಪ್ರಜ್ಞೆಗಳಿಂದ ರೂಪಿಸಿ
ತನ್ನ ಅಭಿಪ್ರಾಯಗಳನ್ನು ಬಣ್ಣ ಬಣ್ಣಗಳ ಸತ್ಯದಿಂದ
ವಿಶ್ವಕ್ಕೆ ಅರಿವು ತಿಳಿಸಿ ಹೇಳಿದ್ದು ಮುಗಿಯಿತು ಎಂದು ಹೇಳದೆ

ಹೊಸ ಹೊಸ ಸಾಧನೆಗಳಿಗೆ ಪ್ರಜ್ಞೆಯ
ಪಯಣವನ್ನು ಮುನ್ನಡೆಸಿಕೊಂಡು
ಹಿಂದೆ ನೋಡದೆ ಇರುವವನು
ವಿಶ್ವದ ವಿಸ್ಮಯಸೃಷ್ಟಿ ಮಾನವ ಮಾತ್ರ ಅದು ಮಾನವ ಮಾತ್ರ!

- ಶ್ರೀ ಹರಿ





16-03-2012

ಪ್ರಕೃತಿ ತನ್ನ ಹೋಲಿಕೆ ಎಂದು ಸೃಷ್ಟಿಸಿತು ಸ್ತ್ರೀಯನ್ನು
ಏನೂ ಬಯಸದೆ ಬೆಳೆಸುವ ಮನೋವೃತ್ತಿ ಸ್ತ್ರೀಯದು
ಬೆಳೆಸುವುದೇ ತನ್ನ ಮೂಲ ವೃತ್ತಿ ಎಂದು ಕಲಿಸಿದ್ದು ಸ್ತ್ರೀ !

ಮಾತಾಡದೆಯೇ ಪ್ರೀತಿಯನ್ನು ವ್ಯಕ್ತಪಡಿಸುವ ಅಭಿನಯಶಿಲ್ಪಿ ಸ್ತ್ರೀ
ಜೀವನದಲ್ಲಿ ಮರೆಯಲಾಗದ ಕಷ್ಟಗಳನ್ನು ಮರೆಸಬಲ್ಲವಳು ಸ್ತ್ರೀ
ಕ್ಷಮೆಯೆಂಬ ಮೂಲ ಭಾವನೆಯ ಹುಟ್ಟಿಸಿರುವವಳು ಸ್ತ್ರೀ

ತಾಯಿಯೆಂದು ಹೇಳಿಕೊಳ್ಳುವ ಅರ್ಹತೆ ಸ್ತ್ರೀಯದು
ಮನುಷ್ಯನಿಗೆ ತನ್ನ ಜವಾಬ್ದಾರಿಯನ್ನು ಮಾತಾಡದೇ ಕಲಿಸುವವಳು ಸ್ತ್ರೀ
ಸರಿ - ತಪ್ಪುಗಳ ಅರಿತು ಕಣ್ಣಳಲ್ಲೇ ಎಲ್ಲಾ
ಕಷ್ಟಗಳನ್ನು ತೊಳೆದುಬಿಡುವವಳು ಸ್ತ್ರೀ

ಗರ್ಭದ ಕಷ್ಟಗಳನ್ನು ಮರೆತು
ಮಾನವನ ಏಳಿಗೆಗೆ ಕೊರಗನ್ನು ಹೇಳದೆ ಬೆಳೆಸುತ್ತಿರುವವಳು ಸ್ತ್ರೀ
ದಣಿದು ಬಂದ ಪತಿಗೆ ಎರಡು ಮಾತುಗಳಲ್ಲಿ
ದುಡಿದ ನೋವೆಲ್ಲಾ ಮಾಯ ಮಾಡುವವಳು ಸ್ತ್ರೀ!

ಮನದಲ್ಲಿ ಜೀವನದ ಕೇಂದ್ರಬಿಂದುವಾಗಿ
ನಾನಾ ಆಸೆಗಳ ನಾನಾ ಕಲ್ಪನೆಗಳ
ಸಂಗೀತ ಅಭಿನಯ ಪ್ರೀತಿ ಪ್ರೇಮ
ರೂಪ ರಸಿಕತೆ ಮನದ ಹಗುರ
ದುಃಖ ಸಂತಸ - ಉಲ್ಲಾಸದ ಜೊತೆ

ಎಲ್ಲರ ಜೊತೆ ಜೀವಿಸುತ
ಎಲ್ಲದರಲ್ಲಿ ಸುಖವನ್ನು ತರ್ಜುಮೆ ಮಾಡುವ
ಸಾಧ್ಯತೆ ಸ್ತ್ರೀಗೆ ಮಾತ್ರ !



- ಶ್ರೀ ಹರಿ



www.sriharikhoday.com

17-03-2012

ಸುಖದ ಬಯಕೆ ನಮ್ಮ ಇರುವಿಕೆಯ ನೆರಳು
ಬಯಸುವುದು ಧರ್ಮವಾದರೆ
ಬಯಸುವುದಕ್ಕಿಂತ ಹೆಚ್ಚಿನ ಸುಖ ಲಭ್ಯವಾದರೆ
ಜೀವನದಲ್ಲಿ ಎಲ್ಲರ ಜೊತೆಗೆ ಹಂಚಿ ಎಲ್ಲರ ಜೊತೆ ಬೆರೆತಂತೆ!

ತೃಪ್ತಿ ಇಲ್ಲದ ಕೊನೆ ಅರಿಯದ ಸುಖದ ಬಯಕೆ
ಅಮೃತವಾಗದೆ ಜೀವನದಲ್ಲಿ ವಿಷವಾಗಿ ಹೋಗುವುದು
ನಮ್ಮೆಲ್ಲಾ ಅನಿಸಿಕೆಗಳು ನಮ್ಮ ಪಂಚೇಂದ್ರಿಯಗಳ ಬೇಡಿಕೆ
ಇಂದ್ರಿಯಗಳ ಉದ್ದೇಶದ ಜೋಡಣೆಯೇ ನಮಗೆ ಸುಖದ ಅನುಭವ!

ಸುಖವು ಬರಿ ನಮ್ಮ ನೆನಪಿನ ನೆನಪುಗಳು
ನೆರಳು ಕತ್ತಲಲ್ಲಿ ಇಲ್ಲವಾಗುವಂತೆ
ನಾನು ನನ್ನದು ಇಲ್ಲವಾದಾಗ ನಮ್ಮ ನೆರಳೂ ಇಲ್ಲದಾಗ
ಬಯಕೆಗಳ ಸುಖ ಅಪೇಕ್ಷಿಸಿದರೆ

ಬಯಕೆಗಳ ಮೀರಿ ಬರುವ ಸುಖದ ಅನುಭವ
ಬಯಕೆಗಳನ್ನೇ ಮೀರಿ ಕೊನೆಬರದ ಸುಖದ ಸ್ಥಿತಿ
ಜೀವನವೆಲ್ಲಾ ಅಮೃತಮಯವಾಗಿ
ಜೊತೆಗಿರುವವರೂ ಅಮೃತವನ್ನು ಸೇವಿಸಿ ಕಾಣುವ ಎದುರಲ್ಲಿ ಬೆರೆತು

ಅಡೆ-ತಡೆಯಿಲ್ಲದ ಸುಖದ ಅನುಭವ
ಉಸಿರಾಡುವವರೆಗೂ ಜೊತೆ ಬರುವ ಸುಖ
ಸುಖಪಡುವ ನಮ್ಮಯ ಗಳಿಗೆ
ಸುಖವು ಭಾಗಿಯಾಗಲು ಕಾಯುತ್ತಿದೆ!

- ಶ್ರೀ ಹರಿ





www.sriharikhoday.com

19-03-2012

ನಮ್ಮದೇ ಅಲ್ಲದ ಹಾದಿಗಳು
ನನ್ನನ್ನು ಎಳೆದುಕೊಂಡು ಹೋಗಲು
ನನ್ನ ಜೊತೆಗೆ ಬಾ ಎಂದು ಬಯಸುತ್ತಿರುವ ಎಳೆತ
ನನ್ನ ಇರುವಿಕೆಯನ್ನು ಮರೆಸಿ ಅನಂತದಲ್ಲಿ ಬೆರೆಸಿದೆ!

ಬಣ್ಣ ಬಣ್ಣಗಳ ಮಿಲನ ಬಣ್ಣ ಬಣ್ಣಗಳ ಮಿಲನದ ಚೇಷ್ಟೆ
ನನ್ನ ನಿಶ್ಶಬ್ದಗಳ ಪ್ರತಿಧ್ವನಿಗಳು
ಉಲ್ಲಾಸದಿಂದ ಎಲ್ಲಾ ದೆಸೆಗಳಲ್ಲಿ ಮಿನುಗುತ
ಎಲ್ಲಾ ದೆಸೆಗಳಲ್ಲಿ ಕಾಮನಬಿಲ್ಲುಗಳನ್ನು ಮೂಡಿಸಿಕೊಂಡು
ನನ್ನ ನಿಜ ಇರುವಿಕೆಯನ್ನು ಪ್ರತಿಬಿಂಬಿಸುತ್ತಿದೆ!

ನನ್ನ ಇರುವಿಕೆಯನ್ನು ಪ್ರತಿಬಿಂಬಿಸಿ ಕಲಿಸಿದ್ದರೂ
ಕಲ್ಲಾಗಿದ್ದರೂ ಕಲ್ಲಲ್ಲಿ ಮೃದು ತುಟಿಗಳ ಚುಂಬನಕ್ಕೆ
ಕೊಚ್ಚೆಯಲ್ಲಿ ಕೊಳೆಯುತ್ತಿರುವ ಕೊಳೆಯಲಾಗದ ಕಸದ ಕಮಲಗಳು
ಸುವಾಸನೆಗೆ ಆದಿಯಾಗಿರುವ ದುರ್ಗಂಧಗಳು
ಗೆಳೆತನದ ಮಾತುಗಳಲ್ಲಿ ಕೊಳೆಯುತ್ತಿರುವ ಗೆಳೆತನ

ಸತ್ಯದ ರೂಪಕ್ಕೆ ಹಿನ್ನಲೆ ಇಲ್ಲದೆ
ಒಲುಮೆಯ ಸಪ್ತಸ್ವರಗಳಿಗೆ ಬಿದಿರಿನ ಕೊಳಲು ಸಿಗದೆ
ಕೋಟಿಗಳ ಜೊತೆಗಿದ್ದರೂ ಕೈ ಚಾಚುತ್ತಿರುವ ರಾಜಕಾರಣಿಯ ಬಡತನ
ದಿಗಂತಗಳು ದಿಕ್ಕನ್ನು ತೋರಿಸಲು ಹಿಂಜರಿಯುತ
ನಿಶ್ಶಬ್ದ ಮನ ಭ್ರಮಣೆಯಿಂದ ತೆರೆಯಲಾಗದ ಸದ್ದಿನ ಸಪ್ಪಳಗಳು

ರಾತ್ರಿ ಹಗಲುಗಳ ಈ ದಿನ ನನಗೆ ರಾತ್ರಿಯಾಗಲು ಬೇಜಾರು
ಬೆಳಕು ಈ ದಿನ ಹೋಗಲಾಗಲಿಲ್ಲ ಬೇಜಾರೆಂಬ ಸರದಿ ನಿದ್ರೆ
ಜಾಗರೂಕತೆಯ ಮಾತುಗಳನ್ನು ಕೇಳಿಸಿಕೊಂಡು
ನಾನು ಮೂಕನಾಗಿರುವೆನು!



- ಶ್ರೀ ಹರಿ

19-03-2012

ನೋವನ್ನು ಅಳಿಸುವ ನೆನಪುಗಳು
ನೋವನ್ನು ಮರೆಸುವ ನಮ್ಮ ಹೊಸ ಹೊಸ ಮನಸುಗಳು
ನೋವನ್ನೇ ತಿಳಿಯದ ಎಳೆ ಮನಸುಗಳು
ನನ್ನ ಮನದ ಆಳಕ್ಕೆ ಇಳಿದು ನಾಲ್ಕು ದಿಕ್ಕುಗಳನ್ನು ಮಿನುಗಿಸುತ
ನನ್ನ ಎಳೆಯ ಮನಗಳು ಜೊತೆಯಾಡಿಸುತ್ತಿರುವ
ಹೊಸ ಬಣ್ಣಗಳು ವಿಚಿತ್ರವೇ ವಿಚಿತ್ರ !

ಭೂತ ಭವಿಷ್ಯ ವರ್ತಮಾನಗಳು ಅರಿವಾಗುತ್ತಿರುವ ನನಗೆ
ಮರುಭೂಮಿಯಲ್ಲಿ ನೀರನ್ನು ಹರಿಸುವ ಆಸೆ
ಭಾವವಾಗಿ ಹರಿಸುತ್ತಿರುವ ಈ ಕಾಗದ
ಐಶ್ವರ್ಯ ಸುಟ್ಟುಹೋಗಿ ಮೌಲ್ಯ ಅರಿಯದ ಆರ್ಥಿಕ ಸೃಷ್ಟಿ
ಸಿರಿತನ ಬಡತನ ಇರುವ ಅಂತರಗಳು ಅರಿಯದ ಇರುವಿಕೆ

ಸೂರ್ಯನನ್ನು ಕಾಯುತ್ತ ಕತ್ತಲನ್ನೂ ಕಾಯುತ್ತ
ಕಾಲ, ಸಮಯ ಶರೀರಗಳನ್ನೂ ಕಾಯುತ್ತ
ಸಮೃದ್ಧಿ ನಮ್ಮನ್ನು ಬಳಸಿಕೊಳ್ಳಲು ಕಾಯುತ್ತ
ಬಳಸಿಕೊಳ್ಳಲು ತಿಳಿಯದೆ ಅದೇ ಭಕ್ತಿಯಿಂದ ಬೇಡುತ್ತಿದ್ದರೆ
ಸಾವಿಲ್ಲದ ಯೌವ್ವನ ಕೊನೆಬರದ ಗೆಳೆತನ

ಎಂದೂ ಮುಗಿಯಲಾರದ ದಿಗಂತಗಳು
ವಿಶ್ವವೇ ಒಂದು ಹಳ್ಳಿಯಾಗಿ
ದಶಕೋಟಿ ವರ್ಷಗಳೇ ನಮ್ಮ ವಿಮರ್ಶೆಗಳ ಅವಧಿಯಾಗಿ
ಜೀವನವೇ ಒಂದು ಆಶೀರ್ವಾದ
ನೋವಿಲ್ಲದ ಅಳತೆಯ ಆಳದಲ್ಲಿಳಿದು ಎಲ್ಲದರಲ್ಲಿ ಬೆರೆತು

ಇರುವಿಕೆಯಲ್ಲಿ ನಮ್ಮ ಇರುವಿಕೆಯನ್ನು ಕಳೆದುಕೊಂಡು
ಇರುವಿಕೆ ನೆರಳೇ ಇಲ್ಲದೆ
ನಮ್ಮ ನೆನಪನ್ನು ನೋಡಲು ಹಿಂಜರಿಯುತ್ತಿರಲು
ನಮ್ಮ ಸಂಬಂಧಗಳು ಮಾತ್ರ ಬೆಳಕೇ ಬೆಳಕು

- ಶ್ರೀ ಹರಿ



www.sriharikhoday.com

